ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮಾರ್ಚ್ 2011

ಬೆಲೆ ರೂ. 1.



## ನನಸಾಗಲಿ ಬಣ್ಣ ಬಣ್ಣದ ಕನಸು

# ಕರ್ನಾಟಕ ಸರ್ಕಾರದಿಂದ ದೆಹಲಿ ಕರ್ನಾಟಕ ಸಂಘಕ್ಕೆ ಒಂದು ಕೋಟಿ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ 1.50ಕೋಟಿ ಅನುದಾನ



ಸಂಘದ ಕಾರ್ಯಕಾರಿ ಸಮಿತಿ ಇತ್ತೀಚೆಗೆ ದೆಹಲಿಯಲ್ಲಿ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪನವರನ್ನು ಭೇಟಿ ಮಾಡಿ ದೆಹಲಿ ಕರ್ನಾಟಕ ಸಂಘಕ್ಕೆ ಒಂದು ಕೋಟಿ ರೂಗಳ ಅನುದಾನವನ್ನು ನೀಡುವಂತೆ ಮನವಿ ಮಾಡಿಕೊಂಡಿತ್ತು. ನಮ್ಮ ಮನವಿಯಂತೆ ಕರ್ನಾಟಕ ಸರ್ಕಾರದ 2011–12 ರ ಸಾಲಿನ ಬಜೆಟ್ ಮಂಡನೆಯಲ್ಲಿ 'ದೆಹಲಿ ಕರ್ನಾಟಕ ಸಂಘ' ಕ್ಕೆ 1 ಕೋಟಿ ರೂಪಾಯಿ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸುವರ್ಣ ಮಹೋತ್ಸವದ ಅಂಗವಾಗಿ ನಿರ್ಮಿಸಲಾಗುತ್ತಿರುವ ಶೈಕ್ಷಣಿಕ ಸಮುಚ್ಚಯಕ್ಕಾಗಿ 1 ಕೋಟಿ ರೂಪಾಯಿ ಹಾಗೂ ಶಾಲಾ ಮಕ್ಕಳ ಸಾರಿಗೆ ಸೌಲಭ್ಯಕ್ಕೆ ಎರಡು ಬಸ್‌ಗಳನ್ನು ಖರೀದಿಸಲು 50 ಲಕ್ಷ ರೂಪಾಯಿಗಳ ಅನುದಾನವನ್ನು ನೀಡಿದೆ. ಈ ವಿಶೇಷ ಅನುದಾನವನ್ನು ನೀಡಿದ ಸನ್ಮಾನ್ಯ ಮುಖ್ಯಮಂತ್ರಿಗಳಾದ, ಶ್ರೀ.ಬಿ.ಎಸ್. ಯಡಿಯೂರಪ್ಪ ಅವರಿಗೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಹಾಗೂ ದೆಹಲಿ ಕರ್ನಾಟಕ ಸಂಘದ ಪರವಾಗಿ ಕೃತಜ್ಞತೆಗಳು.

ಈ ಅನುದಾನವನ್ನು ದೊರಕಿಸಿಕೊಡಲು ನೆರವಾದ ದೆಹಲಿಯ ವಿಶೇಷ ಪ್ರತಿನಿಧಿ ಬೈಕೆರೆ ನಾಗೇಶ್ ಅವರಿಗೆ ನಮ್ಮ ವಿಶೇಷ ಧನ್ಯವಾದಗಳು.



ಅಭಿಮತ
ಸಂಪುಟ 21 ಸಂಚಿಕೆ 6
ಮಾರ್ಚ್ 2011, ಬೆಲೆ ರೂ. 1

## ಮನದ ಮಾತು

ರಾಷ್ಟ್ರದಲ್ಲಿಯೇ ಪ್ರಪ್ರಥಮ ಬಾರಿ ಪ್ರತ್ಯೇಕವಾಗಿ ಕೃಷಿ ಬಜೆಟ್ ಅನ್ನು ಮಂಡಿಸಿದ ಕೀರ್ತಿ ಕರ್ನಾಟಕ ಸರ್ಕಾರಕ್ಕೆ ಸಲ್ಲುತ್ತದೆ. ಇಡೀ ಆರ್ಥಿಕ ವ್ಯವಸ್ಥೆಯ ಮೂಲ ದ್ರವ್ಯವಾದ ಕೃಷಿ ಈತನಕ ಒಂದು ಸಾಮಾನ್ಯ ವಿಷಯವೆಂಬಂತೆ ಬಜೆಟ್‌ನಲ್ಲಿ ಬಿಂಬಿತವಾಗುತ್ತಿತ್ತು. ಮಾರುಕಟ್ಟೆಗೆ ಬರುವ ಎಲ್ಲ ಪದಾರ್ಥಗಳು (ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್, ಅಟೊಮೊಬೈಲ್ ಹಾಗೂ ಯಂತ್ರೋಪಕ 'ರಣಗಳನ್ನು ಹೊರತುಪಡಿಸಿ) ಕೃಷಿಕ ಉತ್ಪಾದಿಸಿದ ಉತ್ಪನ್ನಗಳ ಉಪಉತ್ಪನ್ನಗಳಾಗಿದ್ದರೂ 'ಕೃಷಿ' ಅಂದ ತಕ್ಷಣ ಅದು ಕೇವಲ 'ವ್ಯಯ' ಅಂದರೆ ವೆಚ್ಚದ ಬಾಬ್ತು, 'ಆಯ' ಅಂದರೆ ಹಣದ ಬರುವಿಕೆ ಇಲ್ಲಿ ಶೂನ್ಯ ಎಂಬ ಅಭಿಪ್ರಾಯ ಮೊದಮೊದಲು ಬೇರೂರಿತ್ತು. ಅದರಿಂದಲೇ ರೈತರಿಗೆ ವಿದ್ಯುತ್ ಉಚಿತ, ಗೊಬ್ಬರದ ಮೇಲೆ ಸಬ್ಸಿಡಿ, ಬೆಳೆವಿಮೆ, ಕಡಿಮೆ ಬಡ್ಡಿಯ ಸಾಲ ಇತ್ಯಾದಿ ಪ್ರಕಟನೆಗಳೊಂದಿಗೆ ಬಜೆಟ್ ಅನ್ನುವ ವಾರ್ಷಿಕ ಪ್ರಹಸನ ಮುಗಿದು ಹೋಗುತ್ತಿತ್ತು. ರೈತರ ಸಂಘಟನೆ ಇಡೀ ದೇಶದಾದ್ಯಂತ ಕೃಷಿಗೆ ಆದ್ಯತೆ ನೀಡಲು ಪ್ರತ್ಯೇಕ ಬಜೆಟ್‌ಗಾಗಿ ಆಗ್ರಹಿಸುತ್ತಲೇ ಇತ್ತು. ಆದರೆ ಈ ಬಹುವರ್ಷಗಳ ಒಕ್ಕೊರಲ ಬೇಡಿಕೆಗೆ ನಮ್ಮ ಕರ್ನಾಟಕದ ಮಾನ್ಯ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡ್ಯೂರಪ್ಪನವರು ಸ್ಪಂದಿಸಿ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿ ಇತಿಹಾಸ ಸೃಷ್ಟಿಸಿದರು; ರೈತರ ವದನಗಳಲ್ಲಿ ಮಂದಹಾಸ ಮೂಡಿಸಿದರು. ಅದಕ್ಕಾಗಿ ಅವರು ಅಭಿನಂದನಾರ್ಹರು.

ಮಾನ್ಯ ಮುಖ್ಯಮಂತ್ರಿಗಳು ಈ ಸಲದ ಬಜೆಟ್‌ನಲ್ಲಿ ಒಂದು ಕೋಟಿ ರೂಪಾಯಿ ವಿಶೇಷ ಅನುದಾನವನ್ನು ದೆಹಲಿ ಕರ್ನಾಟಕ ಸಂಘಕ್ಕೆ ಹಾಗೂ ಒಂದೂವರೆ ಕೋಟಿ ರೂಪಾಯಿಗಳ ಅನುದಾನವನ್ನು ಸುವರ್ಣ ಮಹೋತ್ಸವ ವರ್ಷಕ್ಕೆ ಪದಾರ್ಪಣೆ ಮಾಡಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಮೀಸಲಿಟ್ಟಿರುವುದು ದೆಹಲಿ ಕನ್ನಡಿಗರಿಗೆ ಅಪಾರ ಸಂತಸ ತಂದಿದೆ. ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡದ ಘನತೆಯನ್ನು ಎತ್ತಿಹಿಡಿದು ಕನ್ನಡ ಸಂಸ್ಕೃತಿಯ ಔನ್ನತ್ಯವನ್ನು ಪರಿಣಾಮಕಾರಿಯಾಗಿ ಬಿತ್ತರಿಸುವುದರ' ಮೂಲಕ ನಾವು ಅರ್ಥಪೂರ್ಣವಾಗಿ ಮಾನ್ಯಮುಖ್ಯಮಂತ್ರಿಗಳ ಹೃತ್ಪೂರ್ವಕ ಔದಾರ್ಯಕ್ಕೆ ಕೃತಜ್ಞತೆ ಸಲ್ಲಿಸಬೇಕಾಗಿದೆ. ಉದಾರ ಮನಸ್ಸಿನ ಸಂಸ್ಕೃತಿಪ್ರೇಮಿ ಮುಖ್ಯಮಂತ್ರಿಗಳ ಈ ನಿರ್ಧಾರದ ಹಿಂದೆ ಬೆಂಬಲವಾಗಿ ನಿಂತು ಅವಿರತ ಪರಿಶ್ರಮಿಸಿದ ಮಾನ್ಯ ಬೈಕೆರೆ ನಾಗೇಶ್ ಅವರನ್ನು ನಾವು ನೆನೆಯಲೇಬೇಕು. ಮಾನ್ಯಮುಖ್ಯಮಂತ್ರಿಗಳಿಗೆ ಹಾಗೂ ಬೈಕೆರೆ ನಾಗೇಶ್ ಅವರಿಗೆ ನನ್ನ ಅನಂತಾನಂತ ಧನ್ಯವಾದಗಳು.

ಕರ್ನಾಟಕಕ್ಕೆ ಸ್ವಲ್ಪ ನೆಮ್ಮದಿ ತಂದದ್ದು ಕೇಂದ್ರ ರೈಲ್ವೆ ಬಜೆಟ್. ರೈಲ್ವೆ ಭೂಪಟದಲ್ಲಿ ಕಂಡು ಕೇಳರಿಯದಿದ್ದ ಕೋಲಾರಕ್ಕೆ ಕೋಚ್ ಕಾರ್ಖಾನೆಯ ಭಾಗ್ಯ, ಹಲವು ಹೊಸ ರೈಲುಗಳು, ಕೆಲವು ಮಾರ್ಗಗಳು–ಹೀಗೆ ನಮ್ಮ ನಾಡು ಕೊಂಚ ಲಾಭ ಕಂಡಿದೆ. ಇದಕ್ಕೆ ಕೇಂದ್ರ ರೈಲ್ವೆ ರಾಜ್ಯ ಸಚಿವ ಶ್ರೀ ಮುನಿಯಪ್ಪನವರ ಅವಿರತ ಪರಿಶ್ರಮ, ಆಸಕ್ತಿ ಕಾರಣ ಎನ್ನುವುದರಲ್ಲಿ ಎರಡು ಮಾತಿಲ್ಲ. ಶ್ರೀಯುತರು ಅಭಿನಂದನಾರ್ಹರು. ಆದರೆ ಬಹಳ ದಿನಗಳ ಬೇಡಿಕೆ ಇನ್ನೂ ಈಡೇರಿಲ್ಲ. ತ್ವರಿತಗತಿಯಲ್ಲಿ ಬೆಂಗಳೂರು–ಮೈಸೂರು ದ್ವಿಮಾರ್ಗ ಆಗಬೇಕಿದೆ. ಈ ಬಗ್ಗೆ ಬಜೆಟ್‌ನಲ್ಲಿ ಅತ್ಯಂತ ಕ್ಷೀಣ ಧ್ವನಿ. ಮಾನ್ಯ ಮುನಿಯಪ್ಪನವರು ಇದೂ ಸೇರಿದಂತೆ ಹತ್ತು ಹಲವು ಅಗತ್ಯಗಳ ಬಗ್ಗೆ ತೀವ್ರ ಕಾಳಜಿ ತೋರುತ್ತಾರೆಂಬ ಭರವಸೆ ನಮ್ಮದು.

ವಿಶ್ವದಾದ್ಯಂತ ಆಚರಿಸಲಾಗುವ, ಮಾರ್ಚ್ 8, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಈ ಬಾರಿ ಮಹತ್ವಪೂರ್ಣವಾದದ್ದು. 1911ರಲ್ಲಿ ಪ್ರಪ್ರಥಮವಾಗಿ ಅಂಗೀಕಾರವಾದ ಮಹಿಳಾ ದಿನಕ್ಕೆ ಈಗ ಶತಮಾನೋತ್ಸವದ ಸಂಭ್ರಮ. 19ನೇ ಶತಮಾನದ ಕೊನೆಯಲ್ಲಿ ಶೋಷಿತ ಮಹಿಳೆಯರು ಮತ ಚಲಾಯಿಸುವ ಹಕ್ಕು ಮತ್ತು ಸಮಾನತೆಗಾಗಿ ನಡೆಸಿದ ಹೋರಾಟದ ಫಲವೇ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ. ನೂರಾರು ದೇಶಗಳಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸ್ತ್ರೀ ಸಮಾನತೆಯ ಸಾಂಕೇತಿಕ ದಿನವನ್ನಾಗಿ ಆಚರಿಸಲಾಗುತ್ತದೆ. ಇದೇ ಮಾರ್ಚ್ 19ರಂದು ಮಹಿಳಾ ದಿನಾಚರಣೆಯನ್ನು ಆಚರಿಸುವ ಮೂಲಕ ದೆಹಲಿ ಕರ್ನಾಟಕ ಸಂಘ ಮಹಿಳಾ ಸಬಲತೆಯನ್ನು ರಾಷ್ಟ್ರದ ರಾಜಧಾನಿಯಲ್ಲಿ ಸಾರಲಿದೆ. ಬನ್ನಿ, ಜೊತೆಗೂಡಿ ಮುಂದೆ ಸಾಗೋಣ.

ರಂಗಿನ ಹೋಳಿ ಎಲ್ಲರ ಬದುಕಿನ ಬಣ್ಣ ಬಣ್ಣದ ಕನಸುಗಳನ್ನು ನನಸಾಗಿಸಲಿ–ಇದು ನಮ್ಮ ಆಶಯ.

❑ ಉಷಾ ಭರತಾದ್ರಿ

**ಪ್ರಧಾನ ಸಂಪಾದಕರು**
ಉಷಾ ಭರತಾದ್ರಿ

**ಸಂಪಾದಕ ಮಂಡಳಿ**
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ
ಚಂದ್ರಶೇಖರ ಎನ್.ಪಿ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು**
ಡಾ. ವೆಂಕಟಾಚಲ ಜಿ. ಹೆಗಡೆ

**ಉಪಾಧ್ಯಕ್ಷರು**
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

**ಪ್ರಧಾನ ಕಾರ್ಯದರ್ಶಿ**
ಸಿ.ಎಂ. ನಾಗರಾಜ

**ಖಜಾಂಚಿ**
ಕೆ.ಆರ್. ರಾಮಮೂರ್ತಿ

**ಜಂಟಿ ಕಾರ್ಯದರ್ಶಿಗಳು**
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

**ಸಮಿತಿ ಸದಸ್ಯರು**
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡಿ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ಅಂತರಾಳದಿಂದ. . .

ಹೊಸ ಆಶಯಗಳೊಂದಿಗೆ

ದೆಹಲಿ ಕರ್ನಾಟಕ ಸಂಘದ ನೂತನ ಕಾರ್ಯಕಾರಿ ಸಮಿತಿ ಹೊಸ ಆಶಯಗಳೊಂದಿಗೆ, ಉತ್ಸಾಹದೊಂದಿಗೆ ಕಾರ್ಯ ನಿರತವಾಗಿದೆ. ಹತ್ತು ಹಲವಾರು ಕಾರ್ಯಕ್ರಮಗಳು, ಇನ್ನೂ ಹಲವಾರು ಕಾರ್ಯಕ್ರಮಗಳ ಯೋಜನೆಗಳು... ಬಿಡುವಿಲ್ಲದ, ದಣಿವಾರದ ಉತ್ಸಾಹ. ಇದೇ ದೆಹಲಿ ಕರ್ನಾಟಕ ಸಂಘದ ಜೀವಾಳವಾಗಬೇಕು. ಇದೆಲ್ಲದರ ನಡುವೆ ಕಾರ್ಯಕಾರಿ ಸಮಿತಿಯವರು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರನ್ನು ಭೇಟಿಯಾಗಿ ದೆಹಲಿ ಕರ್ನಾಟಕ ಸಂಘದ ಹಲವಾರು ಹಂಬಲಗಳನ್ನು ತೋಡಿಕೊಂಡರು. ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಬಂದಿದ್ದ ಸದಸ್ಯರು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಕೋಟಿ ರೂಪಾಯಿಗಳ ಸಹಾಯಧನವನ್ನು ನೀಡುವಂತೆ ಒತ್ತಾಯಿಸಿದರು. ನಮ್ಮ ಎಲ್ಲ ಅಹವಾಲುಗಳನ್ನು ಕೇಳಿದ ಮಾನ್ಯ ಮುಖ್ಯಮಂತ್ರಿಗಳು ಅದೇ ಮನವಿ ಪತ್ರದ ಮೇಲೆ ತಮ್ಮದೇ ಅಕ್ಷರಗಳ ಮೂಲಕ ಸಂಘಕ್ಕೆ ಈ ಬಾರಿಯ ಮುಂಗಡ ಪತ್ರದಲ್ಲಿ ಒಂದು ಕೋಟಿ ನೀಡುವುದಾಗಿ ಬರೆದರು. ಈ ಲಿಖಿತ ರೂಪದ ಭರವಸೆ ಈಗ ಮುಂಗಡಪತ್ರದಲ್ಲಿ ಮೂಡಿ ಬಂದಿದೆ. ಅಂದರೆ ಘನ ಕರ್ನಾಟಕ ಸರ್ಕಾರ ದೆಹಲಿ ಕರ್ನಾಟಕ ಸಂಘಕ್ಕೆ ಅದರ ಕಟ್ಟಡದ ಅಭಿವೃದ್ಧಿಗೆ ಹಾಗೂ ವಿಸ್ತಾರಕ್ಕೆ ಒಂದು ಕೋಟಿ ರೂಪಾಯಿಗಳನ್ನು ಅಧಿಕೃತವಾಗಿ ಮಂಜೂರು ಮಾಡಿದೆ.

ದೆಹಲಿ ಕರ್ನಾಟಕ ಸಂಘಕ್ಕೆ ಈ ಬಗೆಯ ಸಹಾಯಹಸ್ತ ನೀಡಿದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರಿಗೆ ನಾವು ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಇದಲ್ಲದೆ, ಈ ಭೇಟಿಗೆ ಅನುವು ಮಾಡಿಕೊಟ್ಟದ್ದಲ್ಲದೆ, ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡ ಶಾಲೆಯ ಬಗ್ಗೆ ಮುಖ್ಯಮಂತ್ರಿಗಳಿಗೆ ವಿವರ ನೀಡಿದ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿಗಳಾದ ಶ್ರೀ ಬಿ.ಎನ್. ನಾಗೇಶ್ ಅವರಿಗೂ ಹಾಗೂ ಶ್ರೀ ಧನಂಜಯ ಕುಮಾರ್‌ರವರಿಗೂ ನಾವು ಆಭಾರಿಗಳಾಗಿದ್ದೇವೆ. ಕರ್ನಾಟಕ ಭವನದ ಎಲ್ಲ ಹಿರಿ–ಕಿರಿಯ ಅಧಿಕಾರಿಗಳು, ಸಿಬ್ಬಂದಿಗಳು ಒಂದಲ್ಲ ಒಂದು ಬಗೆಯಲ್ಲಿ ದೆಹಲಿ ಕರ್ನಾಟಕ ಸಂಘದ ಹಿತೈಷಿಗಳು ಎಂದರೆ ತಪ್ಪಾಗಲಾರದು. ಅವರೆಲ್ಲರಿಗೂ ನಮ್ಮ ಪ್ರೀತಿಯ ನಮನಗಳು. ಇದೇ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ವರುಷದ ಸಾಲಿನಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ದೆಹಲಿ ಕನ್ನಡ ಶಾಲೆಗೆ ಒಂದು ಕೋಟಿ ರೂಪಾಯಿಗಳನ್ನು ಹಾಗೂ ಎರಡು ಬಸ್ಸುಗಳನ್ನು ಖರೀದಿಸಲು ಐವತ್ತು ಲಕ್ಷ ರೂಪಾಯಿಗಳನ್ನು ನೀಡಿದ್ದಾರೆ. ಶಾಲೆಯ ಅಭಿವೃದ್ಧಿಗೆ ಮತ್ತು ಕನ್ನಡದ ಹಿರಿಮೆಗೆ ದೆಹಲಿಯಲ್ಲಿ ಈ ಬಗೆಯ ಸರ್ಕಾರದ ಸಹಾಯಹಸ್ತ ಕಲ್ಪಿಸುತ್ತದೆಯೆಂಬ ಹಾರೈಕೆ ನಮ್ಮೆಲ್ಲರದ್ದು. ಮತ್ತೊಮ್ಮೆ ಇದಕ್ಕೆ ಕಾರಣೀಭೂತರಾದವರೆಲ್ಲರಿಗೂ ನಾವು ಆಭಾರಿಗಳಾಗಿದ್ದೇವೆ.

ಬೆಳಗಾವಿಯಲ್ಲಿ ಇದೇ ಮಾರ್ಚ್ 11ರಿಂದ 13ರವರೆಗೆ ನಡೆಯಲಿರುವ ವಿಶ್ವ ಕನ್ನಡ ಸಮ್ಮೇಳನಕ್ಕೆ ದೆಹಲಿ ಕನ್ನಡಿಗರೆಲ್ಲರಿಗೂ ಬರುವಂತೆ ಮುಕ್ತವಾದ ಅಹ್ವಾನವನ್ನು ನೀಡಲಾಗಿದೆ. ಬಹುಶಃ ಈ ಅಭಿಮತದ ಸಂಚಿಕೆ ತಯಾರಾಗಿ ನಿಮ್ಮನ್ನು ತಲುಪುವ ಹೊತ್ತಿಗೆ ವಿಶ್ವ ಕನ್ನಡ ಸಮ್ಮೇಳನದ ಕಾರ್ಯಕಲಾಪಗಳಿಗೂ ತೆರೆ ಬಿದ್ದಿರುತ್ತದೆ. ಬೆಳಗಾವಿಯಲ್ಲಿ ಈ ಸಮ್ಮೇಳನದ ಆಯೋಜನೆಯನ್ನು ಮಾಡಿರುವುದು ಹಲವಾರು ಬಗೆಗಳಲ್ಲಿ ಗಮನಾರ್ಹ. ದೆಹಲಿ ಕರ್ನಾಟಕ ಸಂಘದ ರಾಯಭಾರಿಗಳಾಗಿ ಈ ಸಮ್ಮೇಳನಕ್ಕೆ ಹಲವರು ಹೋಗುತ್ತಿದ್ದಾರೆ. ಅದರಲ್ಲಿ ಪ್ರಮುಖವಾಗಿ ನಮ್ಮ ಸಂಘದ ನಾಟಕ ತಂಡ ಹಾಗೂ ಭಾವಗೀತೆಯ ತಂಡಗಳು ಭಾಗವಹಿಸುತ್ತಿವೆ. ಅವರೊಂದಿಗೆ ಸಂಘದ ಪದಾಧಿಕಾರಿಗಳಾದ ನಾನು, ಶ್ರೀ ಬಿ.ಕೆ. ಬಸವರಾಜುರವರು, ಶ್ರೀಮತಿ ರೇಣುಕಾ ಎಸ್. ನಿಡಗುಂದಿಯವರೂ ಹೋಗುತ್ತಿದ್ದಾರೆ. ಇವರೆಲ್ಲರೂ ಈ ಸಮ್ಮೇಳನದಲ್ಲಿ ದೆಹಲಿ ಕರ್ನಾಟಕ ಸಂಘದ ಪತಾಕೆಯನ್ನು ಹಾರಿಸಿ ಬರಲಿ ಎಂಬುದೇ ನಮ್ಮ ಆಶಯ.

ನಾಲ್ಕು ವಾರಗಳಿಂದ ನಡೆಯುತ್ತಿರುವ ಅಂಬಿಕೇಶ್ ಕ್ರಿಕೆಟ್ ಪಂದ್ಯಾವಳಿಯೂ ಈಗ ಕೊನೆಯ ಹಂತದಲ್ಲಿದೆ. ಹಲವರ ಪ್ರಯತ್ನದ ಫಲವಿದು. ಸಹಕಾರ್ಯದರ್ಶಿ ಶ್ರೀ ಶ್ರೀನಾಥ್‌ರವರಿಗೆ ಎಲ್ಲ ಸಲಹೆ–ಸಹಕಾರವನ್ನು ನೀಡುತ್ತ ಕೆಲಸ ಮಾಡಿದ ಕಾರ್ಯದರ್ಶಿ ನಾಗರಾಜರವರು ಹಾಗೂ ಇತರ ಕಾರ್ಯಕಾರಿ ಸಮಿತಿಯ ಸದಸ್ಯರೆಲ್ಲರಿಗೂ ಅಭಿನಂದನೆಗಳು. ಇವೆಲ್ಲದರ ಜೊತೆಗೆ ನಡೆಯುತ್ತಿರುವ ಸಾಹಿತ್ಯ ಸಂಜೆಯ ಕಾರ್ಯಕ್ರಮಗಳನ್ನು ಶ್ರೀ ಬಿಳಿಮಲೆಯವರ ಸಲಹೆಯೊಂದಿಗೆ ಮುನ್ನಡೆಸುತ್ತಿರುವ ಸಹಕಾರ್ಯದರ್ಶಿಗಳಾದ ಶ್ರೀಮತಿ ರೇಣುಕಾ ನಿಡಗುಂದಿಯವರು ಹಾಗೂ ಶ್ರೀ ಪಿ.ಸಿ. ಶ್ರೀನಿವಾಸರವರು. ಸಾಂಸ್ಕೃತಿಕ ಸಮಿತಿಯೂ ಸೇರಿ ಹಲವಾರು ಕಾರ್ಯಕ್ರಮಗಳ ರೂಪುರೇಷೆಗಳನ್ನು ತಯಾರಿಸುತ್ತಿದೆ. ಶ್ರೀ ರೇಣುಕುಮಾರ್‌ರವರು ಹಾಗೂ ಶ್ರೀ ಸಖಾರಾಮ ಉಪ್ಪೂರರವರು ಅದಕ್ಕಾಗಿ ಸಜ್ಜಾಗುತ್ತಿದ್ದಾರೆ. ಶ್ರೀಮತಿ ಉಷಾ ಭರತಾದ್ರಿಯವರ ನೇತೃತ್ವದಲ್ಲಿ ಅಭಿಮತದ ಮೊದಲ ಸಂಚಿಕೆ ಗರಿಗೆದರಿ ಮೂಡಿ ಬರುತ್ತಿದ್ದರೆ, ಸಂಘದ ಮಹಿಳಾ ದಿನಾಚರಣೆಯ ಕಾರ್ಯಕ್ರಮಕ್ಕಾಗಿ ಶ್ರೀಮತಿ ಉಷಾ ಭರತಾದ್ರಿಯವರ ಸಲಹೆ–ಸಹಕಾರಗಳೊಂದಿಗೆ ಶ್ರೀಮತಿ ಹೇಮಲತರವರು ತಯಾರಿ ನಡೆಸುತ್ತಿದ್ದಾರೆ. ಸಂಘದ ವೆಬ್‌ಸೈಟನ್ನು ಇನ್ನೂ ಆಕರ್ಷಕವಾಗಿ ಹಾಗೂ ಉಪಯುಕ್ತವಾಗಿ ತರಲು ಬಿ. ನಾರಾಯಣರವರು ಶ್ರಮಿಸುತ್ತಿದ್ದಾರೆ. ಮೇಲಿನ ಹೆಸರುಗಳ ಹಾಗೂ ಕಾರ್ಯಕ್ರಮಗಳ ಉದ್ದದ ಪಟ್ಟಿ ನಾವು ಏನನ್ನೊ ಅದ್ಭುತವಾದದ್ದನ್ನು ಮಾಡಲು ಹೊರಟಿದ್ದೇವೆ ಎಂದು ಹೇಳಲು ಹೊರಟಿದ್ದಲ್ಲ. ಸಂಘದ ಕಾರ್ಯಚಟುವಟಿಕೆಗಳನ್ನು ಆಳವಾಗಿ, ಗಂಭೀರವಾಗಿ ಹಾಗೂ ಅಷ್ಟೇ ಪ್ರೀತಿಯಿಂದ (ಮುತುವರ್ಜಿಯಿಂದ) ಮುನ್ನಡೆಸಬಲ್ಲ, ಮುಖ್ಯವಾಗಿ ಸ್ವತಂತ್ರವಾಗಿ ಮುನ್ನಡೆಸಬಲ್ಲ ನೇತಾರರ ತಂಡವೇ ನಮ್ಮಲ್ಲಿದೆ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆಯಾಗುತ್ತಿದೆ. ನಾನು ಅಧ್ಯಕ್ಷನಾಗಿ ಅವರೊಂದಿಗೆ ಜೊತೆಜೊತೆಯಾಗಿ, ಎಲ್ಲ ಸಲಹೆ ಸಹಕಾರ ಬೇಕಾದಾಗ ನೀಡಿ, ಸಂಘದ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ನಾವೆಲ್ಲ ಒಂದಾಗಿ ಮುಂದುವರೆಯುತ್ತಿದ್ದೇವೆ. ನಿಮ್ಮೆಲ್ಲರ ವಿಶ್ವಾಸ, ಆಶಯ ನಮಗೆ ಬೆನ್ನೆಲುಬು.

ಬರೀ ಇದೇ ಆಶಯಗಳೊಂದಿಗೆ ನಾವು ನಿಂತ ನೀರಾಗಬಾರದು. ಹೊಸ ವಿಚಾರಗಳು, ಹೊಸ ಶಕ್ತಿಗಳು, ಯುವಕರು. . . ಎಲ್ಲರೂ ಸಂಘಕ್ಕೆ ಬರುವಂತಾಗಬೇಕು. ಅದಕ್ಕಾಗಿ ವಿಶಿಷ್ಟವಾದ ಕಾರ್ಯಯೋಜನೆಗಳನ್ನು ರೂಪಿಸುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಮತ್ತೊಮ್ಮೆ. . . ಮಗದೊಮ್ಮೆ ಹೇಳುವುದಾದರೆ ನಿಮ್ಮೆಲ್ಲರ ಪ್ರೀತಿ, ವಿಶ್ವಾಸಗಳೇ ನಮಗೆ ಆಧಾರ, ದೆಹಲಿ ಕರ್ನಾಟಕ ಸಂಘದ ತುಂಬ ಕನ್ನಡಿಗರ ಹಾಗೂ ದೆಹಲಿಯ ಕಂಪು ಸದಾ ತುಂಬಿರಲಿ ಎಂಬುದೇ ನಮ್ಮ ಆಶಯ.

❑ **ಡಾ.ವೆಂಕಟಾಚಲ ಹೆಗಡೆ**

# ಮುನ್ನೋಟ

ಸಂಘದ ಜವಾಬ್ದಾರಿಯನ್ನು ವಹಿಸಿಕೊಂಡ ಹೊಸತರಲ್ಲಿ ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪನವರನ್ನು ಭೇಟಿಯಾಗಿ ಸಂಘಕ್ಕೆ ಅನುದಾನದ ಬೇಡಿಕೆಯನ್ನು ನೀಡಿದ್ದೆವು. ಒಂದು ಕೋಟಿ ರೂಪಾಯಿಗಳನ್ನು ನೀಡುವ ಭರವಸೆಯನ್ನು ನೀಡಿದ ಮಾನ್ಯ ಮುಖ್ಯಮಂತ್ರಿಗಳು ಈ ಬಾರಿಯ ರಾಜ್ಯದ ಬಜೆಟ್‌ನಲ್ಲಿ ಒಂದು ಕೋಟಿ ರೂಗಳನ್ನು ನೀಡುವ ಘೋಷಣೆಯನ್ನು ಮಾಡಿರುವುದು ನಮಗೆ ಹೆಮ್ಮೆ. ಅವರಿಗೆ ನಮ್ಮ ಕೃತಜ್ಞತೆಗಳು. ಅಲ್ಪ ಅವಧಿಯಲ್ಲಿ ನಮಗಿದು ದೊಡ್ಡ ಸಾಧನೆ. ಸಂಘದೊಂದಿಗೆ ಸದಾ ಸ್ಪಂದಿಸುತ್ತಿರುವ ಶ್ರೀ ಬೈಕೆರೆ ನಾಗೇಶ್ ಕರ್ನಾಟಕ ಸರ್ಕಾರದ ದೆಹಲಿಯ ಹೆಚ್ಚುವರಿ ವಿಶೇಷ ಪ್ರತಿನಿಧಿಗಳು ಇದರ ಕಾರಣಕರ್ತರು. ಅವರಿಗೂ ನಮ್ಮ ಕೃತಜ್ಞತೆಗಳು.

ಹಾಗೆಯೇ ಅಲ್ಪ ಅವಧಿಯಲ್ಲಿ ಹಲವು ಸಾಹಿತ್ಯ–ಸಾಂಸ್ಕೃತಿಕ ಮತ್ತು ಕ್ರಿಕೆಟ್ ಕ್ರೀಡೆಯನ್ನು ಆಯೋಜಿಸಿದ್ದೇವೆ. ಸಂಘದ ವಾರ್ಷಿಕೋತ್ಸದ ಆಟೋಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಇದೇ ತಿಂಗಳ 26 ಮತ್ತು 27ರಂದು ಆಯೋಜಿಸಲಾಗಿದೆ. ಸದಸ್ಯರು ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ವಿನಂತಿ. ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಾಗ ತಪ್ಪುಗಳು ಆಗುತ್ತವೆ–ಆಗಲೂಬಹುದು. ಇದನ್ನು ಒಪ್ಪಿಕೊಂಡು ಜಾಗರೂಕರಾಗಿ ಮುಂದುವರಿಯುವ ಪ್ರಯತ್ನ ನಮ್ಮದು.

ಮಾರ್ಚ್ ತಿಂಗಳು ಕಳೆದಾಗ ಪ್ರಸ್ತುತ ಆರ್ಥಿಕ ವರ್ಷ ಮುಕ್ತಾಯವಾಗುತ್ತಿದೆ. ಮುಂದಿನ ಆರ್ಥಿಕವರ್ಷ ತಮಗೆಲ್ಲಾ ಶುಭ ತರಲೆಂದು ಹಾರೈಸುವ

❑ **ಸಿ.ಎಂ.ನಾಗರಾಜ**

ಕರ್ನಾಟಕ ಸರ್ಕಾರ
ವಾರ್ತಾ ಇಲಾಖೆ
ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿ
ಹಾಗೂ
ದೆಹಲಿ ಕರ್ನಾಟಕ ಸಂಘ, ನವದೆಹಲಿ
ಇವರ ಸಂಯುಕ್ತ ಆಶ್ರಯದಲ್ಲಿ

ಕನ್ನಡ ಚಲನಚಿತ್ರ ಪ್ರದರ್ಶನ

**ಸ್ಥಳ: ದೆಹಲಿ ಕರ್ನಾಟಕ ಸಂಘದ ಸಭಾಂಗಣ**
**ರಾವ್ ತುಲಾರಾಂ ಮಾರ್ಗ್, ಸೆ. 12, ಆರ್.ಕೆ. ಪುರಂ, ನವದೆಹಲಿ– 110022**

**ದಿನಾಂಕ : 20.03.2011 ರ ಭಾನುವಾರ**
**ಸಂಜೆ : 4 ಘಂಟೆಗೆ**
ಪುನೀತ್ ರಾಜ್‌ಕುಮಾರ್ ಮತ್ತು ಪ್ರಿಯಾಮಣಿ ಅಭಿನಯದ

# ರಾಮ್

**ಮಂಗಳೂರು ಜಿಲ್ಲಾ ಅವಲೋಕನ ಕುರಿತ**
**ಸಾಕ್ಷ್ಯ ಚಿತ್ರ**
**ನಿರ್ಮಾಣ : ವಾರ್ತಾ ಇಲಾಖೆ**

ನೀವೂ ಬನ್ನಿ, ನಿಮ್ಮ ಕುಟುಂಬದವರು ಮತ್ತು ಸ್ನೇಹಿತರನ್ನೂ ಕರೆತನ್ನಿ!
ಉಪ ನಿರ್ದೇಶಕರು, ಕರ್ನಾಟಕ ವಾರ್ತಾ ಕೇಂದ್ರ
ಕರ್ನಾಟಕ ಭವನ–2, ನಂ. 6. ಸರ್ದಾರ್ ಪಟೇಲ್ ಮಾರ್ಗ್, ಚಾಣಕ್ಯಪುರಿ, ನವದೆಹಲಿ– 110021.
ದೂರವಾಣಿ: 011–24102263, ಮೊಬೈಲ್: +91 99686 52139

# ದೆಹಲಿ ಕರ್ನಾಟಕ ಸಂಘ

## ಅಂತರರಾಷ್ಟ್ರೀಯ ಖ್ಯಾತಿಯ ಕನ್ನಡದ ಕಲಾವಿದ ಎಸ್.ಜಿ.ವಾಸುದೇವ್

"ರಾಜ್ಯದ ಸಮಕಾಲೀನ ಕಲೆಯ ಪ್ರಮುಖ ಕಲಾವಿದರಾಗಿ, ಕಲಾಮೇಳದ ಸಾಧಕರಲ್ಲಿ ಒಬ್ಬರಾಗಿ, ಕರ್ನಾಟಕದ ಕಲೆ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆಯಲು ಕಾರಣಕರ್ತರಾದ ವಾಸುದೇವ್ ಬಗೆಗಿನ ಮಾತೆಂದರೆ, ಅದು ಕರ್ನಾಟಕದ ಆಧುನಿಕ ಚಿತ್ರಕಲೆಯ ವೈಭವದ ಕುರಿತ ಮಾತೇ ಆಗಿದೆ".

**ಅವರಿಗೆ**
**ಅಭಿನಂದನೆ**
**ಸಂವಾದ–ಸಾಕ್ಷ್ಯ ಚಿತ್ರ ಪ್ರದರ್ಶನ**
**ಮತ್ತು**
**ಮಹಿಳಾ ದಿನಾಚರಣೆಯ ಅಂಗವಾಗಿ**

## ದೆಹಲಿ ಮಹಿಳಾ ಚಿತ್ರ ಕಲಾವಿದರ ಚಿತ್ರಕಲಾ ಪ್ರದರ್ಶನದ ಉದ್ಘಾಟನೆ

ದಿನಾಂಕ : 17.03.2011, ಗುರುವಾರ
ಸಮಯ : ಸಂಜೆ 6 ಗಂಟೆಗೆ
ಸ್ಥಳ : ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ

**ಎಲ್ಲರಿಗೂ ಆತ್ಮೀಯ ಸ್ವಾಗತ**

ಡಾ.ವೆಂಕಟಾಚಲ ಹೆಗಡೆ
ಅಧ್ಯಕ್ಷರು

ಸಿ.ಎಂ. ನಾಗರಾಜ
ಪ್ರಧಾನ ಕಾರ್ಯದರ್ಶಿ

# ಅಗಲಿದ ಅನುಕರಣೀಯ ನಾಯಕ ಎಂ.ಪಿ. ಪ್ರಕಾಶ್



20ನೇ ಶತಮಾನದ ಸಂಧಿ ಕಾಲದ ಕನ್ನಡ ನಾಡಿನ ಇತಿಹಾಸದಲ್ಲಿ ತಮ್ಮ ವ್ಯಕ್ತಿ ವಿಶಿಷ್ಟತೆಗಳಿಂದ ವರ್ಣರಂಜಿತ ಸ್ಥಾನವನ್ನಲಂಕರಿಸಿದ್ದ ಎಂ.ಪಿ. ಪ್ರಕಾಶ್ ಅವರು ಒಬ್ಬ ಪ್ರಖರ ಚಿಂತಕ, ಅಜಾತಶತ್ರು ಹಾಗೂ ಲೋಹಿಯಾ ಪ್ರಣೀತ ರಾಜಕಾರಣಿ. ಲೋಹಿಯಾ ಅವರು ಹೇಳುವಂತೆ 'ಜೀವಂತವಾಗಿರುವುದು ಎಂದರೆ ಸೃಜನಶೀಲವಾಗಿರುವುದು ಎಂದರ್ಥ'. ಕನ್ನಡದ ಸೃಜನಶೀಲ ಮನಸ್ಸುಗಳು ಅಧಿಕಾರ ರಾಜಕೀಯದ ಲೋಲುಪತೆಯಲ್ಲಿ ಮೈಮರೆತು ತಮ್ಮ ನಿಜದನಿಯನ್ನು ಕಳೆದುಕೊಳ್ಳುತ್ತಿರುವ ಈ ದಿನಗಳಲ್ಲಿ ರಾಜಕೀಯದಲ್ಲಿ ಸಕ್ರಿಯವಾಗಿದ್ದುಕೊಂಡೇ ಸಾಹಿತ್ಯ, ರಂಗಭೂಮಿ, ನಟನೆ, ನಿರ್ದೇಶನಗಳೆಲ್ಲದರಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದ ಕಾರಣಕ್ಕಾಗಿ ಪ್ರಕಾಶ್ ಅವರು ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಮುಖ್ಯರಾಗುತ್ತಾರೆ.

ರಾಜಕಾರಣದ ಜೊತೆಗೆ ಸಾಹಿತ್ಯ, ಸಂಸ್ಕೃತಿ, ರಂಗಭೂಮಿಗಳ ಒಡನಾಟವನ್ನು ಇರಿಸಿಕೊಂಡಿದ್ದ ಎಂ.ಪಿ. ಪ್ರಕಾಶ್ ಅವರು ತಮ್ಮ ಬರವಣಿಗೆ ಹಾಗೂ ಭಾಷಣಗಳಲ್ಲಿ ಬಸವಣ್ಣ, ಗಾಂಧೀಜಿ, ವ್ಯಾಸ, ಈಲಿಯೆಟ್, ವರ್ಡ್ಸ್‌ವರ್ತ್ ಮುಂತಾದ ಕನ್ನಡ, ಭಾರತೀಯ ಮತ್ತು ಆಂಗ್ಲ ಸಾಹಿತ್ಯಗಳ ಮಹಾನ್ ದಾರ್ಶನಿಕರ ವಿಚಾರಧಾರೆಗಳನ್ನು ಉಲ್ಲೇಖಿಸುತ್ತಿದ್ದುದು ಅವರ ಆಳವಾದ ಅಧ್ಯಯನ, ಗಹನವಾದ ಚಿಂತನೆಗಳಿಗೆ ನಿದರ್ಶನಗಳಾಗಿವೆ. ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯ ಸಲ್ಲಿಸುವಾಗಿನ ಚರ್ಚೆಯಲ್ಲಿ ಭಾಗವಹಿಸಿ ಸರ್ಕಾರದ ವೈಫಲ್ಯಗಳನ್ನು ಕುರಿತು ಮಾತನಾಡುವಾಗ 'Between the conception and the creation, between the emotion and the response, there follows a shadow' ಎಂಬುದಾಗಿ ಈಲಿಯೆಟ್ ಸಾಲುಗಳನ್ನು ಉಲ್ಲೇಖಿಸುತ್ತಾ ಜನತೆಯ ಆಶೋತ್ತರಗಳಿಗೆ ಸ್ಪಂದಿಸಬೇಕಾದ ಸರ್ಕಾರದ ಘೋಷಿತ ಕಾರ್ಯಕ್ರಮಗಳು ಮತ್ತು ಅವುಗಳ ಅನುಷ್ಠಾನದ ನಡುವೆ ತಾಳ ಮೇಳ ಇಲ್ಲದಿರುವುದನ್ನು ವಿವರಿಸುತ್ತಾರೆ.

ಮತ್ತೊಂದು ನಿದರ್ಶನ ಎಂದರೆ ದೆಹಲಿ ಕರ್ನಾಟಕ ಸಂಘದ ನೂತನ ಗ್ರಂಥಾಲಯ ಉದ್ಘಾಟನೆ ಸಂದರ್ಭದಲ್ಲಿ ಅವರು ಗಾಂಧೀಜಿ ಮತ್ತು ಜಿನ್ನಾರ ಧೋರಣೆಗಳ ಬಗ್ಗೆ ಮಾತನಾಡುತ್ತಾ 'ಗುಜರಾತ್‌ನ ಸೌರಾಷ್ಟ್ರದವರಾದ ಇವರಿಬ್ಬರೂ ಇಂಗ್ಲೆಂಡ್‌ಗೆ ತೆರಳಿ ವಿದ್ಯಾಭ್ಯಾಸ ಮುಗಿಸಿ ನಂತರ ಮುಂಬೈಗೆ ಬಂದು ವಕಾಲತ್ತು ಆರಂಭಿಸಿದವರು. ಮಸೀದಿಗೆ ಹೋಗದ, ನಮಾಜು ಮಾಡದ, ಮಹಮ್ಮದಾಲಿ ಜಿನ್ನಾ ಜೀವನದುದ್ದಕ್ಕೂ ಧರ್ಮನಿರಪೇಕ್ಷರಂತೆ ಬದುಕಿ ಕೊನೆಗೆ ಪಾಕಿಸ್ತಾನವನ್ನು ಇಸ್ಲಾಂ ರಾಷ್ಟ್ರವೆಂದು ಘೋಷಿಸಿದರು. ಆದರೆ ಅಪಾರ ಧಾರ್ಮಿಕ ಶ್ರದ್ಧೆಯುಳ್ಳ, ಸದಾ ಕಾಲ ರಾಮ ರಾಮ ಎಂದು ಜಪಿಸುತ್ತಿದ್ದ ಗಾಂಧೀಜಿಯವರು ಭಾರತವನ್ನು ಜಾತ್ಯಾತೀತ ಗಣರಾಜ್ಯ ಎಂಬುದಾಗಿ ಪ್ರತಿಪಾದಿಸಿದರು. ಹೀಗೆ ಇಬ್ಬರು ಮಹಾವ್ಯಕ್ತಿಗಳ ಜೀವನದ ಸೂಕ್ಷ್ಮ ಸಂಗತಿಗಳನ್ನು ವಿಶ್ಲೇಷಿಸುವ ಸಂವೇದನಾಶೀಲ ಮನೋಭಾವ ಎಂ.ಪಿ. ಪ್ರಕಾಶ್‌ರವರದಾಗಿತ್ತು.

ಗೌರವಾನ್ವಿತ ಬದುಕಿಗೆ ಅಗತ್ಯವಾದ ಕನಿಷ್ಠ ಲಜ್ಜೆಯನ್ನೂ ಇಲ್ಲವಾಗಿಸಿ ಬಿಡುವ ಇಂದಿನ ರಾಜಕಾರಣದಲ್ಲಿ ಜನ ತಾವು ಸೋತಾಗ ನಿಷ್ಕ್ರಿಯರು, ಗೆದ್ದಾಗ ಮಾತ್ರ ಕ್ರಿಯಾಶೀಲರು ಆಗಿರುತ್ತಾರೆ. ಇದನ್ನೇ ಸಮಕಾಲೀನ ಭಾರತೀಯ ಸಾಹಿತ್ಯದ ದೊಡ್ಡ ಕವಿ ಡಾ. ಎಚ್.ಎಸ್. ಶಿವಪ್ರಕಾಶ್ ಅವರು ಸಾಮಾನ್ಯ ರಾಜಕಾರಣಿಗಳಂತೆ ಅಲ್ಲದ ಎಂ.ಪಿ. ಪ್ರಕಾಶ್ ಅವರು ಗೆದ್ದಾಗ ಕ್ರಿಯಾಶೀಲರಾಗಿರುವುದಕ್ಕಿಂತಲೂ ಸೋತಾಗ ಹೆಚ್ಚು ಹೆಚ್ಚು ಕ್ರಿಯಾಶೀಲರಾಗಿರುತ್ತಾರೆ ಎಂದು ಹೇಳಿರುವುದು ಅರ್ಥಪೂರ್ಣವಾಗಿದೆ.

ಒಮ್ಮೆ ಅವರನ್ನು ನಾನು ಕರ್ನಾಟಕ ಭವನದಲ್ಲಿ ಭೇಟಿ ಮಾಡಿದ ಸಂದರ್ಭದಲ್ಲಿ '1967ರಲ್ಲಿ ಜೆ.ಎಚ್. ಪಟೇಲರು ಲೋಕಸಭೆಯಲ್ಲಿ ಕನ್ನಡದಲ್ಲಿ ಮಾತನಾಡಿದ್ರು, ಆಗ ಜಾರ್ಜ್ ಫರ್ನಾಂಡಿಸ್ ಅವರು ಭಾಷಾಂತರ ಮಾಡಿದ್ರು, ಆದರೆ ಆಗಿನ್ನು ನಾಡು ನುಡಿಗಳ ಉಳಿವಿಗಾಗಿ ಹೋರಾಟ ಮಾಡಬೇಕಾದ ದುಸ್ಥಿತಿ ಬಂದಿರಲಿಲ್ಲ. ಆದರೆ ಇವತ್ತಿನ ದಿವಸ ನಾವು ಪಟೇಲರ ಉದಾಹರಣೆಯನ್ನು ಅನುಸರಿಸಿ ಕನ್ನಡದಲ್ಲೇ ಮಾತನಾಡುವುದರಿಂದ ಕನ್ನಡಕ್ಕೆ ಹೆಚ್ಚು ಶಕ್ತಿ ತುಂಬಬಹುದು. ಹಾಗಾಗಿ ಸಂಸತ್ತಿನಲ್ಲಿ ಕನ್ನಡದಲ್ಲಿ ಮಾತನಾಡುವವರ ಸಂಖ್ಯೆ ಇನ್ನಷ್ಟು ಹೆಚ್ಚಾಗಬೇಕು' ಎಂಬ ಅವರ ಮಾತುಗಳು ನಾಡು ನುಡಿಗಳ ಬಗೆಗೆ ಸದಾ ಕಾಲ ಜಾಗೃತ ಮನಸ್ಸಿನಿಂದ ಚಿಂತನೆ ಮಾಡುತ್ತಿದ್ದರು ಎಂಬುದಕ್ಕೆ ಸ್ಪಷ್ಟ ನಿದರ್ಶನ.

ಇಂತಹ ಸಂವೇದನಾಶೀಲ ವ್ಯಕ್ತಿತ್ವವುಳ್ಳ ಎಂ.ಪಿ. ಪ್ರಕಾಶ್ ಇತ್ತೀಚೆಗೆ ನಿಧನರಾಗಿದ್ದು, ಕನ್ನಡನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೆ ತುಂಬಲಾರದ ನಷ್ಟವುಂಟಾಗಿದೆ. ಇಂತಹ ಅನುಕರಣೀಯ ನಾಯಕನಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ.

# ಹಿರಿಯ ದೆಹಲಿ ಕನ್ನಡಿಗ ಟಿ.ಡಿ. ಸಾಲ್ಯಾನ್ ಅವರಿಗೆ ಶ್ರದ್ಧಾಂಜಲಿ




**ದೆಹಲಿಯ ಎಲ್ಲಾ ಕನ್ನಡ ಚಟುವಟಿಕೆಗಳಲ್ಲಿ ಭಾಗಿಯಾಗಿ ಕನ್ನಡಿಗರ ಏಳಿಗೆಗಾಗಿ ದುಡಿಯುತ್ತಿದ್ದ ಶ್ರೀಯುತ ಟಿ.ಡಿ. ಸಾಲ್ಯಾನ್ ಅವರು ಅಲ್ಪ ಸಮಯದ ಅನಾರೋಗ್ಯದ ಕಾರಣ 2.03.2011ರಂದು ದೈವಾಧೀನರಾದರು.**

**ದೆಹಲಿಯ ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿ ಸೇವಾ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ನೋಯ್ಡಾ ಕನ್ನಡ ಸಂಘ, ದೆಹಲಿ ಕರ್ನಾಟಕ ಸಂಘ, ದೆಹಲಿಯ ತುಳು ಕೂಟ, ತುಳುನಾಡು ಡೆವಲಪ್‌ಮೆಂಟ್ ಫೋರಂ, ಸೌತ್ ಕೆನರಾ ಕ್ಲಬ್ ಮುಂತಾದ ಎಲ್ಲಾ ಸಂಘ ಸಂಸ್ಥೆಗಳಲ್ಲೂ ಕಾರ್ಯಕಾರಿ ಸಮಿತಿಯಲ್ಲಿ ಸೇವೆ ಸಲ್ಲಿಸಿರುವ ಇವರು ಮುಂದಿನ ನಮ್ಮ ಕನ್ನಡ ಪೀಳಿಗೆಗೆ ಒಬ್ಬ ಮಾರ್ಗದರ್ಶಕರಾಗಿದ್ದರೆಂದರೆ ಅತಿಶಯೋಕ್ತಿ ಆಗಲಾರದು.**

**ದೆಹಲಿ ಕರ್ನಾಟಕ ಸಂಘವು 06.03.2011ರ ಭಾನುವಾರದಂದು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಮೃತರ ಪತ್ನಿ ಮತ್ತು ಮಕ್ಕಳಿಗೆ ಅವರ ಅಗಲುವಿಕೆಯನ್ನು ಸಹಿಸಿಕೊಳ್ಳುವ ಶಕ್ತಿಯನ್ನು ದಯಪಾಲಿಸಲೆಂದು ಶ್ರದ್ಧಾಂಜಲಿ ಸಲ್ಲಿಸಿದರು.**

# ಬಿ.ಎಸ್.ಚಂದ್ರಶೇಖರ್ – ಸವಿ ನೆನಪು



ನನ್ನ ಪತಿ ಬಿ.ಎಸ್. ಚಂದ್ರಶೇಖರ್ (ಬಾಗೂರು ಚಂದ್ರು) ಅವರು 1988ರಲ್ಲಿ ಮದ್ರಾಸ್ ಆಕಾಶವಾಣಿಯಿಂದ ದೆಹಲಿಗೆ ವರ್ಗವಾಗಿ ಬಂದರು. ನಾನು ಆಗ ಚೆನ್ನೈನಲ್ಲಿ ಖಟಿಣುಣಣಾಣಜ ಠಜಿ ಝಚಿಟಿ ಖಣಣಾಜುಝ ಎಂಬ ಸಂಸ್ಥೆಯಲ್ಲಿ ನಿಘಂಟು ವಿಭಾಗದಲ್ಲಿ ಒಂದು ಸಣ್ಣ ಕೆಲಸದಲ್ಲಿದ್ದೆ. ಭಾಷೆಯ ಬಗ್ಗೆ ನನ್ನ ಜ್ಞಾನ ಹೆಚ್ಚಿಸಿಕೊಳ್ಳಲು ಆ ಕೆಲಸ ಸಹಾಯ ಮಾಡುತ್ತಿದೆ ಎಂದು ನಾನು ನನ್ನ ಪತಿಗೆ ತಿಳಿಸಿದಾಗ ಅವರು ಇನ್ನೂ ಒಂದು ವರುಷ ಚೆನ್ನೈನಲ್ಲೆ ಕೆಲಸ ಮುಂದುವರೆಸಲು ತಿಳಿಸಿದರು. ಇದರಿಂದ ಹನ್ನೊಂದನೇ ತರಗತಿಯಲ್ಲಿ ಓದುತ್ತಿದ್ದ ನನ್ನ ಮಗಳಿಗೂ ಅವಳು ಕಲಿಯುತ್ತಿದ್ದ ಶಾಲೆಯಲ್ಲೇ ಹನ್ನೆರಡನೇ ತರಗತಿಯನ್ನು ಮುಗಿಸಲು ಅನುಕೂಲವಾಯಿತು. ಇದರಿಂದ ಜೀವನ ನಡೆಸುವುದಕ್ಕೆ ಹೆಚ್ಚು ಹಣ ಖರ್ಚು ಮಾಡಬೇಕಾಯಿತಾದರೂ ನಮ್ಮಿಬ್ಬರ ಒಳಿತಿಗಾಗಿ ನನ್ನ ಪತಿ ಇಂತಹ ಔದಾರ್ಯ ತೋರಿದ್ದರು. ಚೆನ್ನೈನಲ್ಲೇ 'ಕನ್ನಡ ಸಂಘ'ದ ಸಂಪರ್ಕದಲ್ಲಿದ್ದ ಅವರು ದೆಹಲಿಗೆ ತೆರಳಿದ ನಂತರ ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಆಗಾಗ ನನ್ನನ್ನೂ ಕರ್ನಾಟಕ ಸಂಘಕ್ಕೆ ಕರೆದುಕೊಂಡು ಹೋಗುತ್ತಿದ್ದರು. ನಾನು ಕಥೆ, ಕಾದಂಬರಿಗಳನ್ನು ಬರೆಯುತ್ತಿದ್ದುದರಿಂದ ಅಭಿಮತ ಪತ್ರಿಕೆಗೆ ಚಿಕ್ಕ ಲೇಖನವೊಂದನ್ನು ಬರೆದುಕೊಡುವಂತೆ ಕೇಳಿದರು. ಅವರ ಮಾತಿನಂತೆ ನಾನು ಬರೆಯಲು ಪ್ರಾರಂಭಿಸಿದಾಗ ಅದು ಒಂದು ಹಾಳೆಯ ಮಿತಿಯನ್ನು ಮೀರಿ ದೊಡ್ಡದಾಯಿತು. 'ಇದು ಬೇಡ; ಬೇರೆ ಬರಿ' ಎಂದು ಜಗಳವಾಡಿದರು. ನಾನು 'ಇದನ್ನೇ ಕಳಿಸ್ತೀನಿ; ಬೇರೆ ಬರೆಯೋಲ್ಲ' ಎಂದು ಪ್ರತಿಯಾಗಿ ಜಗಳವಾಡಿ ಅದನ್ನೇ ಕಳುಹಿಸಿದೆ. ಆ ಲೇಖನ ಎಲ್ಲರಿಂದ ಮೆಚ್ಚುಗೆ ಗಳಿಸಿ ಕಸ್ತೂರಿ ಮಾಸಪತ್ರಿಕೆಯಲ್ಲೂ ಪ್ರಕಟವಾದಾಗ 'ನೋಡಿದಿರಾ; ಹೇಗಿದೆ' ಎಂದು ಬೀಗಿದ್ದೆ. ಮುಂದೆ ನನ್ನ ಕೆಲವು ಲೇಖನಗಳು 'ಅಭಿಮತ' ಪತ್ರಿಕೆಯಲ್ಲಿ ಪ್ರಕಟವಾಗಿ, ಅವು ಬೆಂಗಳೂರಿನ ಕೆಲ ಓದುಗರನ್ನು ತಲುಪಿ ಮೆಚ್ಚುಗೆ ಗಳಿಸಿವೆ ಎಂದು ತಿಳಿದು ನನಗೆ ತುಂಬಾ ಸಂತೋಷವಾಯಿತು. ಹೀಗಾಗಿ 'ಅಭಿಮತ'ದ ಮೇಲಿನ ನವಿರಾದ ಭಾವನೆಯ ಎಳೆಯೊಂದು ನನ್ನ ಮನಸ್ಸನ್ನು ಕೋದುಕೊಂಡಿದೆ. ಅಭಿಮತಕ್ಕೆ ಬರೆಯಲು ಪ್ರೇರೇಪಿಸಿದವರು ನನ್ನ ಪತಿ ಎಂಬುದನ್ನು ನಾನು ಇಲ್ಲಿ ಪ್ರತ್ಯೇಕವಾಗೇನೂ ಹೇಳಬೇಕಾಗಿಲ್ಲ. ಇಂತಹ ಅವಕಾಶ ಕಲ್ಪಿಸಿದ್ದಕ್ಕಾಗಿ ನಾನು ನನ್ನ ಪತಿಗೆ ಆಭಾರಿಯಾಗಿರುವೆ.

ದೆಹಲಿ ಕರ್ನಾಟಕ ಸಂಘದಲ್ಲಿ ನನಗೆ ಅನೇಕ ಗಣ್ಯವ್ಯಕ್ತಿಗಳ, ಸಾಮಗ, ಚೆನ್ನು ಎಸ್.ಮಠದ, ಸುಭಾಸಿನ್ನೂರದಾಸ್, ಡಾ.ಅಹಲ್ಯಾ ಚಿಂತಾಮಣಿ, ಗಾಯಕಿ ಜಲಜ ಮುಂತಾದವರ ಭೇಟಿಯಾಯಿತು. ಸಾಮಗರ ನೇತೃತ್ವದಲ್ಲಿ ದೆಹಲಿ ಕನ್ನಡ ಸಾಹಿತ್ಯ ಸಮ್ಮೇಳನದಂತಹ ಸಭೆ, ಸಮಾರಂಭಗಳಲ್ಲಿ ಭಾಗವಹಿಸಿದ್ದು ನೆನಪಿಗೆ ಬರುತ್ತಿದೆ. ದೆಹಲಿ ಕರ್ನಾಟಕ ಸಂಘದ ಈಗಿನ ಅಧ್ಯಕ್ಷರಾಗಿರುವ ಡಾ.ವೆಂಕಟಾಚಲ ಹೆಗಡೆಯವರ ವಿವಾಹದ ಔತಣ ಕೂಟಕ್ಕೂ ನನ್ನ ಪತಿ ನನ್ನನ್ನು ಕರೆದುಕೊಂಡು ಹೋಗಿದ್ದರು. ಅಲ್ಲಿ ಶ್ರೀ ಬೋಳುವಾರು ಮಹಮದ್ ಕುಂಞಿ ಅವರ ಪರಿಚಯವಾಯಿತು. ಅವರ ಸಂಪಾದಕತ್ವದಲ್ಲಿ ಹೊರಬಂದ ದೆಹಲಿ ಕನ್ನಡ ಸಾಹಿತ್ಯ ಸಂಪುಟ–1 ರಲ್ಲಿ ನನ್ನ ಕಥೆ 'ಪರಂಪರೆ' ಪ್ರಕಟವಾಯಿತು. ಅಂತೂ ಮನೆಯಲ್ಲೇ ಮರೆಯಾಗಿದ್ದುಬಿಡಬಹುದಾಗಿದ್ದ ನನಗೆ ದೆಹಲಿಯ ದೆಹಲಿ ಕರ್ನಾಟಕ ಸಂಘ ಮತ್ತು ಅಭಿಮತ ಒಂದು ವ್ಯಕ್ತಿತ್ವವನ್ನು ಕರುಣಿಸಿತು. ಮತ್ತು ನನ್ನ ಜೀವನದ ಸ್ಮೃತಿಪಟಲದಲ್ಲಿ ಎಂದೂ ಅಳಿಯದಂತಹ ಕುರುಹನ್ನು ಮೂಡಿಸಿತು. ಈಗ ಈ ಸ್ಮೃತಿ ಸಂತೋಷ ನೀಡುವ ಬದಲು ಸಂಕಟವನ್ನು ತರುತ್ತಿದೆ. 'ನಿನ್ನ ಲೇಖನ ತೀರಾ ದೊಡ್ಡದಾಯಿತು' ಎಂದು ಟೀಕಿಸುತ್ತಿದ್ದ ನನ್ನ ಪತಿಯ ಆಗಿನ ಮಾತಿಗೆ ಈಗ ಮನ್ನಣೆ ನೀಡಿ ನನ್ನ ಕೃತಜ್ಞತೆಗಳನ್ನು; ಅವು ಹಿರಿದಾಗಿದ್ದರೂ ಅಕ್ಷರಗಳನ್ನು ಸಾಕಷ್ಟು ಕಿರಿದುಗೊಳಿಸುತ್ತಾ ಈ ಲೇಖನದ ಮೂಲಕ ಅವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಿದ್ದೇನೆ.

❑ **ಧೃತಿ, ಬೆಂಗಳೂರು**


# Saujanya Printing Press

**A HOUSE OF QUALITY PRINTING**

**C-95, Okhla Industrial Area, Phase-I,**
**New Delhi - 110 020**
**Phone : 26815778, 41611143**
**Mobile : 9811104398, 9811604398**
**e-mail : rvprintingpress@gmail.com / hpgp2006@gmail.com**

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

**ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ**

# ದೆಹಲಿಯಲ್ಲಿ ಮೆರೆದ ಕನ್ನಡ ಆಡುಭಾಷೆಯ ಸೊಗಡು




ದೆಹಲಿ ಕರ್ನಾಟಕ ಸಂಘದಲ್ಲಿ ಮೊದಲನೇ ಬಾರಿ ಅಂತರರಾಷ್ಟ್ರೀಯ ಮಾತೃಭಾಷಾ ದಿನಾಚರಣೆಯನ್ನು ಫೆಬ್ರವರಿ 20, ಭಾನುವಾರ, ಸೆಮಿನಾರ್ ಹಾಲ್‌ನಲ್ಲಿ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ವಿಶ್ವ ಕೊಂಕಣಿ ಕೇಂದ್ರದ ಅಧ್ಯಕ್ಷ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಬಸ್ತಿ ವಾಮನ್ ಶೆಣೈ ನಮ್ಮೊಂದಿಗಿದ್ದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ.ವೆಂಕಟಾಚಲ ಹೆಗಡೆ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜನಪದ ವಿದ್ವಾಂಸ, ವಿಮರ್ಶಕ ಮತ್ತು ಸಾಹಿತ್ಯ ಸಮಿತಿಯ ಅಧ್ಯಕ್ಷರಾದ ಡಾ.ಪುರುಷೋತ್ತಮ ಬಿಳಿಮಲೆ ಅವರು ಕಾರ್ಯಕ್ರಮವನ್ನು ನಿರ್ವಹಿಸಿದರು.

**ಮಾತೃಭಾಷಾ ದಿನದ ಹುಟ್ಟು** : ಸಾಹಿತ್ಯ ಸಮಿತಿಯ ಸಂಚಾಲಕಿ ಹಾಗೂ ಸಹ ಕಾರ್ಯದರ್ಶಿ, ರೇಣುಕಾ ನಿಡಗುಂದಿಯವರು ಮುಖ್ಯ ಅತಿಥಿಗಳನ್ನು ಸ್ವಾಗತಿಸುತ್ತ, ಮಾತೃಭಾಷಾ ದಿನಾಚರಣೆಯ ಹಿನ್ನೆಲೆಯನ್ನು ವಿವರಿಸಿದರು. ಹಿಂದೆ ಭಾರತ ವಿಭಜನೆಯ ನಂತರ ಫೆಬ್ರವರಿ 21, 1971ರಲ್ಲಿ ಪಾಕಿಸ್ತಾನ ಬಾಂಗ್ಲಾದೇಶದ ಮೇಲೆ ಆಡಳಿತ ಹಾಗೂ ಶೈಕ್ಷಣಿಕವಾಗಿ ಉರ್ದು ಭಾಷೆಯ ಒತ್ತಡವನ್ನು ಹೇರಿತು. ಬಾಂಗ್ಲಾದೇಶದ ಸಾವಿರಾರು ವಿದ್ಯಾರ್ಥಿಗಳು ಅದನ್ನು ಪ್ರತಿಭಟಿಸಿ ದಂಗೆಯೆದ್ದರು. ಈ ಭಾಷಾ ಆಂದೋಲನದಲ್ಲಿ ನೂರಾರು ವಿದ್ಯಾರ್ಥಿಗಳು ಪ್ರಾಣತೆತ್ತರು. ಇದೇ ಸಂದರ್ಭದಲ್ಲಿ ಯುರೋಪಿಯನ್ ದೇಶಗಳಲ್ಲೂ ಸ್ಥಾನಿಕ ಭಾಷೆಗಳ ದಮನವಾಗುತ್ತಿದೆಯೆಂಬ ಕೂಗು ಕೇಳತೊಡಗಿತ್ತು. ಇದೆಲ್ಲವನ್ನೂ ಗಮನಿಸಿದ ಯುನೆಸ್ಕೊ ಫೆಬ್ರವರಿ 21ನ್ನು ಅಂತಾರಾಷ್ಟ್ರೀಯ ಮಾತೃಭಾಷಾ ದಿನವನ್ನಾಗಿ ಘೋಷಿಸಿತ್ತು.

ಮುಂದಿನ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತ ಡಾ.ಬಿಳಿಮಲೆ ಅವರು, ಕ್ರಿ.ಶ. 850ರಲ್ಲಿ ಕವಿರಾಜಮಾರ್ಗದಲ್ಲಿ ಕವಿ 'ಕನ್ನಡಂಗಳ್' ಎಂದು ಇರುವುದನ್ನು ಉಲ್ಲೇಖಿಸಿ, ಇದು ಹಲವು ಬಗೆಯ ಕನ್ನಡದ ಅಸ್ತಿತ್ವವನ್ನು ಹೇಳುತ್ತದೆ ಎಂದರು. ಕ್ರಿ.ಶ. 450ರ ಹಲ್ಮಿಡಿ ಶಾಸನದ ಪೂರ್ವದ ಹಳೆಗನ್ನಡದಿಂದ ಇಂದಿನವರೆಗೆ ಕನ್ನಡವು ಅನೇಕ ಹಂತಗಳನ್ನು ದಾಟಿ ಬಂದಿರುವುದನ್ನು ಹೇಳಿ, ಕನ್ನಡ ಎಂದೂ ಒಂದೇ ಆಗಿರಲಿಲ್ಲ. ಅದರಲ್ಲಿ ಅನೇಕ ಉಪಭಾಷೆ, ಪ್ರಭೇದಗಳಿದ್ದವು ಎಂದರು. ಇಂದು ಇಂಡೋ ಆರ್ಯನ್, ಇಂಡೋ ಟಿಬೆಟಿಯನ್ ಮತ್ತು ದ್ರಾವಿಡಿಯನ್ ಎಂಬ ಮೂರು ಬಗೆಯ ಭಾಷಾ ಪ್ರಭೇದಗಳು ಭಾರತದಲ್ಲಿ ಇದ್ದು, ಅದರಲ್ಲಿ ಕನ್ನಡವು ದ್ರಾವಿಡ ಭಾಷಾ ವರ್ಗಕ್ಕೆ ಸೇರಿದೆ. ಈ ದ್ರಾವಿಡ ಭಾಷಾ ವರ್ಗದಲ್ಲಿ ಸುಮಾರು 24 ಸ್ವಂತ ಭಾಷೆಗಳಿವೆ. ಕನ್ನಡ ಭಾಷೆಯ ಸಂಸ್ಕೃತಿ ಮತ್ತು ಇತಿಹಾಸ ಬಗ್ಗೆ ವಿದ್ವತ್ಪೂರ್ಣವಾಗಿ ವಿವರಿಸಿದರು. ಅತಿಥಿಗಳಾದ ಬಸ್ತಿ ವಾಮನ್ ಶೆಣೈ ಅವರು, ಭಾಷೆಗಳ ದಮನದ ಭಯ ನಮಗಷ್ಟೇ ಅಲ್ಲ ಫ್ರೆಂಚ್, ಜರ್ಮನ್ ಭಾಷೆಗಳಿಗೂ ಉಂಟು. ಜಾಗತೀಕರಣದ ಈ ದಿನಗಳಲ್ಲಿ ನಾವಿಂದು ಭಾಷಾ ಪ್ರಭೇದಗಳನ್ನು ಉಳಿಸಿಕೊಂಡು ಮುಂದೆ ಹೋಗಬೇಕಾಗಿದೆ ಎಂದರು.

**ಆಯಾ ಭಾಷೆಯಲ್ಲಿ ಭಾಷಣ** : ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡವರು ತಮ್ಮ ತಮ್ಮ ಪ್ರಾದೇಶಿಕ ಭಾಷೆಗಳಲ್ಲಿ ಮಾತನಾಡಿದರು. ಮೊದಲಿಗೆ ಪಿ.ಎನ್. ಅಪ್ಪಯ್ಯ ಕೊಡವ ತಕ್ ಭಾಷೆಯಲ್ಲಿ ತಮ್ಮ ಸಂಸ್ಕೃತಿ–ಪರಂಪರೆಯ ಬಗ್ಗೆ ಮಾತನಾಡಿದರು. ಕೊಡವ ಭಾಷೆ 2000 ವರ್ಷಕ್ಕೂ ಹಳೆಯ ಸ್ವತಂತ್ರ ಭಾಷೆ. ಇದಕ್ಕೆ ಲಿಪಿ ಇಲ್ಲ. ಬರೆಯಲು ಕನ್ನಡವನ್ನೇ ಬಳಸುತ್ತಾರೆ. ಇವರಲ್ಲಿ 21 ಜನಾಂಗಗಳು ಹಾಗೂ ಅವುಗಳ ತಕ್ಕ ರೂಪಭೇದಗಳಿವೆ. ತುಳು ಕೂಡ ಸ್ವತಂತ್ರ ಭಾಷೆ. ಕನ್ನಡದಷ್ಟೇ ಹಳೆಯದು ಎಂದು ಭಾಷೆಯ ಬಂಧವನ್ನು ವಿವರಿಸಿದರು. ಕೆ.ಎಸ್.ಜಿ ಶೆಟ್ಟಿ ತಮ್ಮ ಬಾಲ್ಯದ ದಿನಗಳನ್ನು ತುಳು ಭಾಷೆಯಲ್ಲಿ ನೆನೆದರು. ಶಿವಳ್ಳಿ ತುಳುವಿನಲ್ಲಿ ಕೆ.ಆರ್.ರಾಮಮೂರ್ತಿಯವರು ಮಾತನಾಡಿದರು. ಕೊಡಗಿನ ಬಿ.ಡಿ. ಶ್ರೀನಿವಾಸ್ ಅವರು ಅರೆಭಾಷೆಯಲ್ಲಿ ಅಲ್ಲಿನ ಜನರ ಪಾನಪ್ರಿಯತೆ ಮತ್ತು ಹುತ್ತರಿ ಹಬ್ಬ ಮತ್ತಿತರ ಆಚರಣೆಗಳ ಹಾಸ್ಯಮಯ ಘಟನೆಗಳನ್ನು ನೆನಪಿಸಿಕೊಳ್ಳುತ್ತ ಸಭಿಕರೆಲ್ಲ ನಗುವಂತೆ ಮಾಡಿದರು. ಚಿತ್ತರಂಜನ್ ದಾಸ್ ಅವರು ಹವ್ಯಕ ಭಾಷೆಯ ಸೊಗಡಿನಲ್ಲಿ ಒಂದು ಮದುವೆ ಪ್ರಸಂಗವನ್ನು ಬಣ್ಣಿಸಿದರು. ಪಂಪ, ರನ್ನರ ಕಾವ್ಯಗಳಲ್ಲಿ ಕೂಡ ಹವ್ಯಕ ಪದಗಳು ಕಾಣಸಿಗುತ್ತವೆಂಬುದನ್ನು ಡಾ. ಬಿಳಿಮಲೆ ತಿಳಿಸಿದರು. ಮಂಡ್ಯ ಕನ್ನಡದಲ್ಲಿ ಪಿ.ಸಿ ಶ್ರೀನಿವಾಸ್ ಮತ್ತು ಜಿ.ಂ. ಭಾರತಿ ಅವರು ಮಾತನಾಡಿದರೆ, ಬಿಜಾಪುರ ಕನ್ನಡದಲ್ಲಿ ಇಂಗಳೇಶ್ವರ್ ಅವರು ಜಟಕಾಸಾಬಿ ಜೊತೆಗಿನ ಸಂಭಾಷಣೆಯಲ್ಲಿ ಹೇಗೆ ಕನ್ನಡ ಉರ್ದು ಮಿಳಿತವಾಗುತ್ತವೆಂಬುದನ್ನು ತೋರಿಸಿದರು.

ರೇಣುಕಾ ನಿಡಗುಂದಿಯವರು ಧಾರವಾಡವೆಂದರೆ ಧಾರವಾಡ ಪೇಡೆ, ಕಟಕ ರೊಟ್ಟಿ, ಎಣೆಗಾಯಿ ಪಲ್ಲೇ, ಚಟ್ನಿ ನೆನಪಾಗುತ್ತವೆ. ವರಕವಿ ದ.ರಾ.ಬೇಂದ್ರೆ, ಆನಂದಕಂದ, ವಿ.ಕೆ.ಗೋಕಾಕ್, ಕೀರ್ತಿನಾಥ ಕುರ್ತಕೋಟಿ, ಗಿರೀಶ್ ಕಾರ್ನಾಡ, ಲೀಲಾ ಚಿಟ್ನಿಸ್ ಹೀಗೆ ಕನ್ನಡಕ್ಕೆ ಲೆಕ್ಕವಿಲ್ಲದಷ್ಟು ಹೆಸರಾಂತ ಸಾಹಿತಿಗಳನ್ನು, ಸಂಗೀತಕಾರರನ್ನು, ರಂಗ ಕಲಾವಿದರನ್ನು ಕೊಟ್ಟ ನಾಡಿನಲ್ಲಿ ಹುಟ್ಟಿದ್ದು ತಮ್ಮ ಪುಣ್ಯವೆಂದರು.

ಸಂತೋಷಕುಮಾರ್ ಉಪಾಧ್ಯಾಯ ಕುಂದಾಪುರ ಕನ್ನಡದಲ್ಲಿ ಮಾತನಾಡಿದರು. ನಂದಿನಿ ಮಲ್ಯ ಅವರು ಕೊಂಕಣಿಯ ಸವಿಯನ್ನು ಉಣಬಡಿಸಿದರು. ಎನ್. ಆರ್.ಶ್ರೀನಾಥ ಅವರು ಮೈಸೂರು ಕನ್ನಡದಲ್ಲಿ ಅನುಭವ ಹಂಚಿಕೊಂಡರು. ಬೆಳಗಾವಿ ಕನ್ನಡದಲ್ಲಿ ಮೃತ್ಯುಂಜಯ ನವಿಲಗಟ್ಟಿಯವರು ಆ ಕಡೆಯ ಬೈಗಳೂ ಕೂಡ ಪ್ರೀತಿಯಲ್ಲೇ ಆಡಿದವಾಗಿರುತ್ತವೆಂಬುದನ್ನು ಉದಾಹರಿಸಿದರು. ಎಸ್. ಗಿರೀಶ್ ಅವರು ಬೆಂಗಳೂರು ಗ್ರಾಮೀಣ ಭಾಗವಾದ ರಾಮನಗರ ಪ್ರಾಂತ್ಯದ ಕನ್ನಡದಲ್ಲಿ ಮಾತನಾಡುತ್ತ ಉತ್ತರ ಕರ್ನಾಟಕ ಮತ್ತು ಮಂಗಳೂರಿಗರು ಸೇರಿದಾಗ ಆಗುವ ಭಾಷಾ ಅವಾಂತರವನ್ನು ಬಣ್ಣಿಸಿ ಜನರನ್ನು ನಗೆಗಡಲಿನಲ್ಲಿ ತೇಲಿಸಿದರು.

ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಭಾಷೆಯ ಇತಿ–ಮಿತಿಗಳನ್ನು ಮೀರಿ ಸಂಘ ಬೆಳೆದಿದೆ. ನಮ್ಮ ಬೌದ್ಧಿಕ ವೈಚಾರಿಕತೆಯೂ ಕೂಡ ಎಲ್ಲವನ್ನು ಮೀರಿ ಬೆಳೆಯಬೇಕಾಗಿದೆ ಎಂದು ಅಭಿಪ್ರಾಯಪಟ್ಟರು. ಪ್ರಧಾನ ಕಾರ್ಯದರ್ಶಿ, ಸಿ.ಎಂ. ನಾಗರಾಜ್ ಅವರು ಎಷ್ಟೇ ಪ್ರಾದೇಶಿಕ ಉಪಭಾಷೆ–ಪ್ರಭೇದಗಳಿದ್ದರೂ ನಾವೆಲ್ಲ ಕನ್ನಡಿಗರೂ ಒಂದೇ ಎನ್ನುತ್ತ ವಂದಿಸಿದರು. ಮಳೆಯ ಮುನ್ಸೂಚನೆಯೇ ಇರದ ರಾಜಧಾನಿ ದೆಹಲಿ ಮುಂಜಾನೆಯ ಹೂಬಿಸಿಲಿನಲ್ಲಿ ಅರಳಿ, ಮಧ್ಯಾಹ್ನದವರೆಗೂ ಹಿತವಾಗಿದ್ದ ಬಿಸಿಲು ಇದ್ದಕ್ಕಿದ್ದಂತೆ ಮರೆಯಾಗಿ ಸಂಜೆ ಧಾರಾಕಾರವಾಗಿ ಸುರಿಯತೊಡಗಿತ್ತು. ಸುರಿವ ಮಳೆಯನ್ನು ಲೆಕ್ಕಿಸದೆ ಬಂದ ಕನ್ನಡಪ್ರಿಯ ಜನರೆಲ್ಲ ತಮ್ಮ ತಮ್ಮ ಊರಿನ, ಮನೆಯ ಆಡುಭಾಷೆಯ ಸೊಗಡಿನಲ್ಲಿ ಮಾತನಾಡುತ್ತ, ನಕ್ಕು ನಗಿಸಿ ಆನಂದಿಸಿದ್ದು ಮರೆಯಲಾರದ ಸುಂದರ ಸಂಜೆಯೆನಿಸಿತು.

❑ ರೇಣುಕಾ ನಿಡಗುಂದಿ

**ಮರೆಯಲಾಗದ ನಮ್ಮೂರಿನ ಭಾಷೆ**

20ನೇ ತಾರೀಖಿನ ಸಂಜೆ 4 ಗಂಟೆಗೆ ಜರುಗಿದ ಮಾತೃಭಾಷೆ ದಿನಾಚರಣೆಯ ಪ್ರಯುಕ್ತವಾಗಿ ನಡೆಸಿದ ಸಭೆಯಲ್ಲಿ, ಎಲ್ಲರೂ ಅವರವರ ಮನೆಯಲ್ಲಿ ಮಾತನಾಡುವ ಮಾತೃಭಾಷೆ ಮತ್ತು ಹೇಗೆ ಅದರ ಜೊತೆ ಕನ್ನಡವು ಸಮ್ಮಿಳಿತವಾಗಿ ಬೇರೆ ಒಂದು ಭಾಷೆಯಾಗಿ ಬಿಟ್ಟಿದೆಯೆಂಬುದರ ಬಗ್ಗೆ ಅವರವರ ಅನುಭವಗಳನ್ನು ಹೇಳಿಕೊಂಡರು. ದಾವಣಗೆರೆಯವಳಾದ ನನಗೆ ಒಂದು ಹೆಮ್ಮೆಯ ವಿಷಯವೇನೆಂದರೆ "ಬೆಳಗಾಂನಿಂದ ರಾಣೆಬೆನ್ನೂರಿನ ತನಕ, ಹಾಗೆ ಬೀದರ್, ವಿಜಾಪುರ, ಗುಲ್ಬರ್ಗಾ"ಗಳ ಕನ್ನಡ ಉತ್ತರ ಕನ್ನಡದ ಛಾಪನ್ನು ಹೊಂದಿದೆ. ಹರಿಹರದಿಂದ ಈ ಕಡೆ ಅಂದರೆ ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಈ ಜಿಲ್ಲೆಗಳಲ್ಲಿ ಮಾತಾಡುವ ಕನ್ನಡದಲ್ಲಿ ಯಾವುದೇ ತರಹದ ಮಿಶ್ರಿತ ಕನ್ನಡವಿಲ್ಲ. ನಾವು ಮಾತಾಡುವ ಕನ್ನಡದಲ್ಲಿ ಬೇರೆ ಭಾಷೆಯ ಪ್ರಭಾವವಿಲ್ಲವೆಂದು ನನ್ನ ಅನಿಸಿಕೆ. ನಾವು ಯಾವಾಗಲೂ ಹೆಚ್ಚಾಗಿ ರಾಜಕುಮಾರರ ಚಿತ್ರಗಳನ್ನು ನೋಡುತ್ತಿದ್ದುರಿಂದಲೋ ಮತ್ತು ನಾವು ಹೆಚ್ಚಾಗಿ ಓದುತ್ತಿದ್ದ ಸುಧಾ, ಮಯೂರ ಮುಂತಾದ ಪುಸ್ತಕಗಳಲ್ಲಿ ನಮ್ಮ ಕನ್ನಡವನ್ನು ಉಪಯೋಗಿಸುತ್ತಿರುವುದನ್ನು ಕಂಡು ಎಲ್ಲರೂ ಒಂದೇ ಕನ್ನಡ ಮಾತಾಡುತ್ತಾರೆ ಎಂದುಕೊಂಡಿದ್ದೆ. ನಮ್ಮಲ್ಲಿ ಬೇರೆ ಭಾಷಿಗರು ಅಂದರೆ ಹಿಂದಿ, ಮಲೆಯಾಳಿ, ತಮಿಳು, ಮರಾಠಿಗರು ಬಹಳ ಕಡಿಮೆ. ಬಟ್ಟೆ ವ್ಯಾಪಾರಿಗಳಾದ ಗುಜರಾತಿಗಳು ಮತ್ತು ಅಂಗಡಿ ಶೆಟ್ಟರಾಗಿ ತೆಲಗರು ಸಹ ನಮ್ಮ ಕನ್ನಡವನ್ನು ನಮ್ಮ ಹಾಗೆ ಕಲಿತ್ತಿದ್ದುದರಿಂದ ನಮ್ಮ ಕನ್ನಡಕ್ಕೆ ಅಂತಾ ಅಪಚಾರವೇನಾಗಿರಲಿಲ್ಲ. (ಈಗ ಗೊತ್ತಿಲ್ಲ) ಅಂದರೆ ನಾವೇ ಅಪ್ಪಟ ಕನ್ನಡಿಗರೆಂದು ಹೇಳಿಕೊಳ್ಳಲು ಇಲ್ಲಿ ಸ್ವಲ್ಪ ಹೆಮ್ಮೆ ಎನಿಸುತ್ತದೆ. ನಮ್ಮ ತಂದೆ ದಾವಣಗೆರೆಯವರು, ನಮ್ಮ ತಾಯಿ ಮೈಸೂರಿನ ಕಡೆಯವರು. ಮನೆಯಲ್ಲಿ ಮಾಡುವ ಪೂಜೆ, ಪುನಸ್ಕಾರಗಳು, ಅಡಿಗೆಯಲ್ಲಿ ವೈವಿಧ್ಯತೆಯನ್ನು ಕಂಡಿದ್ದರೂ ಮಾತಾಡುವ ಕನ್ನಡಕ್ಕೇನೂ ಅಪಚಾರ ಅಷ್ಟೇನೂ ಆಗಿರಲಿಲ್ಲ. ಆದರೆ ನಾನು ಮದುವೆಯಾಗಿ ಧಾರವಾಡಕ್ಕೆ ಬಂದ ನಂತರ ನನಗೆ ಭಾಷೆಯ ತೊಡಕು ಶುರುವಾಯಿತು. ಮದುವೆಯ ದಿನ ಸಾಯಂಕಾಲವೇ ನನ್ನನ್ನು ಅವರು ಮಾಡಿಕೊಂಡು ಬಂದ ವಾಹನದಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಿರುವಾಗಲೇ ಅವರ ಭಾಷೆಯ ಪರಿಚಯ ಆಗಿದ್ದು, ಅಂದು ನನ್ನ ಕಿವಿಗೆ ಕನ್ನಡ ಶಬ್ಧಗಳಷ್ಟೇ ಬೀಳುತ್ತಿದ್ದವು. ಆದರೆ ಅದನ್ನು ಅರ್ಥೈಸಿಕೊಳ್ಳಲು ಬಹಳ ಸಮಯ ಹಿಡಿಯುತ್ತಿತ್ತು. ನನಗೆ ನನ್ನ ಅಪ್ಪ ಅಮ್ಮನನ್ನು ಬಿಟ್ಟು ಬಂದುದರ ದು:ಖದಲ್ಲಿ ಇದರ ಬಗ್ಗೆ ಚರ್ಚಿಸಲು ಸಮಯವಿರಲಿಲ್ಲ. ಅರ್ಧರಾತ್ರಿ ತನಕ ಪ್ರಯಾಣ ಮಾಡಿ ಅತ್ತ ಮನೆ ಸೇರಿ ಬೆಳಗಾದ ಮೇಲೆಯೇ ನನ್ನ ಫಜೀತಿ ಶುರುವಾಗಿದ್ದು. ಎಲ್ಲರೂ ಮಾತಾಡುತ್ತಿದ್ದುದು ಕನ್ನಡವೇ ಆದರೂ ಅದರಲ್ಲಿ ನನ್ನ ಭಾಷೆಯನ್ನು ಹುಡುಕುವಂತಾಗುತ್ತಿತ್ತು. ಈಗೆದ್ರೇನ್ರಿವೈನಿ, ಬರ್ರೀ ಮಾರಿ ತೊಕ್ಕೋಳ್ರಿ, ಮತ್ತೆ ಏ ತಂಗಿ ಅದೆಲ್ಲಿಟ್ಟಿದೆಯವ್ವ, ಸಿಗಾಕೊಲದಾಗೇದ, ಇದ್ಯಾಕ್ಹಿಂಗ ಮಾಡ್ಲಿಕತ್ತಿ, ಇದೇನ್ ಮಾಡೂನಂತಿ, ಹಂಗ್ಯಾಕೆ ಗಪ್ಪಾದೆ... ಅಬ್ಬಾ ಈ ಶಬ್ಧಗಳನ್ನು ಕೇಳಿ ಗಜಿಬಿಜಿಗೊಂಡು ಹೊರಗೆ ನಡುಮನೆಗೆ ಬಂದಾಗ ಅಲ್ಲೇ ಕುಳಿತ್ತಿದ್ದ ನನ್ನ ಮಾವನವರು ಒಂದು ಕನ್ನಡವೆಂಬ ದೊಡ್ಡ ಬಾಣವನ್ನೇ ಬಿಟ್ಟರು. "ತಂಬಿಗೆ ತಂಗೊಂಡು ಹೋಗಿ ಬಂದೆನವ್ವಾ ತಂಗಿ" (ಟೊಯಲೆಟ್ ಮನೆಯಿಂದ ದೂರದಲ್ಲಿದ್ದು ತಂಬಿಗೆಯಲ್ಲಿ ನೀರು ಹಿಡಿದುಕೊಂಡು ಟೊಯಲೆಟ್‌ಗೆ ಹೋಗುವ ಪದ್ಧತಿ ಇದ್ದುದರಿಂದ) ಅಂದರು. ಅದರ ಅರ್ಥವೇ ಆಗದ ನಾನು ಕಕ್ಕಾಬಿಕ್ಕಿಯಾಗಿ ಹೂಂ ಎಂದು ಒಳಗೋಡಿ ಬಂದೆ. ಆಮೇಲೆ ನಾದಿನಿಯಿಂದ ಅದರರ್ಥ ತಿಳಿಯಿತು. (ಲ್ಯಾಟ್ರಿನ್‌ಗೆ ಹೋಗೋದಕ್ಕೆ ಹಾಗೆ ಕೇಳಿದರು ಎಂದು) ಹಾಗೆ, ನಾದಿನಿಯ ಜೊತೆ ಮಾರ್ಕೆಟ್ಟಿಗೆ ಹೋಗುವಾಗ 'ರೊಕ್ಕ' ಇಟ್ಕಂಡಿಯೇನೂ ತಂಗಿ ಅಂದಾಗ 'ದುಡ್ಡು' ಎಂದು ನನಗೆ ಗೊತ್ತಾಗದೆ ಪೇಚಿಗೆ ಸಿಲುಕಿದೆ. ಹಾಗೆಯೇ 'ಜಳಕ' ಎಂದರೆ ಸ್ನಾನ, 'ತಾಟು' ಅಂದರೆ ತಟ್ಟೆ, 'ತಂಬಿಗೆ' ಎಂದರೆ ಚೆಂಬು, 'ವಾಟಿ' ಅಂದರೆ ಲೋಟ, 'ತಾಸು' ಅಂದರೆ ಗಂಟೆ, ಹೀಗೆ ಶಬ್ದಗಳ ಗೊಂದಲಿನಲ್ಲಿ 5-6 ದಿನಗಳನ್ನು ಕಳೆದು ದೆಹಲಿಗೆ ಅಂದರೆ ಇವರು ಕೆಲಸ ಮಾಡುವ ಸ್ಥಳಕ್ಕೆ ಬಂದು, ಇಲ್ಲಿನ ಕನ್ನಡ ಸಂಘದ ಪರಿಚಯವಾಗಿ ಇಲ್ಲಿಗೆ ಬರುವ ನಾನಾ ತರಹದ ಕನ್ನಡ ಮಾತಾಡುವ ಕನ್ನಡಿಗರನ್ನು ಕಂಡು ಬೆರಗಾದೆ. ತಮಿಳು ಕನ್ನಡಿಗರ ಎನ್ನಡ, ಎನ್ನಚೊಲ್ಲೆ, ತೆಲುಗರ 'ರಾವೆ ಇಕ್ಕಡೆ ಕೂಚೂಂಟಾನು' ಗಂಟೆಯ ಗಣಗಣದ ಹಾಗೆ ಕನ್ನಡವನ್ನು ಪೂರ್ತಿಯಾಗಿ ಒಂದೂ ಅಕ್ಷರವನ್ನೂ ಬಿಡದೆ ಪಕ್ಕ ಪಕ್ಕದಲ್ಲಿ ಮಾತಾಡುವ ತುಳುಜನ, ಕೊಡವ, ಕೊಂಕಣಿ, ಹಿಂದಿ ಮಿಶ್ರಿತ ಕನ್ನಡ, ಮರಾಠಿ ಕನ್ನಡಗಳ ಪರಿಚಯವಾಗಿ ಅವುಗಳನ್ನು ಅರಿತುಕೊಳ್ಳುವ ಸಮಯಾಂತರದಲ್ಲಿ ನನ್ನ ಕನ್ನಡ ನನ್ನ ಮನಸ್ಸಿನಾಳದಲ್ಲಿ ಸಿಲುಕಿ ಕೊಂಡಿತ್ತು. ನಾನು ಸಹ ಧಾರವಾಡದವರ ಹಾಗೆ 'ಮಾಡಕತ್ತಿನಿ' 'ನೋಡಾಕತ್ತೀನಿ' ಎಂದು ಭಾಷೆಯಲ್ಲಿ ಹತ್ತಿ ಇಳಿಯುತ್ತಾ 'ಬರೋಬ್ಬರಿ ಹೇಳಿದ್ರಿ' ಅನ್ನುತ್ತಾ, ಬೆಂಗಳೂರಿನವರು ಕಂಡಾಗ ಏನ್ರೀ ಚೆನ್ನಾಗಿದ್ದೀರಾ', ಮಂಡ್ಯದವರು 'ಅಕ್ಕಾ ಚೆನ್ನಾಗಿದ್ದೀರಾ', ಮೈಸೂರಿನವರು ಅಮ್ಮ ಚೆನ್ನಾಗಿದ್ದೀರಾ' ಉತ್ತರ ಕರ್ನಾಟಕದವರು ಏನವ್ವ ತಂಗೀ ಹ್ಯಾಂಗಿದ್ದಿ' ಎಂದಾಗ ಹಾಗೆ, ಮಂಗಳೂರಿನ ಕಡೆಯವರು ಹೋ ಜಮುನಾ ಮಠದವರೇ ಎಲ್ಲಿ ಚನ್ನು ಮಠದವರು ಎಂದು ಬಿಡಿಬಿಡಿಯಾಗಿ ಬಾಯ್ತುಂಬ ಕೇಳಿದಾಗ, ತಾಯಿ, ತಂದೆ, ನನ್ನ ಜನ, ಬಂಧು-ಬಳಗದವರನ್ನೆಲ್ಲಾ ಬಿಟ್ಟು ಬಂದ ನನಗೆ ಎಷ್ಟೊಂದು ಜನ ಆತ್ಮೀಯರು ನನ್ನನ್ನು ವಿಚಾರಿಸಿಕೊಳ್ಳುವವರಿದ್ದಾರೆ ಎನಿಸಿ ಸಂತೋಷದಿಂದ ಕಣ್ಣ ತುಂಬಿ ಬರುತ್ತಿದೆ. ನಾನು 25 ವರ್ಷದವಳಿದ್ದಾಗ ಮದುವೆಯಾದವಳು ಅಲ್ಲಿಯವರೆಗೂ ಒಂದೇ ತರಹದ ಕನ್ನಡ ಕಲಿತು ಅರಿತವಳಿಗೆ ಈಗ ಇಲ್ಲಿ ಕಳೆದ 25 ವರ್ಷಗಳಲ್ಲಿ ಈ ಕನ್ನಡಗಳನ್ನು ಕಲಿತು ಮತ್ತು ಅವುಗಳನ್ನು ಅರಿಯುವ ಅವಕಾಶ ಒದಗಿದ್ದಕ್ಕೆ ನನಗೆ ತುಂಬಾ ಸಂತೋಷ ತಂದಿದೆ. ಇಂದಿನ ಸಾಹಿತ್ಯ ಸಂಜೆಯ ಮಾತೃ ಭಾಷೆಯ ನೆನಪಿನೊಂದಿಗೆ, ನನ್ನ ಕನ್ನಡವನ್ನೂ ಸಹ ಈ ಲೇಖನದೊಂದಿಗೆ ನೆನಪಿಸಿಕೊಂಡು ನನ್ನ ಕನ್ನಡವನ್ನು ಸಂತೋಷಗೊಳಿಸಿ ಸಂತೃಸಿದೆನೆಂದುಕೊಳ್ಳುತ್ತಿದ್ದೇನೆ.

**'ಜೈಕರ್ನಾಟಕ ಮಾತೆ'**

**ಜಮುನಾ ಸಿ. ಮಠದ, ದಾವಣಗೆರೆ**

## AGOTE ಅಧ್ಯಕ್ಷರಾಗಿ ಕೆ.ಎಸ್. ಶಿವರಾಮು



ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ನವದೆಹಲಿಯಲ್ಲಿ ಹಿರಿಯ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಕೆ.ಎಸ್. ಶಿವರಾಮು ಅವರು Association of Group-A Gazetted Officers Technical Education Delhi (AGOTE) ಯ 2011-13ನೇ ಸಾಲಿನ ಅಧ್ಯಕ್ಷರಾಗಿ ಮರು ಆಯ್ಕೆಯಾಗಿದ್ದಾರೆ. ಕೃಷಿಕ್ ಸರ್ವೋದಯ ಫೌಂಡೇಶನ್ ಖಜಾಂಚಿಯಾಗಿ ಸೇವೆ ಸಲ್ಲಿಸುತ್ತಿರುವ ಇವರು ಮೂಲತಃ ಮಂಡ್ಯ ಜಿಲ್ಲೆಯ ಕೀಲಾರ ಗ್ರಾಮದವರು. ಕಳೆದ ಹತ್ತು ವರ್ಷಗಳಿಂದ ದೆಹಲಿಯಲ್ಲಿ ನೆಲೆಸಿದ್ದಾರೆ.

**ಶ್ರೀನಿವಾಸ ಪಿ.ಸಿ.**

ಅರಳು ಪ್ರತಿಭೆ

# ಬಾಲ ಸಂಗೀತ ಪ್ರತಿಭೆ–ಕು.ಪ್ರೇರಣಾ



2006ನೇ ಇಸವಿ ಜನವರಿ ತಿಂಗಳಿನಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಸಂಗೀತ ಸ್ಪರ್ಧೆ ನಡೆಯುತ್ತಿತ್ತು. ಸ್ಪರ್ಧೆ ಮುಗಿದು ಫಲಿತಾಂಶ ಪ್ರಕಟವಾಗುವವರೆಗೂ ಕಾಯುತ್ತಿದ್ದ ದೆಹಲಿ ಕನ್ನಡಿಗರಿಗೆ ಮನೋರಂಜನೆ ಜೊತೆಗೆ ಅಚ್ಚರಿ ಮೂಡಿಸಿದ್ದು ಹೀಗೆ. ಒಂದೂವರೆ ವರ್ಷದ ಹೆಣ್ಣುಮಗು ವೇದಿಕೆಯೇರಿ ಕೈಯಲ್ಲಿ ಮೈಕನ್ನೆತ್ತಿಕೊಂಡು ತನ್ನ ತೊದಲು ನುಡಿಗಳಿಂದಲೇ ಸಾ.ಶಿ.ಮರುಳಯ್ಯನವರು ರಚಿಸಿದಂತಹ ಒಂದು ಭಾವಗೀತೆ 'ಸುಮಸುಂದರ ತರುಲತೆಗಳ ಬೃಂದಾವನ ಲೀಲೆ' ಯನ್ನು ಸುಶ್ರಾವ್ಯವಾಗಿ ಹಾಡಿತು. ನೆರೆದ ಜನರಿಂದ ಚಪ್ಪಾಳೆಯ ಸುರಿಮಳೆ. ಆ ಪುಟ್ಟ ಮಗುವೇ ಬೆಳೆದು ದೊಡ್ಡವಳಾಗಿ ಎಂಟು ವರ್ಷದ ಬಾಲಕಿಯಾಗಿ ನಮ್ಮ ಮುಂದಿದ್ದಾಳೆ. ನಗುಮೊಗದ ಉತ್ಸಾಹದ ಚಿಲುಮೆಯ, ಈ ಬಾಲಕಿಯ ಹೆಸರು ಪ್ರೇರಣಾ. ಈಕೆ ಮತ್ತ್ಯಾರು ಅಲ್ಲದೆ ಮಂಗಳೂರಿನ ಸುಪ್ರಸಿದ್ಧ ಕೊಂಕಣಿ ಹಾಗೂ ಕನ್ನಡ ಲೇಖಕ, ಸಾಹಿತಿ ಹಾಗೂ 2004ರ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಬಿ. ವಾಮನ್ ರಾವ್ ಅವರ ಮೊಮ್ಮಗಳು.

ಈ ಬಾಲಕಿಯ ತಂದೆ ಬಿ. ಪ್ರದೀಪ್ ರಾವ್ ದೆಹಲಿಯ ಕರ್ನಾಟಕ ಭವನದಲ್ಲಿ ಉದ್ಯೋಗಿ, ತಾಯಿ ಪೂಜಾ ರಾವ್ ಸಂಗೀತದಲ್ಲಿ ಅಪಾರ ಆಸಕ್ತಿಯುಳ್ಳವರಾಗಿದ್ದು, ದೆಹಲಿಯ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಜಾನಪದ ಹಾಗೂ ಭಾವಗೀತೆಗಳನ್ನು ಹಾಡಿ ಜನಪ್ರಿಯರಾಗಿದ್ದಾರೆ.

ಕು.ಪ್ರೇರಣಾ ದೆಹಲಿಯ ಸುಪ್ರಸಿದ್ಧ ಶಾಸ್ತ್ರೀಯ ಸಂಗೀತಗಾರ್ತಿ ಶ್ರೀಮತಿ ಜಲಜಾರಾಜು ಅವರ ಬಳಿ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡುತ್ತಿದ್ದಾಳೆ. ದೆಹಲಿಯ ಸಫ್ದರ್‌ಜಂಗ್‌ನಲ್ಲಿರುವ ಕೃಷ್ಣಮಂದಿರದಲ್ಲಿ ಪುರಂದರದಾಸರ ಜಯಂತಿಯಂದು ನಡೆಯುವ ದಾಸರ ಪದಗಳ ಸ್ಪರ್ಧೆಯಲ್ಲಿ ಸತತ ಮೂರು ವರ್ಷಗಳಿಂದ ಪ್ರಥಮ ಬಹುಮಾನ ಪಡೆಯುತ್ತಾ ಬಂದಿದ್ದಾಳೆ. ದೆಹಲಿಯಲ್ಲಿ ಬಾ. ಸಾಮಗ ಅವರ ನೇತೃತ್ವದಲ್ಲಿ ಪ್ರತಿವರ್ಷ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನ, ಕಳೆದ ಮೂರು ವರ್ಷಗಳಿಂದ ಈಕೆಯ ಪ್ರಾರ್ಥನೆಯೊಂದಿಗೇ ಆರಂಭ. ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳು ಕೂಡಾ ಈಕೆಯ ಪ್ರಾರ್ಥನೆಯೊಂದಿಗೇ ಆರಂಭ. ದೆಹಲಿ ಕನ್ನಡಿಗರ ಮನೆಮಾತಾಗಿರುವ ಈ ಪುಟಾಣಿ Prayer Prerana ಎಂದೇ ಪ್ರಸಿದ್ಧಿ.

2009ರ ನವೆಂಬರ್‌ನಲ್ಲಿ ಕರ್ನಾಟಕ ವಾರ್ತಾ ಇಲಾಖೆ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ದೆಹಲಿ ಸೇರಿದಂತೆ ಉತ್ತರ ಭಾರತದ ಇತರ ರಾಜ್ಯಗಳಾದ ಹರಿಯಾಣದ ಗುರುಗಾಂ ಹಾಗೂ ಉತ್ತರ ಪ್ರದೇಶದ ನೋಯ್ಡಾದಲ್ಲಿ ಕೂಡಾ ಈಕೆ ಕನ್ನಡ ಚಿತ್ರಗೀತೆ ಹಾಗೂ ಭಾವಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದ್ದಾಳೆ. ದೆಹಲಿಯ ಇನ್ನೋರ್ವ ಕನ್ನಡಿಗ, ಕಲಾವಿದ ಹಾಗೂ ಕೀಬೋರ್ಡ್ ವಾದಕ ಟಿ.ಎಸ್.ರಮೇಶ್ ನೇತೃತ್ವದ 'ಸ್ವರಾಂಜಲಿ' ರಸಮಂಜರಿ ತಂಡದ ಅತ್ಯಂತ ಕಿರಿಯ ಸದಸ್ಯೆಯಾದ ಈಕೆ ಅವರೊಂದಿಗೆ ಅನೇಕ ಕಾರ್ಯಕ್ರಮಗಳನ್ನೂ ನೀಡಿದ್ದಾಳೆ. ಮಾತೃಭಾಷೆ ಕೊಂಕಣಿಯಾಗಿರುವ ಇವಳಿಗೆ ಕನ್ನಡ ಮಾತಾಡಲು ಸರಿಯಾಗಿ ಬರದಿದ್ದರೂ ಕನ್ನಡ ಹಾಡುಗಳನ್ನು ಮಾತ್ರ ಕನ್ನಡ ಬಲ್ಲವರಿಗಿಂತಲೂ ಸ್ಪಷ್ಟವಾಗಿ ಹಾಡುತ್ತಾಳೆ. ಹಾಡು ಮಾತ್ರವಲ್ಲದೆ ಅಭಿನಯದಲ್ಲೂ ಈಕೆಗೆ ಅಪಾರ ಆಸಕ್ತಿ. ದೆಹಲಿಯ ಸುಪ್ರಸಿದ್ಧ ಶಾಲೆ ಕಾರ್ಮೆಲ್ ಕಾನ್ವೆಂಟ್‌ನ 2ನೇ ತರಗತಿ ವಿದ್ಯಾರ್ಥಿನಿಯಾದ ಈಕೆ ಶಾಲೆಯಲ್ಲಿ ನಡೆಯುವ ಪ್ರಬಂಧ, ಭಾಷಣ ಹಾಗೂ ನಾಟಕ ಸ್ಪರ್ಧೆಗಳಲ್ಲೂ ಕೂಡ ಬಹುಮಾನವನ್ನು ಗೆದ್ದಿದ್ದಾಳೆ. ಅಭ್ಯಾಸದಲ್ಲಿ ಸಹ ಪ್ರತೀ ವರ್ಷ ಪ್ರಥಮ ಸ್ಥಾನ. ಈಕೆ ಕನ್ನಡದ ಅನೇಕ ಜಾಹೀರಾತುಗಳಿಗೆ ತನ್ನ ಧ್ವನಿ ನೀಡಿದ್ದಾಳೆ. ರಾಷ್ಟ್ರಪತಿ ಭವನದಲ್ಲಿ ನಡೆದ ಒಂದು ಕಾರ್ಯಕ್ರಮದಲ್ಲಿಯೂ ಈಕೆ ತನ್ನ ಶಾಲೆಯನ್ನು ಪ್ರತಿನಿಧಿಸಿದ್ದಾಳೆ. ಇತ್ತೀಚೆಗೆ ನಡೆದ ಕೇಂದ್ರ ಕಾನೂನು ಸಚಿವ ಶ್ರೀ ಎಂ.ವೀರಪ್ಪ ಮೊಯಿಲಿಯವರ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಕನ್ನಡಿಗರಲ್ಲದ ವೇದಿಕೆಯಲ್ಲಿ ಹತ್ತು ಹಲವು ಮಾಧ್ಯಮ ಪ್ರತಿನಿಧಿಗಳು, ಕೇಂದ್ರ ಮಂತ್ರಿಗಳು ಹಾಗೂ ಅಧಿಕಾರಿಗಳ ಮುಂದೆ ಹಿಂದಿ ಭಕ್ತಿಗೀತೆಗಳನ್ನು ಹಾಡಿ ಸ್ವತ: ಸಚಿವರಿಂದಲೇ ಪ್ರಶಂಸೆಯನ್ನು ಗಿಟ್ಟಿಸಿದ್ದಾಳೆ.

"ಬೆಳೆಯುವ ಪೈರು ಮೊಳಕೆಯಲ್ಲಿ" ಎಂಬಂತೆ ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ತನ್ನ ಪ್ರತಿಭಾ ಪ್ರದರ್ಶನ ನೀಡುತ್ತಿರುವ ಪ್ರೇರಣಾಗೆ ಮುಂದೆ ಹಿನ್ನೆಲೆ ಗಾಯಕಿಯಾಗಬೇಕೆಂಬ ಕನಸು. ಸರಿಯಾದ ಪ್ರೋತ್ಸಾಹ ಹಾಗೂ ಅವಕಾಶಗಳು ಸಿಕ್ಕಿದ್ದಲ್ಲಿ ಮುಂದೊಂದು ದಿನ ಇವಳು ಪ್ರಸಿದ್ಧ ಸಂಗೀತಾಗಾರ್ತಿಯಾಗುವುದು ನಿಸ್ಸಂದೇಹ. ಪ್ರೇರಣಾ ಭವಿಷ್ಯ ಉಜ್ವಲವಾಗಿ ಬೆಳಗಲಿ ಎಂಬುದು ನಮ್ಮೆಲ್ಲರ ಸದಾಶಯ.

## ಉಚಿತ ವೈದ್ಯಕೀಯ ತಪಾಸಣೆ

**ಮಾರ್ಚ್ ತಿಂಗಳ 27ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿ ವಿನಂತಿ.**

❑ ಪ್ರಧಾನ ಕಾರ್ಯದರ್ಶಿ

## ನಾಟಕ

ದೆಹಲಿ ಕರ್ನಾಟಕ ಸಂಘದ ನಾಟಕ ಉಪಸಮಿತಿ ಒಂದು ನಾಟಕವನ್ನು ಪ್ರದರ್ಶಿಸಲು ನಿರ್ಧರಿಸಿದ್ದು, ನಾಟಕದಲ್ಲಿ ಅಭಿನಯಿಸಲು ಆಸಕ್ತಿಯುಳ್ಳವರು ತಮ್ಮ ಹೆಸರನ್ನು ಸಂಘದ ಕಛೇರಿಯಲ್ಲಿ ಮಾರ್ಚ್ 25ರ ಒಳಗಾಗಿ ನೊಂದಾಯಿಸಬೇಕಾಗಿ ಕೋರಲಾಗಿದೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : 26109615 /

ಲೇಖನ

# ಟೆಕ್ನಾಲಜಿ ಕ್ರಾಂತಿಯ ಕಹಳೆ, ಸಶಕ್ತಳಾಗುತ್ತಿದ್ದಾಳೆ ಮಹಿಳೆ



ಇದು ಟೆಕ್ನಾಲಜಿ ಯುಗ. ಆಧುನಿಕ ಜಗತ್ತಿನಲ್ಲಿ ಇಂದು ಟೆಕ್ನಾಲಜಿ ಪ್ರತಿಯೊಬ್ಬರ ಜೀವನದಲ್ಲೂ ಪ್ರವೇಶಿಸಿದೆ. ಮಹಿಳೆಯು ಉದ್ಯೋಗಸ್ಥೆಯಾಗಿರಲಿ ಅಥವಾ ಗೃಹಿಣಿಯಾಗಿರಲಿ ಟೆಕ್ನಾಲಜಿಯ ಲಾಭಗಳು ಆಕೆಯ ಜೀವನವನ್ನು ಸುಗಮಗೊಳಿಸಿವೆ. ರುಬ್ಬುವ ಕಲ್ಲಿಗೆ ಬದಲಾಗಿ ಗ್ರೈಂಡರ್-ಮಿಕ್ಸರ್‌ಗಳು ಬಂದಿವೆ. ಹೊಳೆಯ ಬದಿಗೆ ಹೋಗಿ ಕಲ್ಲಿಗೆ ತಿಕ್ಕಿ ತಿಕ್ಕಿ ಬಟ್ಟೆ ಒಗೆಯಬೇಕಾಗಿಲ್ಲ, ವಾಶಿಂಗ್ ಮೆಷಿನ್‌ಗಳು ಬಂದಿವೆ. ಮನೆ ಗುಡಿಸುವುದಕ್ಕೆ ವ್ಯಾಕ್ಯೂಮ್ ಕ್ಲೀನರ್‌ಗಳು ಬಂದಿವೆ. ಮೈಕ್ರೋವೇವ್ ಓವನ್‌ಗಳು ಮತ್ತು ಪ್ರೆಶರ್ ಕುಕ್ಕರ್‌ಗಳು ಅಡಿಗೆ ಕೆಲಸಗಳಲ್ಲಿ ನೆರವಾಗುತ್ತಿವೆ. ಈ ಪ್ರಕಾರವಾಗಿ ಮನೆಯ ಎಲ್ಲಾ ಕೆಲಸಗಳನ್ನು ಸುಗಮಗೊಳಿಸುತ್ತಾ ಮಹಿಳೆಯರ ಮೇಲಿನ ಭಾರವನ್ನು ಕಡಿಮೆ ಮಾಡಿದೆ. ಇಂದಿನ ಉದ್ಯೋಗಸ್ಥ ಮಹಿಳೆ ಆಫೀಸಿನಲ್ಲಿ ಕೆಲಸ ಮಾಡಿಕೊಂಡು ಸಂಜೆಯ ವೇಳೆಗೆ ದಣಿದು ಮನೆಗೆ ಬಂದಾಗ ಮತ್ತೆ ಮನೆ ಕೆಲಸಗಳ ಹೊರೆ ಆಕೆಗೆ ಪೆಡಂಭೂತವಾಗಿ ಕಾಡುತ್ತಿರುವಾಗ ಆಧುನಿಕ ಗೃಹೋಪಯೋಗಿ ಉಪಕರಣಗಳು ಮಹಿಳೆಗೆ ಬಲಗೈ ಭಂಟರಾಗಿ ಸಹಾಯಕ್ಕೆ ಮುಂದೆ ಬಂದಿವೆ. ಈ ರೀತಿಯಲ್ಲಿ ಮನೆಯೊಳಗೆ ಮಹಿಳೆಗೆ ಸಶಕ್ತಳಾಗಲು ಟೆಕ್ನಾಲಜಿ ಆಕೆಗೆ ನೆರವಾಗಿದೆ. ಮಹಿಳೆಯು ಸಶಕ್ತಳಾಗಲು ಬೇಕಾಗಿರುವ ಇನ್ನೊಂದು ಅಗತ್ಯತೆಯೆಂದರೆ ಆಕೆಯು ಆರ್ಥಿಕವಾಗಿ ಸ್ವತಂತ್ರಳಾಗುವುದಾಗಿದೆ. ಇಲ್ಲಿಯೂ ಕೂಡಾ ಟೆಕ್ನಾಲಜಿ ಮತ್ತೆ ಆಕೆಯ ನೆರವಿಗೆ ಬಂದಿದೆ. ಇಂದಿನ ಸಮಾಜದಲ್ಲಿ ಮಹಿಳೆಗಾಗಿ ಹೊಸ ಹೊಸ ಉದ್ಯೋಗಗಳು ಸೃಷ್ಟಿಯಾಗಿವೆ. ಅವುಗಳ ಬಗ್ಗೆ ಸಂಕ್ಷಿಪ್ತ ವಿವರಗಳನ್ನು ಇಲ್ಲಿ ನೀಡಲಾಗಿದೆ.

**ರೇಡಿಯೋ ಜಾಕಿ (ಅನೌನ್ಸರ್) ಮತ್ತು ಟಿ.ವಿ. ಅನೌನ್ಸರಗಳು/ಆ್ಯಂಕರ್‌ಗಳು**

ದೆಹಲಿಯಲ್ಲಿ 10-12 ಎಫ್.ಎಂ. ಸ್ಟೇಶನ್‌ಗಳಿವೆ. ಇದೇ ರೀತಿಯಲ್ಲಿ ಎಲ್ಲಾ ಮಹಾನಗರಗಳಲ್ಲಿ ಹಾಗು ಇನ್ನಿತರ ದೊಡ್ಡ, ಸಣ್ಣ ನಗರಗಳಲ್ಲಿ ರೇಡಿಯೋ ಎಫ್‌ಎಂ ಚಾನಲ್‌ಗಳಿವೆ. ಇವುಗಳನ್ನು ಕೇಳಲು ಎಲ್ಲಾ ಕಡೆಗೂ ರೇಡಿಯೋ ಹೊತ್ತುಕೊಂಡು ತಿರುಗಾಡಬೇಕಾಗಿಲ್ಲ. ನಿಮ್ಮಲ್ಲಿರುವ ಮೊಬೈಲ್‌ಗಳ ಮೂಲಕ ಅಥವಾ ಅಥವಾ ಐಪ್ಯಾಡ್‌ಗಳ ಮೂಲಕ ಕೇಳಬಹುದಾಗಿದೆ. ಅಲ್ಲದೆ ಕಿಸೆಯಲ್ಲಿರಿಸಬಹುದಾದ ಅನೇಕ ಪುಟ್ಟ ಲಿಸನಿಂಗ್ ಡಿವೈಸ್‌ಗಳಿವೆ. ಹೀಗಿರುವಾಗ ರೇಡಿಯೋ ಕೇಳುವವರ ಸಂಖ್ಯೆ ಜಾಸ್ತಿಯಾಗಿದೆ. ಬಸ್ಸು ಕಾರುಗಳಲ್ಲಂತೂ ಪ್ರಯಾಣಿಕರ ಪ್ರಪ್ರಥಮ ಸಂಗಾತಿ ಎಫ್‌ಎಂ ರೇಡಿಯೋ ಚಾನೆಲ್‌ಗಳಾಗಿವೆ. ದಿನದ 24 ಗಂಟೆಯೂ ಇದರಲ್ಲಿ ಕಾರ್ಯಕ್ರಮ ಪ್ರಸಾರವಾಗುತ್ತಿರುತ್ತದೆ. ಈ ಕಾರ್ಯಕ್ರಮಗಳನ್ನು ನಡೆಸಿಕೊಡುವವರು ಮಹಿಳೆಯರು ಹಾಗೂ ಅದರಲ್ಲೂ ಮುಖ್ಯವಾಗಿ ಯುವತಿಯರಾಗಿರುತ್ತಾರೆ. ಗಂಟೆಗೊಮ್ಮೆ ಅಥವಾ ಎರಡು ಗಂಟೆಗಳಿಗೊಮ್ಮೆ ಕಾರ್ಯಕ್ರಮ ಬದಲಾದಂತಯೇ ಹೊಸ ಅನೌನ್ಸರ್ ಬೇಕಾಗಿರುತ್ತಾರೆ. ಆದ್ದರಿಂದ ಇದರಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಿರುತ್ತವೆ. ಪ್ರತಿ ಆರು ತಿಂಗಳಿಗೊಮ್ಮೆ ಗುತ್ತಿಗೆ ಆಧಾರದ ಮೇರೆಗೆ ಅನೌನ್ಸರ್‌ಗಳನ್ನು ಕರೆಯುತ್ತಲೇ ಇರುತ್ತಾರೆ. ಪದವೀಧರರಾಗಿರುವ ಮತ್ತು 35 ವರ್ಷಕ್ಕಿಂತ ಕೆಳಗಿನ ಪ್ರಾಯದ ಮಹಿಳೆಯರಿಗೆ ಈ ಅವಕಾಶ ತೆರೆದಿರುತ್ತದೆ.

ರೇಡಿಯೋ ಬಳಿಕ ಟಿವಿಯಲ್ಲಿ ಸಾಕಷ್ಟು ಅವಕಾಶಗಳಿವೆ. ಪ್ರೆಸೆಂಟರ್‌ಗಳು, ನ್ಯೂಸ್ ರೀಡರ್ಸ್ ಮತ್ತು ಅನೌನ್ಸರ್‌ಗಳಿಗೆ ಇಲ್ಲಿಯೂ ಅವಕಾಶವಿದೆ. ಸುಂದರ ಯುವತಿಯರಿಗೆ ಇಲ್ಲಿ ಆದ್ಯತೆಯಿರುತ್ತದೆ. ಟಿವಿ ಚಾನೆಲ್‌ಗಳಲ್ಲಿ ನ್ಯೂಸ್ ಚಾನೆಲ್‌ಗಳು, ಮನರಂಜನಾ ಚಾನೆಲ್‌ಗಳು, ಮ್ಯೂಸಿಕ್ ಚಾನೆಲ್‌ಗಳು, ಆಟೋಟಗಳ ಚಾನೆಲ್‌ಗಳು ಎಂಬಂತೆ ಹಲವಾರು ಬಗೆಯ ಚಾನೆಲ್‌ಗಳು ಇವೆ ಮತ್ತು ಇವುಗಳಲ್ಲಿ ಅನೇಕ ರೀತಿಯಲ್ಲಿ ಮಹಿಳೆಯರ ಅಗತ್ಯತೆಯಿರುತ್ತದೆ. ವಾರ್ತೆಗಳನ್ನು ಓದುವುದು, ಗಣ್ಯರನ್ನು ಸಂದರ್ಶಿಸುವುದು, ಕಾರ್ಯಕ್ರಮ ನಡೆಸಿಕೊಡುವುದು, ಎಂಬಂತೆ ಹಲವಾರು ಪ್ರಕಾರದ ಉದ್ಯೋಗಗಳು ಮಹಿಳೆಯರಿಗೆ ಲಭ್ಯವಿರುತ್ತದೆ. ಇವುಗಳೆಲ್ಲಾ ಪೂರ್ಣಾವಧಿಗಾಗಿ (full time) ಮತ್ತು ಭಾಗಶಃ ಅವಧಿಗಾಗಿಯೂ (part time) ಕೂಡಾ ಲಭ್ಯವಿದೆ.

**ಪತ್ರಿಕೋದ್ಯಮದಲ್ಲಿ ಅವಕಾಶಗಳು**

ದಿನಪತ್ರಿಕೆಗಳು, ವಾರಪತ್ರಿಕೆಗಳು, ಸಿನೆಮಾ ಪತ್ರಿಕೆಗಳು ಎಂಬಂತೆ ಇಂದು ಹತ್ತು ಹಲವಾರು ಪತ್ರಿಕೆಗಳು ಮಹಿಳೆಯರಿಗಾಗಿ ಹಲವಾರು ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಟ್ಟಿವೆ. ವರದಿಗಾರರಾಗಿ, ಲೇಖಕಿಯರಾಗಿ ಮಹಿಳೆಯರು ಆರ್ಥಿಕ ಸಂಪಾದನೆ ಮಾಡಿಕೊಳ್ಳಬಹುದಾಗಿದೆ. ಇವುಗಳಲ್ಲಿ ಆಕೆಯು ಪೂರ್ಣಾವಧಿ ಉದ್ಯೋಗ ಪಡೆಯಬಹುದಾಗಿದೆ ಅಥವಾ ಮನೆಯಲ್ಲಿದ್ದುಕೊಂಡೇ ಗೃಹಿಣಿಯಾಗಿಯೂ ತನ್ನ ಸೇವೆಯನ್ನು ಸಲ್ಲಿಸಬಹುದಾಗಿದೆ.

**ನರ್ಸ್, ಅಧ್ಯಾಪಕಿ, ಅಂಗನವಾಡಿ ಟೀಚರ್, ಆರೋಗ್ಯ ಕಾರ್ಯಕರ್ತೆಯರಾಗಿ ಮಹಿಳೆಯರು :** ಪ್ರಾಥಮಿಕ ಶಾಲೆಗಳಲ್ಲಿ ಎಳೆಯ ಮಕ್ಕಳಿಗೆ ಪಾಠ ಹೇಳಿಕೊಡುವ ಕೆಲಸವನ್ನು ಮಹಿಳೆಯರಿಗಿಂತ ಉತ್ತಮವಾಗಿ ಬೇರೆ ಯಾರಿಂದಲೂ ಮಾಡಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಅಂಗನವಾಡಿ ಟೀಚರ್ ಆಗಿ, ಆಶಾ (ಝಚೆ) ಕಾರ್ಯಕರ್ತೆಯರಾಗಿ, ನರ್ಸ್ ಆಗಿ ಎಂಬಂತೆ ಹಲವಾರು ಕ್ಷೇತ್ರಗಳಲ್ಲಿ ಮಹಿಳೆಯರು ಉದ್ಯೋಗಾವಕಾಶಗಳನ್ನು ಪಡೆಯಬಹುದಾಗಿದೆ.

**ಕಾಲ್‌ಸೆಂಟರ್ ಹುದ್ದೆಗಳು ಮತ್ತು ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ಎಕ್ಸಿಕ್ಯೂಟಿವ್ ಹುದ್ದೆಗಳು :** ಬಿಸಿನೆಸ್ ಪ್ರೋಸೆಸ್ ಔಟ್ ಸೋರ್ಸಿಂಗ್ (BPO) ಎನ್ನುವುದು ಮಹಿಳೆಯರಿಗೆ ಉದ್ಯೋಗ ಒದಗಿಸುವ ಹೊಸ ಕ್ಷೇತ್ರವಾಗಿದೆ. ಇದನ್ನು ಕಾಲ್ ಸೆಂಟರ್ ಜಾಬ್ ಎಂದು ಕೂಡಾ ಕರೆಯುತ್ತಾರೆ. ಇಂದು ಪ್ರತಿಯೊಂದು ಉತ್ಪಾದಕ ಕಂಪೆನಿಗಳು ಮತ್ತು ಸೇವೆ ಪೂರೈಕೆದಾರ ಕಂಪೆನಿಗಳು ಶುಲ್ಕ-ರಹಿತ ಗ್ರಾಹಕ ಸಹಾಯಕವಾಣಿ ಸಂಖ್ಯೆ ನೀಡಿ ನಿಮ್ಮ ಯಾವುದೇ ಸಂದೇಹ ನಿವಾರಣೆಗಾಗಿ/ದೂರು ನೀಡುವುದಕ್ಕಾಗಿ ಇಲ್ಲಿಗೆ ಕರೆ ಮಾಡಿ ಎಂದು ತಮ್ಮ ಜಾಹೀರಾತುಗಳಲ್ಲಿ ತಿಳಿಸಿರುವುದನ್ನು ನೋಡಿರಬಹುದು. ಮೊಬೈಲ್ ಕನೆಕ್ಷನ್, ಡಿಟಿಎಚ್ ಸೇವೆಗಳು, ಫ್ರಿಜ್, ಕಂಪ್ಯೂಟರ್ ಇತ್ಯಾದಿ ಉತ್ಪನ್ನಗಳು ಎಲ್ಲವೂ ಇಂತಹ ಸೇವೆಗಳನ್ನು ಒದಗಿಸುತ್ತವೆ. ಗ್ರಾಹಕರಿಗೆ ಸೇವೆ ನೀಡುವುದಕ್ಕಾಗಿ ಇಂತಹ ಕಂಪೆನಿಗಳು ತಮ್ಮ ಬಗ್ಗೆ ಸಹಾಯವಾಣಿ (ಹೆಲ್ಪ್‌ಲೈನ್) ಒದಗಿಸುವ ಕಾರ್ಯವನ್ನು ಯಾವುದೋ ನಗರದಲ್ಲಿರುವ ಬಿ.ಪಿ.ಓ ಕಂಪೆನಿಗೆ ಒದಗಿಸಿರುತ್ತದೆ. ಇಲ್ಲಿನ ಸಹಾಯಕರು (ಕಾಲ್ ಸೆಂಟರಿನವರು) ಗ್ರಾಹಕರ ಕರೆಯನ್ನು ಪಡೆಯುತ್ತಾರೆ ಹಾಗೂ ವಿನಮ್ರತೆಯಿಂದ ಮತ್ತು ಅತ್ಯಂತ ತಾಳ್ಮೆಯಿಂದ ಗ್ರಾಹಕರ ಅಹವಾಲುಗಳನ್ನು ಆಲೈಸುತ್ತಾರೆ. ಅವುಗಳನ್ನೆಲ್ಲಾ ಗುರುತಿಸಿಕೊಂಡು ಸಂಬಂಧಪಟ್ಟ ಕಂಪೆನಿಗೆ ವರದಿಯನ್ನು ಒಪ್ಪಿಸುತ್ತಾರೆ. ಈ ಪ್ರಕಾರವಾಗಿ ಸಂಗ್ರಹವಾಗಿರುವ ಮಾಹಿತಿಗಳ ಆಧಾರದಂತೆ ಕಂಪೆನಿಗಳು ತಮ್ಮ ಗ್ರಾಹಕರಿಗೆ ಸೇವೆಗಳನ್ನು ನೀಡುತ್ತವೆ. ಈ ಪ್ರಕಾರವಾದ ಸೇವೆಗಳು, ಏರ್‌ಟೆಲ್, ರಿಲೆಯೆನ್ಸ್, ಟಾಟಾ, ಗೋದ್ರೇಜ್, ಎಚ್‌ಪಿ, ಬಜಾಜ್ ಎಂಬಂತೆ ಎಲ್ಲಾ ಕಂಪೆನಿಗಳಿಗೂ ಬೇಕಾಗುತ್ತದೆ. ಶಿಫ್ಟ್ ಡ್ಯೂಟಿ ಆಧಾರದಂತೆ ಕಾಲ್ ಸೆಂಟರ್ ಜಾಬ್‌ಗಳು ನಡೆಯುತ್ತವೆ. ಇದಕ್ಕೆ ಹೆಚ್ಚಿನ ವಿದ್ಯಾರ್ಹತೆ ಬೇಕಾಗಿಲ್ಲ. ಎಸ್.ಎಸ್.ಎಲ್.ಸಿ, ಅಥವಾ ಪಿ.ಯು.ಸಿ. ಸಾಕಾಗಿರುತ್ತದೆ. ಆದರೆ ಇಂಗ್ಲೀಷ್ ಭಾಷೆಯನ್ನು ಚೆನ್ನಾಗಿ ಮಾತನಾಡಲು ತಿಳಿದಿರಬೇಕು. ಏಕೆಂದರೆ ಅಮೆರಿಕಾ, ಇಂಗ್ಲೆಂಡಿನಂತಹ ಮುಂದುವರಿದ ದೇಶಗಳಿಗೆ ನಮ್ಮ ದೇಶದಲ್ಲಿರುವ ಬಿ.ಪಿ.ಓ ಕಂಪೆನಿಗಳು ಸೇವೆ ಒದಗಿಸುತ್ತವೆ. ಇದಲ್ಲದೆ, ಎಂ.ಬಿ.ಎ ಮಾಡಿಕೊಂಡು ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ಎಕ್ಸಿಕ್ಯೂಟಿವ್ ಹುದ್ದೆಗಳನ್ನು ಕೂಡಾ ಮಹಿಳೆಯರು ಪಡೆಯಬಹುದು ಮತ್ತು ಪಡೆದಿದ್ದಾರೆ. ತಾನು ಹೊಕ್ಕಿರುವ ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯು ಇಂದು ಯಶಸ್ವಿಯಾಗಿ ಮುನ್ನಡೆಯುತ್ತಿದ್ದಾಳೆ.

ಆದ್ದರಿಂದ ಮಹಿಳೆ ಇಂದು ಆರ್ಥಿಕವಾಗಿ ಸ್ವತಂತ್ರಳಾಗಲು ಸಾಕಷ್ಟು ಅವಕಾಶಗಳಿವೆ. ವಿದ್ಯಾವಂತ ಮಹಿಳೆಗೆ ಸಮಾಜದಲ್ಲಿ ಮನ್ನಣೆ ಸಿಗುತ್ತಿದೆ. ಗಂಡನ ಹಣಕ್ಕಾಗಿ, ಆತನ ಕೃಪೆಗಾಗಿ ತಲೆ ಬಾಗಬೇಕಾಗಿಲ್ಲ. ಗುಲಾಮಳಾಗಿ ಅಡುಗೆ ಮನೆಯೊಳಗೆಯೇ ತನ್ನ ಜೀವನವನ್ನು ಸವೆಸ ಯಬೇಕಾಗಿಲ್ಲ. ಸಮಾಜ ಬದಲಾಗುತ್ತಿದೆ, ಟೆಕ್ನಾಲಜಿ ಕ್ರಾಂತಿಯ ಕಹಳೆಯನ್ನು ಊದಿದೆ. ಮಹಿಳೆಯರಿಗೆ ಹೊಸ ಶಕ್ತಿಯನ್ನು ತಂದುಕೊಟ್ಟಿದೆ.

❑ ಎ.ವಿ. ಚಿತ್ತರಂಜನ್ ದಾಸ್

# ವಿಶಿಷ್ಟ ಚೇತನರ ಅದ್ಭುತ ನೃತ್ಯ

ರಾಜಧಾನಿ ದೆಹಲಿಯಲ್ಲಿ 'ಡ್ಯಾನ್ಸ್ ಆನ್ ವೀಲ್ಸ್' ಎಂಬ ವಿಶಿಷ್ಟ ನೃತ್ಯ ಪ್ರಕಾರದ ಮೂಲಕ ವಿಶಿಷ್ಟ ಚೇತನರಲ್ಲಿ (ಅಂಗವಿಕಲರು) ಆತ್ಮವಿಶ್ವಾಸ ತುಂಬಿ ಅವರನ್ನು ಅಸಾಮಾನ್ಯ ಕಲಾವಿದರನ್ನಾಗಿ ರೂಪಿಸಿದ ಹೆಗ್ಗಳಿಕೆ ಗುರು ಸಯ್ಯದ್ ಸಲಾವುದ್ದೀನ್ ಪಾಶಾ ಅವರದ್ದು. ಫೆಬ್ರವರಿ 12 ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮವನ್ನು ನೋಡಿ ಮೂಕವಿಸ್ಮಿತರಾಗದವರಿಲ್ಲ. ಅವರು ವೀಲ್ ಚೇರ್ ಹತ್ತಿ ನರ್ತಿಸತೊಡಗಿದರೆ ವೀಕ್ಷಕರು ಬಿಟ್ಟಬಾಯಿ ಬಿಟ್ಟಂತೆ ವೀಕ್ಷಿಸುತ್ತಾರೆ; ಕೈಗಳು ತಂತಾನೆ ಚಪ್ಪಾಳೆ ತಟ್ಟುತ್ತವೆ.

ಕಾರ್ಯಕ್ರಮದ ಮೊದಲಿಗೆ ಇತ್ತೀಚೆಗೆ ನಮ್ಮನ್ನಗಲಿದ ಸರಳ ಸಜ್ಜನಿಕೆಯ



ರಾಜಕಾರಣಿ ಎಂ.ಪಿ.ಪ್ರಕಾಶ್ ಅವರಿಗೆ ಒಂದು ನಿಮಿಷದ ಮೌನಾಚರಣೆಯೊಂದಿಗೆ ಅಗಲಿದ ಚೇತನಕ್ಕೆ ಶಾಂತಿಕೋರಲಾಯಿತು. ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ರೇಣುಕುಮಾರ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಜ್ಜನ ರಾಜಕಾರಣಿಯೆಂದೇ ನಾಡಿನಾದ್ಯಂತ ಜನಪ್ರಿಯರಾದ ಎಂ.ಪಿ.ಪ್ರಕಾಶ್ ಅವರು ಸಂಸ್ಕೃತಿ, ಸಾಹಿತ್ಯ ಮತ್ತು ಚರಿತ್ರೆಗಳ ಕುರಿತು ಅಪಾರ ಜ್ಞಾನ ಹೊಂದಿದ್ದರು. ಅವರಂಥ ವೈಚಾರಿಕ ಮನೋಭಾವದ ರಾಜಕಾರಣಿಯನ್ನು ಕಳೆದುಕೊಂಡದ್ದು ಕನ್ನಡಿಗರ ನಷ್ಟ ಎಂದು ಸ್ಮರಿಸಿದರು.

'ಎಬಿಲಿಟಿ ಅನ್‌ಲಿಮಿಟೆಡ್ ಫೌಂಡೇಷನ್' ಸಂಸ್ಥಾಪಕ ಪಾಶಾ ಎಳೆ ವಯಸ್ಸಿನ ಪ್ರತಿಭಾಶಾಲಿ ವಿಶಿಷ್ಟ ಚೇತನರ ಹಣೆಬರಹವನ್ನೇ ತಿದ್ದಿಬಿಟ್ಟಿದ್ದಾರೆ. ಕಾಲುಗಳು ಊನ ಅಥವಾ ದುರ್ಬಲಗೊಂಡಿದ್ದರೇನಂತೆ ಭರತನಾಟ್ಯ ಹಾಗೂ ವಿವಿಧ ಮಾದರಿಯ ನೃತ್ಯಕ್ಕೆ ಇವು ಅಡ್ಡಿಯಲ್ಲ ಎಂಬುದನ್ನು 'ಡ್ಯಾನ್ಸ್ ಆನ್ ವೀಲ್ಸ್ (ಗಾಲಿಯ ಮೇಲೆ ನೃತ್ಯ)' ಎಂಬ ಕ್ರಿಯಾತ್ಮಕ ಕಲ್ಪನೆಯಿಂದ ಸಾಬೀತುಪಡಿಸಿದ್ದಾರೆ ಪಾಶಾ. "ಕಳೆದ 10 ವರ್ಷಗಳಿಂದ ನಾನು ದೆಹಲಿಯ ವಿಶಿಷ್ಟ ಚೇತನರ ಅಭ್ಯುದಯಕ್ಕೆಂದೇ ಕೆಲಸ ಮಾಡುತ್ತಿದ್ದು, ಸುಮಾರು 150ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ನಮ್ಮ ಸಂಸ್ಥೆಯಿಂದ ನೃತ್ಯ ಚಿಕಿತ್ಸೆ- ಶಿಕ್ಷಣ ಪಡೆಯುತ್ತಿದ್ದಾರೆ. ನಮ್ಮಲ್ಲಿನ ಹೆಚ್ಚಿನ ಬಾಲಕಿಯರಿಗೆ ಮಾತು ಬರುವುದಿಲ್ಲ, ಕಿವಿಯೂ ಕೇಳುವುದಿಲ್ಲ. ಆದರೆ ಇಲ್ಲಿಗೆ ಬಂದ ಮೇಲೆ ಅವರಲ್ಲಿ ಬೇಸರ ಅಥವಾ ವಿಮುಖಗೊಂಡ ಭಾವನೆಯಾಗಲಿ ಕಂಡಿಲ್ಲ. ಕಲಾ ಲೋಕದಲ್ಲಿ ತಲ್ಲೀನರಾಗಿ ಪ್ರತಿಭೆ ಅನಾವರಣಗೊಳಿಸಿ ಇತರ ನೃತ್ಯಪಟುಗಳ ಹುಬ್ಬೇರುವಂತೆ ಮಾಡಿದ್ದಾರೆ" ಎಂದು ಪಾಶಾ ಹೆಮ್ಮೆಯಿಂದ ಹೇಳುತ್ತಿದ್ದಾಗ ಅವರ ಮೊಗದಲ್ಲಿ ಸಾರ್ಥಕ ಭಾವ ಎದ್ದುಕಾಣುತ್ತದೆ.

ರಾಜಧಾನಿ ದೆಹಲಿಯಲ್ಲಿ ಸದ್ದಿಲ್ಲದೆ ಕ್ರಿಯಾತ್ಮಕ ನೃತ್ಯ ಪ್ರಕಾರಗಳಲ್ಲಿ ತೊಡಗಿಸಿಕೊಂಡಿರುವ ಪಾಶಾ ಮೂಲತಃ ಬೆಂಗಳೂರಿನ ಆನೇಕಲ್‌ನವರು. ಮುಸ್ಲಿಂ ಕುಟುಂಬದಲ್ಲಿ ಜನಿಸಿದರೂ ಹಿಂದೂ ಧರ್ಮವನ್ನು ಸತತವಾಗಿ ಅಭ್ಯಸಿಸಿರುವ ಪಾಶಾ ಅಚ್ಚ ಕನ್ನಡಿಗ. ಉಪನಿಷತ್ತು ಹಾಗೂ ಭಗವದ್ಗೀತೆಯ ಶ್ಲೋಕಗಳನ್ನು ಅರ್ಥ ಸಹಿತ ವಿವರಿಸುತ್ತ ಶ್ಲೋಕಗಳೊಂದಿಗೆ ಕುರಾನಿನ 'ಸುರಾ'ಗಳನ್ನು ಮೇಳೈಸುವ ಅವರು ಹಿಂದೂ-ಮುಸ್ಲಿಂ ಸಮನ್ವಯತೆಯ ಪ್ರತೀಕದಂತಿದ್ದಾರೆ.

ದೇಶ ವಿದೇಶಗಳಲ್ಲಿ 10,000ಕ್ಕೂ ಹೆಚ್ಚು ಪ್ರದರ್ಶನ ನೀಡಿ ವಿಶ್ವದಾಖಲೆ ಮಾಡಿರುವ ಈ ಕಾರ್ಯಕ್ರಮಗಳು ವಿಕಲ ಚೇತನರ ಘನತೆ, ಸಮಾನತೆ ಮತ್ತು ಶಕ್ತಿ ಸಾಮರ್ಥ್ಯವನ್ನು ಅನಾವರಣಗೊಳಿಸುತ್ತವೆ. ವ್ಹೀಲ್ ಚೇರ್ ಮೇಲೆ ಭರತನಾಟ್ಯ, ಸೂಫಿ ನೃತ್ಯ, ಅಪಾಯಕಾರಿ ಕತ್ತಿ ಕಾಳಗ, ಯೋಗ, ದುರ್ಗಾ ಮತ್ತು ಭಗವದ್ಗೀತೆ ನೃತ್ಯರೂಪಕಗಳು ವಿಶ್ವದ ಇತಿಹಾಸದಲ್ಲೇ ಪ್ರಪ್ರಥಮ. 30 ವರ್ಷಗಳಿಂದ ನಿರಂತರ ಅಂಗವಿಕಲರಿಗೆ ಸೇವೆ ನೀಡುತ್ತಿರುವ



# –"Dance on Wheels"



ಗುರು ಪಾಷಾರವರು ಸಂತ ಶಿಶುನಾಳ ಶರೀಫರಾಗಿ "ಈಶ್ವರ ಅಲ್ಲಾ–ನೀನೆ ಎಲ್ಲಾ" ಎಂಬ ಕನ್ನಡ ಧಾರಾವಾಹಿಯಲ್ಲಿ ಮತ್ತು ಕನ್ನಡ ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಭಾರತದ ಪ್ರಥಮ ಮುಸ್ಲಿಂ ಭರತನಾಟ್ಯ ಕಲಾವಿದರೆಂಬ ಹೆಗ್ಗಳಿಕೆ ಇವರದು. ವಿಶ್ವದಾದ್ಯಂತ ಅಭೂತಪೂರ್ವ ನೃತ್ಯ ಕಾರ್ಯಕ್ರಮ ನೀಡಿ, ಲಕ್ಷಾಂತರ ಅಂಗವಿಕಲರ ಕಲೆಯ ಮೂಲಕ ಸಾಮಾಜಿಕ ಆಂದೋಲನವನ್ನು ಮಾಡಿರುವ ಸೇವೆಗಾಗಿ ಇವರಿಗೆ 2007ರಲ್ಲಿ ಭಾರತದ ರಾಷ್ಟ್ರಪತಿ ಶ್ರೀಮತಿ ಪ್ರತಿಭಾಸಿಂಗ್ ದೇವಿ ಪಾಟೀಲ್‌ರವರು ರಾಷ್ಟ್ರಪ್ರಶಸ್ತಿ ನೀಡಿ ಸನ್ಮಾನಿಸಿದ್ದಾರೆ.

ಛಲ ಬಿಡದೆ ಭರತನಾಟ್ಯ ಮತ್ತು ಕಥಕ್ ಸೇರಿದಂತೆ ವಿವಿಧ ನೃತ್ಯ ಕಲಾ ಪ್ರಕಾರಗಳಲ್ಲಿ ವೃತ್ತಿಪರ ತರಬೇತಿ ಪಡೆದ ಪಾಶಾ ವಿಶಿಷ್ಟ ಚೇತನರಿಗೆಂದೇ ವಿಶೇಷ ನೃತ್ಯ ವೈದ್ಯಶಾಸ್ತ್ರವನ್ನು ಸಂಶೋಧಿಸಿದ್ದಾರೆ. ಕಾರ್ನೆಲ್ ವಿಶ್ವವಿದ್ಯಾಲಯದಲ್ಲಿ ಅಂತರ ರಾಷ್ಟ್ರೀಯ ಸ್ಕಾಲರ್ ಆಗಿ ಕಾರ್ಯನಿರ್ವಹಿಸಿ, ಫಿನ್‌ಲ್ಯಾಂಡ್‌ನ ಹಲವು ವಿಶೇಷ ನೃತ್ಯ ಶಾಲೆಗಳಲ್ಲಿ ನಾಟ್ಯ ನಿರ್ದೇಶಕರಾಗಿ, ವಿದೇಶಗಳಲ್ಲಿನ ವಿಶಿಷ್ಟ ಚೇತನರಿಗೆ ಹೊಸಬದುಕನ್ನು ನೀಡಿದ್ದಾರೆ. ಹಾಗೇ ಮಲೇಷ್ಯಾದ ಸೂತ್ರ ಡ್ಯಾನ್ಸ್ ಥಿಯೇಟರ್, ಅಮೆರಿಕ ಮತ್ತು ಇಂಗ್ಲೆಂಡ್‌ನಲ್ಲೂ ವಿಶಿಷ್ಟ ಚೇತನರೊಂದಿಗೆ ಬೆರೆತು ಅವರ ಪ್ರತಿಭೆಯನ್ನು ಪೋಷಿಸಿ ಬೆಳೆಸಿದ್ದಾರೆ. ಅವರ ಈ ಸಾಧನೆಗೆಂದೇ ಅಮೆರಿಕ ಅವರಿಗೆ '21ನೇ ಶತಮಾನದ ಕಬೀರ್‌ದಾಸ್' ಎಂಬ ಬಿರುದನ್ನು ನೀಡಿ ಗೌರವಿಸಿದೆ ಹಾಗೂ ಸಂಸ್ಕೃತಿ ಪ್ರತಿಷ್ಠಾನ ಪ್ರಶಸ್ತಿಯನ್ನೂ ಪಡೆದಿದ್ದಾರೆ. ಈ ಬಾರಿ, ಸಿಎನ್‌ಎನ್ ಐಬಿಎನ್2 ಸುದ್ದಿ ಮಾಧ್ಯಮ ಸಂಸ್ಥೆ 'ಸೂಪರ್ ಐಡಲ್ ಮೇಕರ್' ಪ್ರಶಸ್ತಿ ನೀಡಿ ಗೌರವಿಸಿದೆ.



**ತನ್ನ ನೃತ್ಯ ಪ್ರತಿಭೆ ಹಾಗೂ ಕಲಾ ಸಾಮರ್ಥ್ಯವನ್ನು ಕೇವಲ ತನಗೆ ಮಾತ್ರ ಸೀಮಿತ ಪಡಿಸದೆ ವಿಶಿಷ್ಟ ಚೇತನರ ಶ್ರೇಯಾಭಿವೃದ್ಧಿಗಾಗಿ ಮೀಸಲಿಟ್ಟ ಪಾಶಾ ಉಳಿದ ಎಲ್ಲಾ ನೃತ್ಯ ಗುರು ಅಥವಾ ನೃತ್ಯ ಪಟುಗಳಿಗಿಂತ ಭಿನ್ನರಾಗಿ ಕಾಣುತ್ತಾರೆ. "ವೈಕಲ್ಯ ಇರುವುದು ಅಂಗಗಳಲ್ಲಲ್ಲ, ನಮ್ಮ ಮನಸ್ಸಿನಲ್ಲಿ" ಎನ್ನುತ್ತಾರೆ ಅವರು.**

**ಆಸ್ಪತ್ರೆಯಲ್ಲಿ ರೋಗಿಗಳಿಗೆ ಬಳಸಲಾಗುವ ಗಾಲಿಕುರ್ಚಿ ಹಾಗೂ ಊರುಗೋಲುಗಳೇ ನೃತ್ಯಕ್ಕೆ ಮುಖ್ಯ ಆಧಾರಗಳು. ಗಾಲಿಕುರ್ಚಿಯ ಮೇಲೆ ಕುಳಿತೇ ಸುಮಾರು ಎರಡು ಗಂಟೆಗಳಷ್ಟು ದೀರ್ಘ ಕಾಲ ಭರತನಾಟ್ಯ ಪ್ರದರ್ಶಿಸುವ ಕಲೆ ಇಲ್ಲಿನ ವಿದ್ಯಾರ್ಥಿಗಳಿಗೆ ಸಿದ್ಧಿಸಿದೆ. ಗಾಲಿಕುರ್ಚಿಯನ್ನು ರಂಗಪರಿಕರವಾಗಿ ಬಳಸುವುದೂ ಈ ನೃತ್ಯಪ್ರಕಾರದ ವಿಶೇಷಗಳಲ್ಲೊಂದು. ಗಾಲಿಕುರ್ಚಿಯನ್ನು ರಥವಾಗಿಸಿ  ಕೃಷ್ಣ ಭಗವದ್ಗೀತೆ ಬೋಧನೆ ಮಾಡುವ ನೃತ್ಯ, ಗಾಲಿಕುರ್ಚಿಯಲ್ಲೇ ಭರತನಾಟ್ಯ ಮಾತ್ರವಲ್ಲದೆ ಅಪಾಯಕಾರಿ ಸಾಹಸ ಕಲೆಗಳು (ಮಾರ್ಷಲ್ ಆರ್ಟ್ಸ್) ಮಾಡುವ ಕೌಶಲ್ಯ, ಸ್ವಾತಂತ್ರ್ಯ ನೃತ್ಯ, ಸೂಫಿ ನೃತ್ಯ, ಚಕ್ರದ ಮೇಲೆ ಯೋಗ... ಹೀಗೆ ನಾನಾ ಪ್ರಕಾರದ ನೃತ್ಯಾವಳಿಗಳ ಮೂಲಕ ಈ ವಿದ್ಯಾರ್ಥಿಗಳು ದೆಹಲಿ ಕನ್ನಡಿಗರ ಮನಸೂರೆಗೊಂಡರು. ಇಂದು ನಾಟ್ಯ ಲೋಕದಲ್ಲೇ ಸಂಚಲನ ಮೂಡಿಸಿರುವ ಈ ನೃತ್ಯ ಪ್ರಕಾರವನ್ನು ಪಾಶಾ ಸತತ ಐದು ವರ್ಷಗಳ ಕಾಲ ಶ್ರಮಪಟ್ಟು ವಿಶಿಷ್ಟ ಚೇತನರಿಗೆಂದೇ ವಿಶೇಷವಾಗಿ ರೂಪಿಸಿದ್ದಾರೆ.**

**ಅಂಗವಿಕಲರೆಂದರೆ ರೇಜಿಗೆ ಪಡುವ ಮನಸ್ಸುಗಳಿಗೆ ಪಾಠವಾಗಿದ್ದಾರೆ ಪಾಶಾ. ಮೂರು–ನಾಲ್ಕು ಗಂಟೆಗಳ ಕಾಲ ವೇದಿಕೆಯಲ್ಲಿ ವಿಶಿಷ್ಟ ಚೇತನರ ಪ್ರತಿಭಾ ಪ್ರದರ್ಶನ ನಮಗೆ ಬಹುದೊಡ್ಡ ಮನೋರಂಜನೆಯಾಗಿ ಕಂಡುಬಂದರೂ, ಅದರ ಹಿಂದಿನ ಪರಿಶ್ರಮ, ತಾಳ್ಮೆ, ಬದ್ಧತೆ ನಮಗೆ ಪಾಠವಾಗುತ್ತವೆ. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ, ಡಾ.ವೆಂಕಟಾಚಲ ಹೆಗಡೆಯವರು ಪುಷ್ಪ ಗುಚ್ಛ, 'ದ ವೀಕ್' ಪತ್ರಿಕೆಯ ಸಂಪಾದಕರಾದ ಶ್ರೀ ಸಚ್ಚಿದಾನಂದಮೂರ್ತಿಯವರು ಶಾಲು ಹೊದೆಸಿ, ಸಂಘದ ಸ್ಮರಣಿಕೆ ನೀಡಿ ಗುರು ಪಾಷ ಅವರನ್ನು ಗೌರವಿಸಿದರು. ಎಲ್ಲಾ ಕಲಾವಿದ ಮಕ್ಕಳಿಗೆ ಪುಟ್ಟ ಕಾಣಿಕೆ ನೀಡಿ ಪ್ರೋತ್ಸಾಹಿಸಲಾಯಿತು. ವಿಶಾಲ ಮನೋಭಾವದ ಕನ್ನಡಿಗರು ವಿಶಿಷ್ಟ ಚೇತನವನ್ನು ಪ್ರೋತ್ಸಾಹಿಸುವ ಸಲುವಾಗಿ ಉದಾರತೆಯಿಂದ ದೇಣಿಗೆ ನೀಡಿದರು. ಸಂಘದ ಕಾರ್ಯದರ್ಶಿ, ಸಿ.ಎಂ.ನಾಗರಾಜ್ ವಂದಿಸಿದರು.**

**ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿರುವ ಅಪ್ಪಟ ಕನ್ನಡಿಗ ಪಾಷಾ ತಮ್ಮ ನೃತ್ಯ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಯಶಸ್ಸು ಸಾಧಿಸಲಿ; ಕರ್ನಾಟಕದ ಹಿರಿಮೆಯನ್ನು ವಿಶ್ವದಾದ್ಯಂತ ಸಾರಲಿ ಎಂದು ಆಶಿಸುತ್ತೇವೆ.**



# ಸಣ್ಣಪುಟ್ಟ ಸಾಧನೆಗಳನ್ನು ಕೂಡಾ ಗುರುತಿಸುವಂತಹ ಶ್ರೇಷ್ಠ ಸಂಸ್ಕೃತಿ ಕನ್ನಡಿಗರದು"




ಕರ್ನಾಟಕದ ಉದ್ದಗಲಕ್ಕೂ ನಡೆದಾಡುತ್ತಾ ಕನ್ನಡ ನೆಲದ ಬಹುಮುಖಿ ಸಂಸ್ಕೃತಿಯ ಒಡನಾಟವನ್ನು ಅಪಾರವಾದ ಲೋಕಾನುಭವವನ್ನು ಪಡೆದಿರುವ, ನಾಡು ನುಡಿಗಳ ಪರವಾದ ಜನದನಿಯನ್ನು ರೂಪಿಸುವಲ್ಲಿ ಲೇಖಕರಿರಬೇಕಾದ ಸಾಂಸ್ಕೃತಿಕ ಹೊಣೆಗಾರಿಕೆಯನ್ನು ಕಾಯ್ದುಕೊಂಡು ಬಂದಿರುವ ಕೆಲವೇ ಲೇಖಕರುಗಳಲ್ಲಿ ಡಾ. ರಹಮತ್ ತರೀಕೆರೆಯವರು ಒಬ್ಬರು. ಇವರ 'ಕತ್ತಿಯಂಚಿನ ದಾರಿ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘವು 18.2.2011ರಂದು ಸಂಜೆ ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಿತ್ತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ರಹಮತ್ ತರೀಕೆರೆ ಅವರು "ಕನ್ನಡಿಗರು ಹೃದಯ ಶ್ರೀಮಂತರು. ಕೆಲವೇ ಕಾವ್ಯಗಳೋ, ಕಥಾ ಸಂಗ್ರಹಗಳೋ ಎಂಬಂತೆ ಯಾವುದೇ ಸಣ್ಣ–ಪುಟ್ಟ ಕಾರ್ಯಗಳನ್ನು ಮಾಡಿರುವ ಸಾಹಿತಿಗಳಿಗೆ ಪ್ರೋತ್ಸಾಹ ಮತ್ತು ಗೌರವವನ್ನು ನೀಡುವ ವಿಶೇಷವಾದ ಗುಣ ಕನ್ನಡಿಗರಲ್ಲಿದೆ. ದೊಡ್ಡ ದೊಡ್ಡ ಸಾಹಿತಿಗಳಿಗೆ ಬಿರುದು ಸಮ್ಮಾನಗಳನ್ನು ನೀಡಿ ಗೌರವಿಸುವಂತೆಯೇ ಪುಟ್ಟ ಸಾಹಿತಿಗಳಿಗೂ ಕೂಡಾ ಸಣ್ಣ ಪುಟ್ಟ ಸಮ್ಮಾನಗಳು ಸಿಗುತ್ತವೆ ಮತ್ತು ಇದರಿಂದಾಗಿ ಕನ್ನಡವೂ ಕೂಡಾ ಬೆಳೆಯುತ್ತದೆ". ಎಂದ ರಹಮತ್ ಅವರು 'ಕನ್ನಡದ ಓದುಗರು ನನ್ನ ಬರಹಕ್ಕೆ ಯೋಗ್ಯತೆಗೂ ಮೀರಿದ ಮನ್ನಣೆ ಕೊಟ್ಟಿದ್ದಾರೆ ಎಂದು ಹೇಳಿ ಕವಿ ನಿಸ್ಸಾರ್ ಅಹಮದ್ ಅವರನ್ನು ತಾವು ಸಂದರ್ಶಿಸಿದ ಸಂದರ್ಭದಲ್ಲಿ 'ನೋಡಯ್ಯಾ ನಾವು ನಮ್ಮ ಮಾತೃ ಭಾಷೆಯಲ್ಲಿ (ಉರ್ದು) ಬರೆಯಲಿಲ್ಲ ಅಂತಹ ಕೊರಗು ನಮಗೆ ಇದ್ದದ್ದೇ. ಆದರೆ ಕನ್ನಡದಲ್ಲಿ ಮಾತ್ರ ಒಂದು ಸಣ್ಣ ಪುಟ್ಟ ಬರಹಕ್ಕೂ ದೊಡ್ಡ ಗೌರವ ಕೊಡುತ್ತಾರೆ.. .' ಎಂಬ ನಿಸ್ಸಾರರ ಮಾತುಗಳನ್ನು ನೆನಪಿಸಿಕೊಂಡರು. ಇಂತಹ ವಿಶಾಲ ಹೃದಯದ ಕನ್ನಡಿಗರ ಪ್ರೀತಿಯನ್ನು ಅನುಭವಿಸಲು ಅವಕಾಶ ಸಿಕ್ಕಿರುವುದು ನನಗೆ ಸಂತೋಷ ತಂದಿದೆ. ಈ ಪ್ರೀತಿಯ ಋಣವನ್ನು ತೀರಿಸಲು ಇನ್ನೂ ಹೆಚ್ಚು ಪರಿಶ್ರಮ ಪಡುತ್ತೇನೆ ಎಂದರು.

ಡಾ. ರಹಮತ್ ಅವರು ತಮ್ಮ ಕುಟುಂಬ ನಾಲ್ಕು ತಲೆಮಾರುಗಳಿಂದ ಕನ್ನಡ ಭಾಷೆ ಮತ್ತು ಸಮಾಜದ ಜೊತೆಜೊತೆಗೆ ಇರಿಸಿಕೊಂಡು ಬಂದಿರುವ ಒಡನಾಟವನ್ನು, ಇವರ ತಾಯಿ ವಠಾರದ ಮಹಿಳೆಯರನ್ನೆಲ್ಲಾ ಒಂದುಗೂಡಿಸಿಕೊಂಡು ನಡೆದಿದ್ದು ನಡೆದ ಹಾಗೆಯೇ ಎಂಬ ರೀತಿಯಲ್ಲಿ ತಾನು ನೋಡಿ ಬಂದ ಸಿನೆಮಾದ ಕಥೆಗಳನ್ನು ಎಲ್ಲರಿ

ಗೂ ರಸವತ್ತಾಗಿ ತಿಳಿಸುತ್ತಿದ್ದರು ಮತ್ತು ತನ್ನ ಸಾಹಿತ್ಯ ಕೃಷಿಗೆ ಇದು ಸಾಕಷ್ಟು ಪ್ರೇರಣೆ ನೀಡಿದೆ ಎಂದರು. ಪತ್ನಿ ಸಮೇತರಾಗಿ ಬಂದಿದ್ದ ರಹಮತ್ ತರಿಕೆರೆ ಅವರು ಪ್ರಶಸ್ತಿ ಪಡೆದಿರುವ ಕೃತಿ 'ಕತ್ತಿಯಂಚಿನ ದಾರಿ' ಯನ್ನು ಪತ್ನಿಗೆ ಸಮರ್ಪಿಸಿ 'ನನ್ನ ಕೈ ಹಿಡಿದಾಕೆ ಬಾನುಗೆ' ಎಂದು ಒಳಪುಟದ ಆರಂಭದಲ್ಲಿ ಬರೆದಿದ್ದಾರೆ.

ಚಿನ್ನದ ಪದಕ ಬರುವುದು ಕೂಡಾ ಒಂದು ಶಾಪ:

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಡಾ. ಪುರುಷೋತ್ತಮ ಬಿಳಿಮಲೆ ಅವರು ತಮ್ಮ ನಿಡುಗಾಲದ ಗೆಳೆಯ ಡಾ.ರಹಮತ್ ತರೀಕೆರೆಯವರ ಜೊತೆಗಿನ 30 ವಸಂತಗಳ ಮಾಸದ ಗೆಳೆತನವನ್ನು ಕುರಿತು ಹೇಳುತ್ತಾ ಹಾಗೂ ಅವರ ಸಾಹಿತ್ಯ ಸಂಸ್ಕೃತಿಗಳ ಸೇವೆಯನ್ನು ಎಳೆಎಳೆಯಾಗಿ ಒಂದು ಶ್ರವ್ಯ ಕಾವ್ಯದ ರೀತಿಯಲ್ಲಿ ವರ್ಣಿಸುತ್ತಾ "ಎಂ.ಎ. ನಲ್ಲಿ ಚಿನ್ನದ ಪದಕಗಳಿಸಿ ರಹಮತ್ ಅವರು ತವರೂರು ತರೀಕೆರೆಗೆ ಬಂದಿಳಿದಾಗ ಅಲ್ಲಿನ ಪೋಲಿಸನೊಬ್ಬನಿಂದ ಸಂಶಯಕ್ಕೀಡಾದ ಸನ್ನಿವೇಶವನ್ನು ಕುರಿತು 'ಎಷ್ಟೋ ಬಾರಿ ಬಡತನದಿಂದ ಬಂದ ಪ್ರತಿಭಾನ್ವಿತರಿಗೆ ಚಿನ್ನದ ಪದಕ ಬರುವುದು ಕೂಡಾ ಒಂದು ಶಾಪದ ತರ ಕಾಣುತ್ತದೆ" ಎಂಬುದಾಗಿ ಬಡತನ ಮತ್ತು ನಮ್ಮ ವ್ಯವಸ್ಥೆಗಳು ಎಂತಹ ಕ್ರೂರ ಎಂಬುದನ್ನು ವಿವರಿಸಿದರು.

**ರಹಮತ್ ಒಬ್ಬ ವಿಭಿನ್ನ ವಿಮರ್ಶಕ :** ಸಮಕಾಲೀನ ಕನ್ನಡ ಸಾಹಿತ್ಯದ ಸೂಕ್ಷ್ಮ ಚಿಂತಕರಲ್ಲಿ ಒಬ್ಬರಾದ ರಹಮತ್ ಅವರು ಕನ್ನಡ ಮನಸ್ಸು ವಿಭಿನ್ನ ರೀತಿಯಲ್ಲಿ ಅಲೋಚಿಸಬೇಕಾದ ಅಗತ್ಯತೆಯನ್ನು ಗುರುತಿಸಿ ಅದಕ್ಕೆ ಮಾರ್ಗ ಹಾಕಿಕೊಟ್ಟವರಾಗಿದ್ದಾರೆ ರಹಮತ್ ಅವರಲ್ಲಿ ಒಬ್ಬ ಹೋರಾಟಗಾರನಿದ್ದಾನೆ, ಒಬ್ಬ ಸಾಹಿತ್ಯ ವಿದ್ಯಾರ್ಥಿ ಇದ್ದಾನೆ ಹಾಗೆಯೇ ಒಬ್ಬ ಜಾನಪದ ಕ್ಷೇತ್ರ ಕಾರ್ಯದ ಸಾಮರ್ಥ್ಯವುಳ್ಳ ಸಂಶೋಧಕನಿದ್ದಾನೆ. ಈ ರೀತಿಯಲ್ಲಿ ಬಿಳಿಮಲೆ ಅವರು ರಹಮತ್ ಅವರು ಇತರ ಲೇಖಕರಿಗಿಂತ ಹೇಗೆ ಭಿನ್ನ ಎಂಬುದನ್ನು ತಿಳಿಸುವ ಪ್ರಯತ್ನ ಮಾಡಿದರು. ಅವರು ಹೇಳುವಂತೆ 'ರಹಮತ್ ಒಬ್ಬ ಸಂತನ ಹಾಗೆ ಕನ್ನಡ ನಾಡಿನ ಉದ್ದಗಲಕ್ಕೂ ಸುತ್ತಾಡಿ ನೈಜ ಅನುಭವಗಳನ್ನು ಪಡೆದು ಕನ್ನಡ ಸಂಸ್ಕೃತಿ ಮತ್ತು ಸಾಹಿತ್ಯ ಪರಂಪರೆಯೊಂದಿಗೆ ನಿರಂತರ ಅನುಸಂದಾನ ಇರಿಸಿಕೊಂಡಿರುವ ದಣಿವರಿಯದ ಕ್ರಿಯಾಶೀಲ ಲೇಖಕ' ಈ ರೀತಿಯಲ್ಲಿ ರಹಮತ್ ಅವರಿಗೆ ಒಬ್ಬ ಜಾನಪದ ವಿದ್ಯಾರ್ಥಿಯಲ್ಲಿ ಮಾತ್ರ ಕಾಣಸಿಗುವ ಆಳವಾದ ಕ್ಷೇತ್ರ ಕಾರ್ಯ ಸಾಮರ್ಥ್ಯ ಇದೆ.

**ರಹಮತ್ ಒಬ್ಬ ಹೋರಾಟಗಾರ :** ರಹಮತ್ ಅವರ ಮತ್ತೊಂದು ವ್ಯಕ್ತಿತ್ವ ಒಬ್ಬ ಹೋರಾಟಗಾರನದ್ದು. ಬಹುಪಾಲು ಬರಹಗಾರರಂತೆ ಕೇವಲ ಬರೆದು ಸುಮ್ಮನೆ ಕುಳಿತುಕೊಳ್ಳುವವರಲ್ಲ ಇವರು. ಜನದನಿ ಎಚ್ಚೆತ್ತಾಗ ಮಾತ್ರ 'ಧನ ದನಿ ಬೆಚ್ಚಿಬೀಳುತ್ತದೆ' ಆದರೆ ಈ ರೀತಿ ಜನದನಿಯನ್ನು ಸದಾಕಾಲ ಎಚ್ಚರಗೊಳಿಸುವಂತೆ ಮಾಡಲು ಬರಹಗಾರ ಏಕಕಾಲಕ್ಕೆ ಒಬ್ಬ ಹೋರಾಟಗಾರನೂ, ಚಿಂತಕನೂ ಆಗಿರಬೇಕಾದ ಅಗತ್ಯ ಇದೆ ಆಗ ಮಾತ್ರ ವ್ಯವಸ್ಥೆಗೆ ಶರಣಾಗಿ ಜಡಗೊಂಡಿರುವ ಜನಸಮೂಹವನ್ನು ಹೋರಾಟಕ್ಕೆ ಸಜ್ಜುಗೊಳಿಸಲು ಸಾಧ್ಯ. ರಹಮತ್ ಅವರು ಕನ್ನಡ ವಿಶ್ವವಿದ್ಯಾಲಯದ ಸ್ವಲ್ಪ ಭೂಮಿಯನ್ನು ಸ್ಥಳೀಯ ಪ್ರಭಾವಿ ರಾಜಕಾರಣಿಗಳು ಅನ್ಯ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಮುಂದಾದಾಗ ಇಡೀ ನಾಡಿನಾದ್ಯಂತ ಜನದನಿಯನ್ನು ಎಚ್ಚರಗೊಳಿಸಿ, ತಮ್ಮ ಡೀನ್ ಹುದ್ದೆಗೆ ರಾಜೀನಾಮೆ ನೀಡಿ ನಾಡುನುಡಿಗಳಿಗೆ ಆಗಬಹುದಾದ ಅನಾನುಕೂಲಗಳನ್ನು ತಪ್ಪಿಸುವ ಹೋರಾಟದ ಮುಂಚೂಣಿಯನ್ನು ವಹಿಸಿ ಕನ್ನಡ ವಿಶ್ವವಿದ್ಯಾಲಯದ ಭೂಮಿ ಅನ್ಯ ಉದ್ದೇಶಕ್ಕೆ ಬಳಕೆಯಾಗದಂತೆ ತಡೆದರು. ಒಂದು ನೈತಿಕ ಧೈರ್ಯದಿಂದ ಜನವಿರೋಧಿ ಧೋರಣೆಗಳ ವಿರುದ್ಧ ಹೋರಾಟಕ್ಕಿಳಿದಾಗ ಇಡೀ ಕರ್ನಾಟಕದ ಜನತೆ ಅವರ ಬೆನ್ನಿಗೆ ನಿಂತಿತು. ಈ ಮೂಲಕ ಜೀವನದಲ್ಲಿ ಎಲ್ಲಿ ಅಗತ್ಯ ಬಿದ್ದರೆ ಅಲ್ಲಿ ಹೋರಾಟ ಮಾಡುವಂತಹ ಮನೋಧರ್ಮವನ್ನು ಕೂಡಾ ಹೊಂದಿರುವ ರಹಮತ್ ಅವರು ನಿಜ ಅರ್ಥದಲ್ಲಿ ಒಬ್ಬ ಹೋರಾಟಗಾರ ಎಂಬುದಾಗಿ ಡಾ. ಬಿಳಿಮಲೆ ಅವರು ತಿಳಿಸಿದರು.

ಕಾರ್ಯಕ್ರಮದ ನಂತರ ಸಂವಾದದಲ್ಲಿ ಎಸ್.ಸಿ. ಹೇಮಲತ, ಕೃಷ್ಣಮೂರ್ತಿ ಕಲುಮಂಗಿ, ಡಾ. ಅಹಲ್ಯಾಚಿಂತಾಮಣಿ, ವೈ. ಅವನೀಂದ್ರನಾಥ್ ರಾವ್, ಬಾಲಕೃಷ್ಣ ನಾಯ್ಕ್.ಡಿ., ಸಖಾರಾಮ ಉಪ್ಪೂರ, ಕೆ.ಎಸ್.ಜಿ. ಶೆಟ್ಟಿ ಮುಂತಾದವರು ಪಾಲ್ಗೊಂಡು ಕಾರ್ಯಕ್ರಮವನ್ನು ಅರ್ಥಪೂರ್ಣವನ್ನಾಗಿಸಿದರು.

ಸಂವಾದ ಕಾರ್ಯಕ್ರಮವನ್ನು ಸಂಘದ ಸಾಹಿತ್ಯ ಸಮಿತಿಯ ಸಂಚಾಲಕಿ, ಲೇಖಕಿ ಶ್ರೀಮತಿ ರೇಣುಕಾ ನಿಡಗುಂದಿ ನಿರ್ವಹಣೆ ಮಾಡಿದರು. ಸಂಘದ ಅಧ್ಯಕ್ಷರು ಹಾಗೂ ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಆಗಿರುವ ಡಾ.ವೆಂಕಟಾಚಲ ಹೆಗಡೆ ಅವರು ಅಧ್ಯಕ್ಷ ಭಾಷಣ ಮಾಡುತ್ತಾ ಕನ್ನಡ ಭಾಷೆ ಮತ್ತು ಸಂಸ್ಕೃತಿ ಸೇರಿದಂತೆ ಪ್ರಾದೇಶಿಕ ಭಾಷೆ–ಸಂಸ್ಕೃತಿಗಳನ್ನು ನಾಶವಾಗದಂತೆ ಉಳಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಜಾಗತಿಕ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಬರೆದಿರುವ ಹೆಚ್ಚಿನ ಲೇಖಕರ ಕೃತಿಗಳಲ್ಲಿ ಪ್ರಾದೇಶಿಕ ಸಂಸ್ಕೃತಿಯ ವಾಸನೆ ಕಂಡು ಬರುತ್ತದೆ ಎಂದು ಹೇಳಿದರು. ಕಾರ್ಯಕಾರಿ ಸಮಿತಿ ಸದಸ್ಯ, ಸಾಹಿತ್ಯ ಸಮಿತಿಯ ಸಂಚಾಲಕ ಪಿ.ಸಿ. ಶ್ರೀನಿವಾಸ್ ಆಗಮಿಸಿದ್ದ ಎಲ್ಲರಿಗೂ ಧನ್ಯವಾದಗಳನ್ನು ಸಮರ್ಪಿಸಿದರು.

**ಎ.ವಿ. ಚಿತ್ತರಂಜನ್‌ದಾಸ್ / ಚಂದ್ರಶೇಖರ್ ಎನ್.ಪಿ.**



## ಸಾಮೂಹಿಕ ಸತ್ಯನಾರಾಯಣ ಪೂಜೆ

ರಾಜೇಂದ್ರ ನಗರದ ಕನ್ನಡ ಬಳಗವು ಪ್ರತಿ ವರ್ಷದಂತೆ ಈ ವರ್ಷವೂ ಸಾಮೂಹಿಕ ಸತ್ಯ ನಾರಾಯಣ ಪೂಜೆಯನ್ನು ನಡೆಸಿತು. ಈ ವರ್ಷದ ಪೂಜೆಯು 20.02.2011 ರಂದು ಹೊಸ ರಾಜೇಂದ್ರನಗರದ ಸಾರಸ್ವತ ಸಾಂಸ್ಕೃತಿಕ ಭವನದಲ್ಲಿ

ವಿಜೃಂಭಣೆಯಿಂದ ನಡೆಯಿತು. ಮುಖ್ಯ ಪುರೋಹಿತರಾಗಿ ಶ್ರೀ ಸುರೇಶ ಭಟ್ಟರು ಪೂಜೆಯ ಕಾರ್ಯವನ್ನು ನಡೆಸಿ ಕೊಟ್ಟರು. 300ಕ್ಕೂ ಅಧಿಕ ಸಂಖ್ಯೆಯಲ್ಲಿ ಭಕ್ತರು ಹಾಜರಾಗಿದ್ದು ಸತ್ಯ ನಾರಾಯಣ ಪೂಜೆಯು ಅತ್ಯಂತ ಯಶಸ್ವಿಯಾಗಿ ನಡೆಯಿತು.

ಗೋಪಾಲಕೃಷ್ಣ ಭಟ್, ಕಾರ್ಯದರ್ಶಿ

## 28ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ

ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಏಪ್ರಿಲ್ 9 ಮತ್ತು 10ರಂದು 28ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ ನಡೆಯಲಿದೆ. "ದೆಹಲಿ ಕನ್ನಡಿಗ" ಪತ್ರಿಕೆ ಆಶ್ರಯದಲ್ಲಿ ನಡೆಯಲಿರುವ ಈ ಸಮ್ಮೇಳನವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅವರು ಉದ್ಘಾಟಿಸಲಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್ ಅವರು ಅಧ್ಯಕ್ಷತೆ ವಹಿಸಲಿರುವರು. ಕೇಂದ್ರದ ಮಾಜಿ ಸಚಿವೆ, ದೆಹಲಿ ಕರ್ನಾಟಕ ಸಂಘದ ರೂವಾರಿ ನಾಡೋಜ ಡಾ.ಶ್ರೀಮತಿ ಸರೋಜಿನಿ ಮಹಿಷಿಯವರು 'ದೆಹಲಿ ಕನ್ನಡಿಗ' ಸಮ್ಮೇಳನದ ಸಂಚಿಕೆ ಬಿಡುಗಡೆ ಮಾಡಲಿರುವರು.

ಈ ಸಮ್ಮೇಳನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ಬಂದು ಭಾಗವಹಿಸಬೇಕೆಂದು ಸಮ್ಮೇಳನ ಸಂಚಾಲಕ ಬಾ. ಸಾಮಗ ಅವರು ವಿನಂತಿಸಿಕೊಂಡಿದ್ದಾರೆ.

## ಅಂತರ ರಾಷ್ಟ್ರೀಯ ಬಸವ ಸಮ್ಮೇಳನ

ಬಸವ ಇಂಟರ್‌ನ್ಯಾಶನಲ್ ಸೆಂಟರ್, ನವದೆಹಲಿ, ಅವರಿಂದ ಅಂತರರಾಷ್ಟ್ರೀಯ ಬಸವ ಸಮ್ಮೇಳನವನ್ನು 27.03.2011ರಂದು, ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಬೆಳಿಗ್ಗೆ 10 ರಿಂದ 8ರವರೆಗೆ ಆಯೋಜಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಭಾಗವಹಿಸಬೇಕೆಂದು ಅಧ್ಯಕ್ಷ ಅಮರನಾಥ ತಲವಾಡೆ ಅವರು ವಿನಂತಿಸಿಕೊಂಡಿದ್ದಾರೆ.

ಸುಧೀರ್ ಫಡ್ನೀಸ್ ಅವರ ಚಿತ್ರಕಲಾ ಪ್ರದರ್ಶನ

ಮಾರ್ಚ್ 7ರಿಂದ 16ರವರೆಗೆ ತ್ರಿವೇಣಿ ಕಲಾ ಸಂಗಮದಲ್ಲಿ

# ಮಾರ್ಚ್ 26 ಹಾಗೂ 27ರಂದು ಕ್ರೀಡಾ ಸ್ಪರ್ಧೆ

**ಸಂಘದ 2011–12ನೇ ಸಾಲಿನ ವಿವಿಧ**
**ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ವಾರ್ಷಿಕೋತ್ಸವದ**
**ಅಂಗವಾಗಿ ಮಾರ್ಚ್ 26 ಮತ್ತು 27, 2011 ರಂದು ಆಚರಿಸಲಿದೆ.**
**ದಯವಿಟ್ಟು ತಾವೆಲ್ಲ ಭಾಗವಹಿಸಿ, ಇತರರನ್ನೂ ಕರೆತನ್ನಿ.**
**ಸ್ಪರ್ಧೆಗಳ ವಿವರ ಮತ್ತು ಪ್ರವೇಶ**
**ಪತ್ರಕ್ಕಾಗಿ ಹಿಂದಿನ ಅಭಿಮತ ಸಂಚಿಕೆಯನ್ನು ನೋಡಿ**
**ಅಥವಾ ಸಂಘವನ್ನು ಸಂಪರ್ಕಿಸಿ**
**26109615, 65643615**

# ಕಾರ್ಯಕಾರಿ ಸಮಿತಿಗೆ ನಾಮಾಂಕಿತ ಸದಸ್ಯರು



ಆರ್. ರೇಣುಕುಮಾರ್ : ಕರ್ನಾಟಕ ಭವನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಹಾಗೂ ಪ್ರಸ್ತುತ ಕೇಂದ್ರ ಶ್ರಮ ಖಾತೆಯ ಮಂತ್ರಿಗಳಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಆಪ್ತ ಕಾರ್ಯದರ್ಶಿಯಾಗಿರುವ ಶ್ರೀ ಆರ್. ರೇಣುಕುಮಾರ್ ಅವರು ಈಗಾಗಲೇ ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ ಚಿರಪರಿಚಿತರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾಗಿ ಹಾಗೂ ದೆಹಲಿಯ ಕನ್ನಡಪರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವ ಇವರು ಇದೀಗ ಕಾರ್ಯಕಾರಿ ಸಮಿತಿಗೆ ನಾಮಾಂಕಿತ ಸದಸ್ಯರಾಗಿ ನೇಮಕಗೊಂಡಿದ್ದಾರೆ. ಪ್ರಸ್ತುತ ಸಾಂಸ್ಕೃತಿಕ ಸಮಿತಿಯ ಸಂಚಾಲಕರಾಗಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಗುರುತರ ಜವಾಬ್ದಾರಿ ಹೊತ್ತಿರುವ ಉತ್ಸಾಹಿ ತರುಣ.



ಎಸ್. ಕೃಷ್ಣಭಟ್ : ದೆಹಲಿ ಕರ್ನಾಟಕ ಸಂಘದ ಸಮುಚ್ಚಯ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿರುವ, ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಸಮರ್ಥವಾಗಿ ಆಡಳಿತ ನಿರ್ವಹಿಸಿದ ಶ್ರೀ ಸರವು ಕೃಷ್ಣಭಟ್ಟರು ಎಲ್ಲರಿಗೂ ಚಿರಪರಿಚಿತರು. ತಮ್ಮ ಸುಸ್ಪಷ್ಟ ಮಾತು, ಕಾರ್ಯದಕ್ಷತೆ, ಅನುಭವಿ ಆಡಳಿತಕ್ಕೆ ಹೆಸರಾದ ಭಟ್ಟರನ್ನು ಅರಿಯದ ಕನ್ನಡಿಗರು ಬಹುಶಃ ದೆಹಲಿಯಲ್ಲಿ ಇಲ್ಲವೆಂದರೂ ಉತ್ಪ್ರೇಕ್ಷೆಯೇನಲ್ಲ. ಸಾಂಸ್ಕೃತಿಕ ಕಾರ್ಯಕ್ರಮಗಳ ನಿರ್ವಹಣೆ, ಹಲವಾರು ನಾಟಕ ಹಾಗೂ ಯಕ್ಷಗಾನಗಳಲ್ಲಿ ಅಭಿನಯಿಸಿ ಪ್ರಖ್ಯಾತರಾಗಿದ್ದಾರೆ. ಆ್ಯಂಟ್ಸ್ ಕಮ್ಯುನಿಕೇಶನ್ಸ್ ಎಂಡ್ ಸರ್ವಿಸಸ್ ಹಾಗೂ ಸರವು ಸರ್ವಿಸಸ್‌ನ ಮಾಲೀಕರು, ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ಗೋಕರ್ಣ ಮಂಡಳ, ಅಕಾಡೆಮಿ ಆಫ್ ತೆಂಕುತಿಟ್ಟು ಯಕ್ಷಗಾನ ಮತ್ತಿತರ ಸಂಸ್ಥೆಗಳಲ್ಲಿ ಅಪಾರವಾಗಿ ದುಡಿದ ಅನುಭವ ಇರುವ ಶ್ರೀ ಕೃಷ್ಣಭಟ್ಟರನ್ನು ಈಗ ಕಾರ್ಯಕಾರಿ ಸಮಿತಿಗೆ ನಾಮಾಂಕಿತಗೊಳಿಸಲಾಗಿದೆ.



ಶಶಿಕಾಂತ್ ಪಿ. ಪಾಟೀಲ್ : ಕಳೆದ ಸುಮಾರು 15 ವರ್ಷಗಳಿಂದ ಲೋಕಸಭಾ ಸಚಿವಾಲಯದಲ್ಲಿ ಸೇವೆಗೈಯುತ್ತಿರುವ ಶಶಿಕಾಂತ್ ಅವರು ಗಣೇಶ ಮಿತ್ರ ಮಂಡಳಿಯ ಕಾರ್ಯದರ್ಶಿಯಾಗಿ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪಿ.ಟಿ.ಎ. ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿರುವ ಇವರು ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇದೀಗ ಇವರು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಗೆ ನಾಮಾಂಕಿತಗೊಂಡಿದ್ದಾರೆ.

## ರಾಷ್ಟ್ರಕವಿ ಕುವೆಂಪು ವಿಚಾರಧಾರೆ
## ರಾಷ್ಟ್ರೀಯ ವಿಚಾರ ಸಂಕಿರಣ

ದಿನಾಂಕ : 15, 16, 17 ಏಪ್ರಿಲ್ 2011
ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ

ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಕುಪ್ಪಳಿ, ಕನ್ನಡ ವಿಶ್ವವಿದ್ಯಾಲಯ ಹಂಪಿ,
ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಕುವೆಂಪು ಭಾಷಾ ಭಾರತಿ ಬೆಂಗಳೂರು,
ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ

ಕುವೆಂಪು ಕಾವ್ಯ, ಕಾದಂಬರಿ, ನಾಟಕ ಹಾಗೂ ವೈಚಾರಿಕತೆ ಕುರಿತಾದ ವಿಚಾರಗೋಷ್ಠಿಗಳು ಮತ್ತು
ಕುವೆಂಪು ಗೀತೆಗಳ ನೃತ್ಯರೂಪಕ, ನಾಟಕ, ಕುವೆಂಪು ಗೀತೆಗಳನ್ನೊಳಗೊಂಡ ಸುಗಮ ಸಂಗೀತ,
ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು.

ಹೆಚ್ಚಿನ ವಿವರಗಳು ಮುಂದಿನ ಸಂಚಿಕೆಯಲ್ಲಿ.

# ವಿಶ್ವ ಸಂಸ್ಕೃತ ಸಮ್ಮೇಳನ

ಜನವರಿ 6ರಿಂದ 10ರವರೆಗೆ ಬೆಂಗಳೂರಿನಲ್ಲಿ ವಿಶ್ವ ಸಂಸ್ಕೃತ ಪುಸ್ತಕ ಮೇಳ ಪ್ರಥಮ ಬಾರಿಗೆ ನಡೆಯಿತು. ಬಸವನಗುಡಿಯ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ದೇಶದ ವಿವಿಧೆಡೆಗಳಿಂದ ಸುಮಾರು ಹತ್ತು ಸಾವಿರ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. 'ಸಂಸ್ಕೃತ ಮೃತ ಭಾಷೆ, ಈ ಆಧುನಿಕ ಯುಗದಲ್ಲಿ ಇಂಗ್ಲೀಷ್–ವಿಶ್ವವ್ಯಾಪಿ ಭಾಷೆ–ಅದೇ ಜಗತ್ತಿನ ಜ್ಞಾನದ ಅಗತ್ಯ' ಎಂದು ವಾದಿಸುವ ಎಲ್ಲರನ್ನು ಈ ಸಮ್ಮೇಳನ ಬಾಯಿ ಮುಚ್ಚಿಸಿತ್ತು.

ಈ ಸಮ್ಮೇಳನಕ್ಕೆ ನಾನು ಉತ್ತರ ಭಾರತದ ಸುಮಾರು ನಾಲ್ಕುನೂರು ಪ್ರತಿನಿಧಿಗಳೊಡನೆ ಬೆಂಗಳೂರಿಗೆ ಹೊರಟಿದ್ದೆ. ಇದು 'ಸಂಸ್ಕೃತ ಭಾರತಿ' ಸಂಸ್ಥೆಯವರು ಆಯೋಜಿಸಿದ್ದ ಕಾರ್ಯಕ್ರಮ. ಸಂಸ್ಕೃತ ಭಾರತಿ ಕಳೆದ 30 ವರ್ಷಗಳಿಂದ ಸಂಸ್ಕೃತದ ಸರ್ವತೋಮುಖ ಬೆಳವಣಿಗೆಗೆ ಸತತವಾಗಿ ಶ್ರಮಿಸುತ್ತಿದೆ. ಸಂಸ್ಕೃತವನ್ನು ಸಂಸ್ಕೃತದ ಮಾಧ್ಯಮದಲ್ಲೇ ಕಲಿಸುವ ದಿಶೆಯಲ್ಲಿ ಅದು ಅನೇಕ ಯೋಜನೆಗಳನ್ನು ನಡೆಸುತ್ತಿದೆ. ಸಂಸ್ಕೃತವನ್ನು ದೇಶದ ಆಡು ಭಾಷೆಯನ್ನಾಗಿ ಮಾಡುವ ಉದ್ದೇಶದಿಂದ 'ಸಂಸ್ಕೃತ ಸಂಭಾಷಣಾ ಶಿಬಿರ' ಇದರ ಮುಖ್ಯ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮ ಇಂದು ದೇಶದ ವಿವಿಧೆಡೆಗಳಲ್ಲಿ ಬಹು ಜನಪ್ರಿಯವೆನಿಸಿದೆ. ಕೇವಲ ಹತ್ತು ದಿನಗಳಲ್ಲಿ ಸರಳವಾಗಿ, ಮಧುರವಾಗಿ, ಪ್ರತಿಯೊಬ್ಬರೂ ಸಂಸ್ಕೃತದಲ್ಲಿ ವ್ಯವಹರಿಸಬಲ್ಲರು. ಈ ಸಲದ ಜನಗಣತಿಯಲ್ಲಿ ಸುಮಾರು 14,000ಕ್ಕೂ ಮೀರಿ ಮನೆಗಳಲ್ಲಿ 'ಸಂಸ್ಕೃತ–ಮಾತೃಭಾಷೆ' ಎಂದೂ ನಮೂದಿಸಲ್ಪಟ್ಟಿದೆ– ಎಂದು ಗಣ್ಯರೊಬ್ಬರು ತಮ್ಮ ಭಾಷಣದಲ್ಲಿ ತಿಳಿಸಿದರು.

ವಿಶ್ವಮೇಳಕ್ಕೆ ಜಗತ್ತಿನ 14 ದೇಶಗಳಿಂದ ಪ್ರತಿನಿಧಿಗಳು ಬಂದಿದ್ದರು. ಸಮ್ಮೇಳನದಲ್ಲಿ ಪ್ರತಿನಿಧಿಗಳೆಲ್ಲರೂ ಪರಸ್ಪರ ಸಂಸ್ಕೃತ ಭಾಷೆಯಲ್ಲೇ ವ್ಯವಹರಿಸುತ್ತಿದ್ದುದು ನಿಜಕ್ಕೂ 'ಅಲೌಕಿಕ' ಎನಿಸಿತ್ತು. ಪುಸ್ತಕ ಮೇಳದಲ್ಲೂ ಪುಸ್ತಕ ಮಾರುವವರು ಸಂಸ್ಕೃತದಲ್ಲೇ 'ಮಾರಾಟ' ಕರ್ಣ ಮನೋಹರವೆನಿಸಿತ್ತು. ಒಟ್ಟು 14 ಸಂಸ್ಕೃತ ವಿಶ್ವವಿದ್ಯಾಲಯಗಳು, 5 ಸಂಸ್ಕೃತ ಅಕಾಡೆಮಿಗಳು, 18 ಪ್ರಾಯೋಗಿಕ ಸಂಶೋಧನಾ ಸಂಸ್ಥೆಗಳು, ಭಾರತೀಯ ಪ್ರಾಚ್ಯ ವಿದ್ಯಾಸಂಶೋಧನಾಲಯ, ರಾಷ್ಟ್ರೀಯ ಪಾಂಡುಲಿಪಿ ಮಿಶನ್, ಜರ್ಮನಿಯ ರಾಷ್ಟ್ರೀಯ ಸಂಸ್ಕೃತ ಅಧ್ಯಯನ ಸಂಸ್ಥೆಗಳೆಲ್ಲ ಒಂದಾಗಿ ಈ ಸಮ್ಮೇಳನ ನಡೆಸಿದವು. 150ಕ್ಕೂ ಹೆಚ್ಚು ಸಂಸ್ಕೃತ ಪುಸ್ತಕ ಪ್ರಕಾಶಕರು ಇಲ್ಲಿ ಪುಸ್ತಕ ಮಳಿಗೆ ತೆರೆದಿದ್ದರು. 4 ದಿನಗಳಲ್ಲಿ ಸುಮಾರು ನಾಲ್ಕು ಕೋಟಿ ರೂ.ಗೆ ಮೀರಿದ ಸಂಸ್ಕೃತ ಪುಸ್ತಕಗಳ ಬಿಕರಿ ವಿಶ್ವದಾಖಲೆಯೇ ಸರಿ!. 'ನಡೆದಾಡುವ ವಿಶ್ವಕೋಶ' ಎಂಬ ಖ್ಯಾತನಾಮ ಶ್ರೀ ಜಿ. ವೆಂಕಟಸುಬ್ಬಯ್ಯ ಅವರು ತಮ್ಮ ಮಾತಿನಲ್ಲಿ "ಬೆಂಗಳೂರು ಈಗ ವಾಗ್ದೇವಿಯ ದಿವ್ಯದರ್ಶನದ ಕೇಂದ್ರವಾಗಿದೆ. ಸಹಸ್ರಾರು ಸಂಸ್ಕೃತ ವಿದ್ವಾಂಸರು, ಲೇಖಕರು, ಪ್ರಕಾಶಕರು, ಸಂಸ್ಕೃತಕ್ಕಾಗಿ ಕೆಲಸಮಾಡುತ್ತಿರುವ ಪ್ರತಿಯೊಬ್ಬರನ್ನೂ ಒಂದೆಡೆಗೆ ಸೇರಿಸಿ 'ಸಂಸ್ಕೃತ ಭಾರತಿ' ಮಹತ್ ಕಾರ್ಯವನ್ನು ಸಾಧಿಸಿದೆ" ಎಂದರು. ನೇಪಾಳ ಮೂಲದ ಸಂಸ್ಕೃತ ವಿದ್ವಾಂಸ ಡಾ. ಸ್ಥಾಣೇಶ್ವರ್ ವೆಮಿಲ್ಸನ್ (ಈಗ ಅವರು ಅಮೇರಿಕದ ವಿ.ವಿ. ಒಂದರ ಸಂಸ್ಕೃತ ಪ್ರಾಧ್ಯಾಪಕರು) ಜಗತ್ತನ್ನೇ ಒಂದು ಛತ್ರದಡಿ ತರಬಲ್ಲವೆಂದು ಬೀಗುತ್ತಿದ್ದ ಮಾರ್ಕ್ಸ್‌ವಾದ ಕಾಲಬಾಹ್ಯವಾಗಿರುವ ಈ ಕಾಲದಲ್ಲಿ ಸಂಸ್ಕೃತವೊಂದೇ ಇಡೀ ಜಗತ್ತನ್ನು ಒಂದುಗೂಡಿಸಬಲ್ಲದು ಎಂದು ಸಂಸ್ಕೃತದಲ್ಲಿ ಅಭಿಪ್ರಾಯಪಟ್ಟರು. 'ಸಂಸ್ಕೃತ ಲೋಕದಲ್ಲಿ ಇದು ನವಮನ್ವಂತರವನ್ನೇ ಸೃಷ್ಟಿಸಿದೆ' ಎಂದು ಪೇಜಾವರ ಶ್ರೀಗಳು ವರ್ಣಿಸಿದರು. ಸಮ್ಮೇಳನವನ್ನು ಕರ್ನಾಟಕದ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಉದ್ಘಾಟಿಸಿದರು. 'ಜ್ಞಾನಗಂಗಾ' ಪ್ರದರ್ಶಿನಿಯನ್ನು ಶ್ರೀ ಅನಿಲ್‌ಕುಂಬ್ಳೆ ಹಾಗೂ 'ಸಂಸ್ಕೃತಗ್ರಾಮ'ವನ್ನು ಮಾನ್ಯ ಶಿಕ್ಷಣ ಸಚಿವ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಉದ್ಘಾಟಿಸಿದ್ದರು. ವಿವಿಧ ಸಮಾರಂಭಗಳಲ್ಲಿ ಸುಮಾರು 300 ಹೊಸ ಸಂಸ್ಕೃತ ಪುಸ್ತಕಗಳು ಲೋಕಾರ್ಪಣಗೊಂಡವು.

ಸಂಸ್ಕೃತ ಪ್ರಕಾಶನ ಕ್ಷೇತ್ರದ ಅತ್ಯಂತ ದೊಡ್ಡ ಸಂಸ್ಥೆ ವಾರಣಾಸಿಯ ಚೌಕಾಂಬ ಪ್ರಕಾಶನ, ಗೀತಾಪ್ರೆಸ್ ಗೋರಖ್‌ಪುರ ಮಳಿಗೆಗಳಲ್ಲಿ ಜನಸಂದಣಿ ಕಿಕ್ಕಿರಿದಿತ್ತು. ಈ ದಿನಗಳಲ್ಲಿ ಜನರ ಪುಸ್ತಕ ಪ್ರೇಮ–ಅದರಲ್ಲೂ ಸಂಸ್ಕೃತ ಭಾಷೆಯ ಪ್ರೀತಿ ಎಲ್ಲರನ್ನೂ ಅಚ್ಚರಿಗೊಳಿಸಿತ್ತು. 'ಜ್ಞಾನಗಂಗಾ' ಪ್ರದರ್ಶಿನಿಯಲ್ಲಿ ನಮ್ಮ ಪೂರ್ವಜರ ಸಾಧನೆಗಳ ಪೂರ್ಣ ವಿವರ ನೀಡಿತ್ತು. ಗುರು–ಶಿಷ್ಯರ ಸಂಬಂಧ ಹೇಗಿರಬೇಕು? ಗುಣಾತ್ಮಕ ಶಿಕ್ಷಣಕ್ಕೆ ಬೋಧನಾ ವ್ಯವಸ್ಥೆ ಹೇಗಿರಬೇಕು? ವೇದವೊಂದರಿಂದ ಆಯ್ದಿದ್ದ 'ಆಧ್ಯಾತ್ಮಿಕ ಹಾಗೂ ಮಾನಸಿಕ ಸಂತುಲನವೇ ಶಿಕ್ಷಣದ ಮೂಲ ಉದ್ದೇಶ' ಎಂಬ ವಾಕ್ಯ ಅನಾದಿ ಕಾಲದಲ್ಲಷ್ಟೇ ಅಲ್ಲ. ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲೂ ಮಹತ್ವದ್ದು. ಹೀಗೆ ಸನತಾನ ಪರಂಪರೆಯನ್ನು ಸಾರುವ ಸಂಸ್ಕೃತ ಭಾಷೆಯನ್ನು ಪ್ರಾಥಮಿಕ ಹಂತದಿಂದಲೇ ಕಲಿಸುವ ಮೂಲಕ ಸಂಸ್ಕೃತದ ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕು. ಉತ್ತರ ಭಾರತದ ಯುವಕ–ಯುವತಿಯರು ಪದವೀಧರರಾದಾಗ್ಯೂ ಸಣ್ಣ ಇಂಗ್ಲೀಷ್ ವಾಕ್ಯವನ್ನು ಮಾತನಾಡಲು ಹೆದರುವವರು, ಸಂಸ್ಕೃತದಲ್ಲಿ ಸುಲಲಿತವಾಗಿ ಮಾತನಾಡುತ್ತಿದ್ದುದನ್ನು ಕೇಳಿದಾಗ ಇದು ಭಾರತೀಯರ ರಕ್ತದಲ್ಲೇ ಇದೆ– ಎಂದು ನನಗೆ ಅನಿಸಿತ್ತು. ನಮ್ಮೊಂದಿಗೆ ಸಂಸ್ಕೃತ ಭಾರತಿಯ ಬಗ್ಗೆ ಕೇಳಿದ್ದೇ ಕೇಳಿದ್ದು!

ಸಂಸ್ಕೃತ ಗಾನಗೋಷ್ಠಿಯಲ್ಲಿ ಅನೇಕ ಸಂಸ್ಕೃತ ಕವಿಗಳು, ವಿದ್ವಾಂಸರು, ದೇಶಭಕ್ತಿ, ಸಂಸ್ಕೃತಿಗೆ ಸಂಬಂಧಿಸಿದ ನಾನಾ ಸಂಸ್ಕೃತ ಗೀತೆಗಳನ್ನು ಹಾಡುವ ಮೂಲಕ ಎಲ್ಲರ ಗಮನ ಸೆಳೆದರು. ಸಾಯಂಕಾಲದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಜನಪ್ರಿಯ ಗಾಯಕರಾದ ಶ್ರೀ ರಾಜೇಶ್ ಕೃಷ್ಣನ್, ರಮ್ಯಾವಸಿಷ್ಠ ಹೊಸ ಪ್ರಯೋಗ 'ಈಣುಂಟಿ' ಸಂಸ್ಕೃತ ಗೀತೆಗಳು ಎಲ್ಲರಿಂದಲೂ ಮುಖ್ಯವಾಗಿ ಇಂದಿನ ಯುವಜನಾಂಗದ ಚಪ್ಪಾಳೆ ಗಿಟ್ಟಿಸಿತ್ತು. ಡಾ.ಎಸ್.ಪಿ. ಬಾಲಸುಬ್ರಹ್ಮಣ್ಯಂ, ಅರ್ಚನಾ ಉಡುಪರ ಸಂಸ್ಕೃತ ಗೀತೆಗಳು ಎಲ್ಲರನ್ನೂ ಬೇರೆಯೇ ಲೋಕಕ್ಕೆ ಕರೆದೊಯ್ದವು. ಪ್ರಭಾತ್ ಕಲಾವಿದರ 'ಧರ್ಮಭೂಮಿ' ಸಂಸ್ಕೃತ ನಾಟಕವಂತೂ ಅಲೌಕಿಕ ಆನಂದ ನೀಡಿತ್ತು. ಕುವೆಂಪು ಕಲಾಕ್ಷೇತ್ರದಲ್ಲಿ ಮೂರೂ ದಿನಗಳು ಸಂಸ್ಕೃತದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತ ಇದ್ದವು. ಶತವಾಧಾನಿ ಶ್ರೀ ಆರ್. ಗಣೇಶ್ ಹಾಗೂ ಬಿ.ಕೆ.ಎಸ್. ವರ್ಮಾರವರ 'ಕಾವ್ಯ–ಚಿತ್ರ' ಕಾರ್ಯಕ್ರಮವಂತೂ ನಯನಮನೋಹರವಾಗಿತ್ತು. ಮಹಿಳಾ ಸಮ್ಮೇಳನ–ಯುವ ಸಮ್ಮೇಳನ– ಶಾಲಾಮಕ್ಕಳ ಸ್ಪರ್ಧೆಗಳು.. ಒಂದೇ ಎರಡೇ, ಸಮ್ಮೇಳನದ ಮೂರೂ ದಿನಗಳೂ ನಮಗರಿವಿಲ್ಲದಂತೆ ಓಡಿದ್ದವು. ಊಟ–ತಿಂಡಿಯ–ಉಳಿದುಕೊಳ್ಳುವ ವ್ಯವಸ್ಥೆ ತುಂಬ ಅಚ್ಚುಕಟ್ಟಾಗಿತ್ತು. ರಕ್ಷಣಾ ವ್ಯವಸ್ಥೆಗೆಂದು ನಿಂತಿದ್ದ ಪೋಲೀಸ್ ಬಂಧುಗಳೂ ನಮ್ಮಂತೇ ಖುಷಿಯಿಂದ ಹರಟೆ–ಊಟ–ತಿಂಡಿಯಲ್ಲಿ ಸೇರಿದ್ದು ನಮಗೆಲ್ಲ ಖುಷಿಯೆನಿಸಿತ್ತು.

ಒಟ್ಟಿನಲ್ಲಿ ಆ ನಾಲ್ಕು ದಿನಗಳಲ್ಲಿ ದೇಶ ವಿದೇಶಗಳ ಪ್ರಸಿದ್ಧ ವಿದ್ವಾಂಸರು, ಅನೇಕ ಗಣ್ಯ ರಾಜಕೀಯ ಧುರೀಣರು–ಉದ್ಯೋಗಪತಿಗಳ, ತತ್ವವೇತ್ತರುಗಳ ಸಾನಿಧ್ಯ–ನಮಗೆಲ್ಲರಿಗೂ ದೊರಕಿದ್ದು ನಮ್ಮ ಸೌಭಾಗ್ಯವೇ ಸರಿ. ಸಮ್ಮೇಳನಗಳೆಷ್ಟೋ ನಡೆಯುತ್ತವೆ. ಆದರೆ ಈ 'ವಿಶ್ವ ಸಮ್ಮೇಳನ' ಯಾವುದೇ ದೇಶ–ಭಾಷೆ–ಜಾತಿ–ಪಕ್ಷಗಳ ಅಡ್ಡಗೋಡೆಗಳನ್ನು ಮೀರಿದ 'ಕುಂಭಮೇಳ' ಎಂದು ಎಲ್ಲರಿಗೂ ಅನಿಸಿತ್ತು. ಅಷ್ಟೇಅಲ್ಲ, ಸಂಸ್ಕೃತವನ್ನು ಆದಷ್ಟು ಶೀಘ್ರ 'ಆಡುಭಾಷೆ' ಯಾಗಿ ಮಾಡಬೇಕೆಂಬ ನಮ್ಮ ಹಂಬಲ ಇನ್ನಷ್ಟು ದೃಢಗೊಂಡಿತ್ತು.

'ಸಂಸ್ಕೃತ ಭಾರತಿ'ಯ ಕಚೇರಿ–ಮಾತಾಮಂದಿರ ಗಲ್ಲಿ, ಝುಂಡೇವಾಲಾ, ನವದೆಹಲಿ–110055, ದೂರವಾಣಿ: 011–23517689, 23543097

**ನಂದಿನಿ ಮಲ್ಯ**

# ಊಸರವಳ್ಳಿಗಳು

ಕಾಕಿನಾಡದಿಂದ ಸಿಕಂದರಾಬಾದ್‌ಗೆ ಬರುವ ಗೌತಮಿ ಎಕ್ಸ್‌ಪ್ರೆಸ್ ನಿಗದಿತ ಸಮಯಕ್ಕಿಂತಲೂ ಐದು ನಿಮಿಷಗಳು ಮುಂಚಿತವಾಗಿಯೇ ಪ್ಲಾಟಫಾರಂಅನ್ನು ತಲುಪಿತ್ತು. ಸ್ಲೀಪರ್ ಬೋಗಿಯೊಳಗಿಂದ ತುಳಸಮ್ಮ ನಿಧಾನವಾಗಿ ಇಳಿದಳು. ಹೊಂಬಣ್ಣದ ಮೈ , ಪೂರ್ತಿಯಾಗಿ ಬೆಳ್ಳಗಾಗಿದ್ದ ತಲೆಗೂದಲುಗಳು, ಪ್ರಯಾಣದ ಬಳಲಿಕೆಯನ್ನು ಸೂಚಿಸುತ್ತಿರುವ ಕಣ್ಣುಗಳು, ಅಳಿಸಿದಂತಿದ್ದ ಹಣೆಯಮೇಲಿನ ವಿಭೂತಿಯ ಗೆರೆ, ಕೃಶವಾದ ಶರೀರದಿಂದ ಮೇಲೆದ್ದು ಕಾಣುತ್ತಿರುವ ನರಗಳು, ಸ್ವಲ್ಪ ಬಾಗಿದ ಸೊಂಟ–ಗುಂಟೂರು ನೂಲಿನ ಜರೀ ಅಂಚಿನ ಸೀರೆಯನ್ನುಟ್ಟಿದ್ದ ತುಳಸಮ್ಮನಿಗೆ ಎಪ್ಪತ್ತಕ್ಕಿಂತಲೂ ತುಸು ಹೆಚ್ಚೇ ವಯಸ್ಸಾಗಿತ್ತು. ಕೈಯಲ್ಲಿ ಸಣ್ಣ ಚೀಲವೊಂದನ್ನು ಹಿಡಿದಿದ್ದ ಆಕೆ ಮಗನಿಗಾಗಿ ಪ್ಲಾಟಫಾರಂಅನ್ನು ಪೂರ್ತಿಯಾಗಿ ಪರಿಶೀಲಿಸಿದಳು.

ಆದರೆ ಆ ಸಮಯದಲ್ಲಿ ಆಕೆಯ ಮಗನಾದ ಕೃಷ್ಣಮೂರ್ತಿಯು ಮನೆಯಲ್ಲಿ ಕಾಫಿಯನ್ನು ಕುಡಿಯುತ್ತಾ, ನಡುನಡುವೆ ಫೋನ್‌ನಲ್ಲಿ ಮಾತನಾಡುತ್ತಿದ್ದ.

"ರಾಮಾರಾವ್ ಅವರೇ, ಗುಡ್ ಮಾರ್ನಿಂಗ್ ಸರ್! ನಿನ್ನೆಯಿಂದ ನಿಮಗಾಗಿ ಪ್ರಯತ್ನಿಸುತ್ತಿದ್ದೇನೆ. ಇಲ್ಲ...ಏನಿಲ್ಲ..ಈ ದಿನ ನಮ್ಮ ಮೊಮ್ಮಗನ ಹುಟ್ಟಿದ ಹಬ್ಬ. ಖುಷಿಯಾಗಿ ವೈಸ್ರಾಯ್‌ನಲ್ಲಿ ಡಿನ್ನರ್ ಏರ್ಪಾಟು ಮಾಡಿದ್ದೇನೆ. ನಾನೇ ಖುದ್ದು ಬಂದು ನಿಮ್ಮನ್ನು ಕರೆಯಬೇಕೆಂದುಕೊಂಡಿದ್ದೆ. ಆದರೆ ಮೊನ್ನೆಯೇ ನಮ್ಮ ಬಂಧುಗಳೊಬ್ಬರ ಮನೆಯ ಲಗ್ನಕ್ಕೆಂದು ಹೋಗಿದ್ದ ನಮ್ಮ ತಾಯಿಯವರು ಇಂದು ಗೌತಮಿಯಲ್ಲಿ ಬರುತ್ತಿರುವರು. ಸ್ಟೇಷನ್‌ಗೆ ಹೋಗಬೇಕಾಗಿದೆ. ನಿಮಗೆ ಗೊತ್ತಲ್ವೇ, ತಾಯಿಯ ಆಶೀರ್ವಾದವಿಲ್ಲದೆ ನಾವು ಒಂದು ಹೆಜ್ಜೆಯನ್ನೂ ಮುಂದಿಡುವುದಿಲ್ಲ. ಸ್ವತಃ ಬಂದು ಕ್ವರೆಯಲಿಲ್ಲವೆಂದು ಅನ್ಯಥಾ ಭಾವಿಸಬೇಡಿ. ನೀವು ನಿಮ್ಮ ಕುಟುಂಬದೊಡನೆ ರಾತ್ರಿ ಡಿನ್ನರ್‌ಗೆ ತಪ್ಪದೆ ಬರಬೇಕು..."

ಅವೇ ಮಾತುಗಳನ್ನಾಡುತ್ತಾ ಇನ್ನೂ ಹಲವಾರು ಮಂದಿಗೆ ಫೋನ್‌ನಲ್ಲಿ ಕರೆಯಿತ್ತ ಕೃಷ್ಣಮೂರ್ತಿ. ಪಕ್ಕದಲ್ಲಿ ಕುಳಿತು ಕಾಫಿ ಕುಡಿಯುತ್ತಿದ್ದ ಮನೆಯ ಒಡತಿ ಗಿರಿಜ "ಇನ್ನೂ ಎಷ್ಟು ಮಂದಿಗೆ ಕರೆ ಮಾಡ್ತೀರಾ...ಎಲ್ಲವನ್ನೂ ಕಡೆಯ ನಿಮಿಷಗಳವರೆಗೂ ಇಟ್ಟುಕೊಳ್ತೀರಿ" ಅಂದಳು. "ಎಲ್ರೂ ತುಂಬಾ ಬಿಝಿ ಮನುಷ್ಯರು ಕಣೇ. ನಾಲ್ಕು ದಿನಗಳಿಂದ ಪ್ರಯತ್ನಿಸಿದರೆ ಇಂದು, ಅದೂ ಬೆಳಗಿನ ಸಮಯವಾದ್ದರಿಂದ ಸಿಗುತ್ತಿರುವರು. ಅವರಿಂದ ನಮಗೆ ಅನೇಕ ಕೆಲಸಗಳು ಆಗಬೇಕಿವೆ" ಎಂದ ಕೃಷ್ಣಮೂರ್ತಿ.

"ಅದಿರ್‍ಲಿ, ಈಗ ಅದೇ ಕೆಲಸವಾಗಿ ನಿಮ್ಮಮ್ಮನನ್ನು ಏಕೆ ಬರಹೇಳಿದ್ದು ಅಂತ? ಬಲು ಮಿಜಿಮಿಜಿ ಹೆಂಗಸು ಆಕೆ"

2

"ಹಾಗಂದ್ರೆ ಹೇಗೆ ಕಣೇ? ನಾಲ್ಕಾರು ಜನರು ಸೇರಿದಾಗ 'ಅಮ್ಮ ಎಲ್ಲಿ' ಎಂದು ಕೇಳೋಲ್ವೇ? ಫಂಕ್ಷನ್‌ನಲ್ಲಿ ಆಕೆ ಕಾಣದೇಹೋದರೆ ಇದ್ದ ಮರ್ಯಾದೆ ಹೋಗೋಲ್ವೇ? ಆದರೂ, ಆಕೆ ನಾಳೆಯೇ ಹೊರಟು ಹೋಗುತ್ತಾಳೆ ! ಒಂದು ದಿನದಮಟ್ಟಿಗೆ ಹೇಗಾದರೂ ಹೊಂದಿಕೊ"

ಆಯ್ತು. ಸ್ಟೇಷನ್‌ಗೆ ಯಾರನ್ನು ಕಳಿಸಬೇಕೆಂದುಕೊಂಡಿರುವಿರಿ?. ರಾಮ ಇನ್ನೂ ಬಂದಿಲ್ಲ. ಸೊಸೆಯನ್ನು ಕರೆತರಲು ದಾಸ್ ಬಸ್‌ನಿಲ್ದಾಣಕ್ಕೆ ಹೋಗಿರುವನು. ನೋಡಿ...ನೀವೇ ಹೋಗ್ತೀರೋ, ರಘುನನ್ನು ಕಳಿಸ್ತೀರೋ ನಿರ್ಧಾರ ಮಾಡಿ"


"ನಾನು ಹೋಗೋದೇ! ಅದೂ ಸ್ಟೇಷನ್ನಿಗೆ...ಈ ಬೆಳಗಿನ ಹೊತ್ತಿನಲ್ಲಿ? ದಾಸ್ ಬಂದಕೂಡಲೇ ಕಳಿಸಿದರಾಯ್ತು ಕಣೇ"

"ಅಲ್ರೀ...ಆ ಸಮಯಕ್ಕೆ ರೈಲು ಬಂದ್ಬಿಟ್ಟಿರುತ್ತೇನೋ!"

"ಏ...ಬಂದ್ರೆ ಬರ್‍ಲಿ ಬಿಡು. ಸ್ಟೇಷನ್‌ನಲ್ಲಿ ಕೂತಿರ್ತಾಳೆ. ಆಕೆ ಮನೆಗೆ ಬಂದು ಮಾಡೋದೇನಿದೆ...ಇಲ್ನೋಡು...ಅಂದ್ಹಾಗೆ...ಎರಡೂ ಕಾರುಗಳು ಮನೆಯ ಬಳಿಯೇ ಇರಲಿ. ಎಲ್ಲಿಗೂ ಕಳಿಸ್ಬೇಡ. ಅಮ್ಮನನ್ನು ಆಟೋದಲ್ಲಿ ಕರೆದುಕೊಂಡು ಬಾ ಅಂತ ದಾಸ್‌ಗೆ ಹೇಳು. ನಿದ್ರೆಯಿಂದ ಎದ್ದ ಮಕ್ಕಳು ಕಾರ್ ಬೇಕೆಂದು ಕೇಳಿದರೆ ಕಷ್ಟವಾಗುತ್ತ ಆಮೇಲೆ" ಹೇಳಿದ ಕೃಷ್ಣಮೂರ್ತಿ.

"ಅಯ್ತು" ಗಿರಿಜ ಹೇಳಿದಳು.

ಅಡುಗೆಮನೆಯಲ್ಲಿ ತಿಂಡಿಗಳನ್ನು ತಯಾರಿಸುತ್ತಿದ್ದ ಅಡುಗೆಯಾಕೆ ದೇವಮ್ಮನಿಗೆ ಈ ಮಾತುಗಳೆಲ್ಲವೂ ಷ್ಪಷ್ಟವಾಗಿ ಕೇಳಿಸುತ್ತಿದ್ದವು. 'ಈ ಮನೆಯಲ್ಲಿ ಮನುಷ್ಯರು ಆಡುವ ಮಾತುಗಳೇ ಬೇರೆ, ಮಾಡುವ ಕೆಲಸಗಳೇ ಬೇರೆ. ಆದರೂ ತನಗೇಕೆ? ತನ್ನಂಥವರು ಇಂತಹ ಮನೆಗಳಲ್ಲಿ ಸಂಭವಿಸುವ ಘಟನೆಗಳಿಗೆ ಬಾಯಿ, ಕಣ್ಣು, ಕಿವಿಗಳನ್ನು ಮುಚ್ಚಿಕೊಂಡಿರಬೇಕು. ಇಲ್ಲದಿದ್ದರೆ ದಿನ ಕಳೆಯುವುದೂ ಗಂಡಾಂತರವಾಗುತ್ತದೆ' ಎಂದುಕೊಂಡಳು.



ಕೃಷ್ಣಮೂರ್ತಿಯು ಹಿರಿಯ ಹುದ್ದೆಯಲ್ಲಿರುವ ಪ್ರಭುತ್ವೋದ್ಯೋಗಿ. ಹೈದರಾಬಾದ್‌ನ ಆನಂದ್ ನಗರ್ ಕಾಲನಿಯಲ್ಲಿ ದೊಡ್ಡ ಮಹಡಿಮನೆಯನ್ನು ಕಟ್ಟಿಸಿದ್ದ. ಸಂಬಳವಲ್ಲದೆ ಆತನಿಗೆ 'ಮಾಮೂಲು' ಭಾಗವು ಸಿಗುತ್ತಿತ್ತು. ಬುದ್ಧಿವಂತನಾದ್ದರಿಂದ ಎರಡು ಕೈಗಳಿಂದ ಮಾತ್ರವಲ್ಲದೆ ಎರಡು ನಾಲಿಗೆಗಳಿಂದಲೂ ಸಂಪಾದನೆ ಮಾಡುತ್ತಿದ್ದ. ಪತ್ನಿ ಗಿಜಲು ಆತನಿಗೆ ತಕ್ಕ, ಹೇಳಿಮಾಡಿಸಿದಂತಹ ಜೋಡಿಯಾಗಿದ್ದಳು. ಇಬ್ಬರೂ ಸೇರಿಕೊಂಡು ಏನನ್ನಾದರೂ ಮನೆಯೊಳಗೆ ಸೇರಿಸುವರೇ ಹೊರತು ಒಂದು ಕಸದಕಡ್ಡಿಯನ್ನೂ ಹೊರಗೆ ಹೋಗಲು ಬಿಡುವವರಲ್ಲ. ಇಬ್ಬರಿಗೂ ಆಡಂಬರದ ಹೆಚ್ಚು! ತಮ್ಮ ಮನೆಯಲ್ಲಿ ಅರೆಹೊಟ್ಟೆ ಉಂಡರೂ, ಯಾರ ಮನೆಗಾದರೂ ಹೋದರೆ ಮಾತ್ರ ಹೊಟ್ಟೆ ಬಿರಿಯುವಷ್ಟು ತಿನ್ನುತ್ತಿದ್ದರು. ಅವರಿಗೆ

ಇಬ್ಬರು ಮಕ್ಕಳು. ಮಗ, ಸೊಸೆ ಲಂಡನ್‌ನಿಂದ ಬಂದಿದ್ದರು. ಮಗಳು, ಅಳಿಯ ಅಮೆರಿಕಾದಿಂದ ಬಂದಿದ್ದರು. ಮೊಮ್ಮಗನ ಹುಟ್ಟಿದ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲು ಹೋಟೇಲ್ ವೈಸ್ರಾಯ್‌ನಲ್ಲಿ ಎಲ್ಲ ಏರ್ಪಾಟುಗಳನ್ನು ಮಾಡಿದ್ದ ಕೃಷ್ಣಮೂರ್ತಿ. ಅಷ್ಟೊಂದು ಹಣವನ್ನು ಖರ್ಚುಮಾಡಬೇಕಾದರೆ, ಅದಕ್ಕೆ ಎರಡರಷ್ಟು ಲಾಭ ಪಡೆಯುವ ಉಪಾಯವಾವುದೋ ಆತನ ಮೆದುಳಿನಲ್ಲಿ ಮನೆಮಾಡಿರಲೇ ಬೇಕು!

ರಾಜಾರಾವ್ ಕೃಷ್ಣಮೂರ್ತಿಯ ಅಣ್ಣ. ಅದೇ ಊರಿನಲ್ಲಿ ವ್ಯಾಪಾರವನ್ನು ಮಾಡಿಕೊಂಡಿದ್ದ. ಹಣದ ವಿಷಯದಲ್ಲಿ ಅಕ್ಷರಶಃ ಕೃಷ್ಣಮೂರ್ತಿಗೆ ಅಣ್ಣನೇ ಹೌದು! ವ್ಯಾಪಾರಿಯಾದ್ದರಿಂದ ವ್ಯಾಪಾರದಲ್ಲಿ ಆತನಿಗೆ ಎಲ್ಲವೂ ನ್ಯಾಯ ಸಮ್ಮತವೇ. ಎದುರಿಗಿರುವವನನ್ನು ಕೊಂದು ಅವನ ಸಮಾಧಿಯ ಮೇಲೆ ಮಹಡಿಯನ್ನು

3

ನಿರ್ಮಿಸಬಲ್ಲ ಸಮರ್ಥನು. ಅಂತೆಯೇ ಅಣ್ಣತಮ್ಮಂದಿರಿಬ್ಬರಿಗೂ ಅಷ್ಟೊಂದು ಅನ್ಯೋನ್ಯತೆ. ಅವರಿಬ್ಬರೂ ಯಾವಾಗಲೂ ಆ ವಾರದಲ್ಲಿ ತಾವೆಷ್ಟು ಸಂಪಾದಿಸಿರಬಹುದೆಂದೇ ಮಾತನಾಡುವುದು. ಎಲ್ಲದಕ್ಕೂ ಲೆಕ್ಕಾಚಾರ ಹಾಕುವವರು. ಕಡೆಗೆ ಆ ದಿನ ತಾಯಿಯು ಊರಿನಿಂದ ಬರುತ್ತಿರುವ ವಿಷಯ ತಿಳಿದಿದ್ದರೂ 'ಅದೇ ಕೆಲಸವಾಗಿ ಮುಂಜಾವಿನಲ್ಲಿಯೇ ತಮ್ಮನ ಮನೆಗೆ ಹೋಗಿ ಆಕೆಯನ್ನು ನೋಡದಿದ್ದರೇನಾಗುತ್ತದೆ? ಪೆಟ್ರೋಲ್ ಖರ್ಚಲ್ಲದೆ? ರಾತ್ರಿ ಹೇಗೂ ಹೊಟೇಲ್‌ನಲ್ಲಿ ಕಾಣುತ್ತೇನೆ ತಾನೆ' ಎಂದು ಭಾವಿಸುವ ಮನುಷ್ಯ ರಾಜಾರಾವ್. ಆತನ ಪತ್ನಿ ವನಜ ಸ್ವಭಾವದಲ್ಲಿ ಗಿರಿಜಳಿಗೆ ಅಕ್ಕನೇ ಸರಿ! ಭಗವಂತನು ಇಂತಹವರನ್ನೆಲ್ಲ ಒಂದೇಕಡೆ ಸೇರಿಸಿರುವುದು ವಿಸ್ಮಯವೆನಿಸುತ್ತದೆ!

ಸಮಯ ಒಂಭತ್ತಾಗುತ್ತಿದೆ. ಬೆಳಿಗ್ಗೆ ಏಳು ಗಂಟೆಗೆ ಮುಂಚೆಯೇ ರೈಲಿನಿಂದಿಳಿದಿದ್ದ ತುಳಸಮ್ಮನಿಗೆ ಪ್ಲಾಟಫಾರಂ ಮೇಲೆ ನಿಂತೇ ಇದ್ದುದರಿಂದ ಕಾಲುಗಳು ನೋಯತೊಡಗಿದವು. ಬರುವವರು, ಹೋಗುವವರು ಕಾಣಿಸುವಂತೆ ಬಾಗಿಲ ಎದುರಿಗಿದ್ದ ಬೆಂಚನ್ನು ಹುಡುಕಿಕೊಂಡು ಕುಳಿತಳು. ಯಾವ ಕಾಲಕ್ಕೋ ತನ್ನ ಪತಿಯು ರಾಜಮಂಡ್ರಿಯಲ್ಲಿ ಕಟ್ಟಿಸಿದ್ದ ಮನೆಯಲ್ಲಿಯ ಒಂದು ಭಾಗವನ್ನು ಬಾಡಿಗೆಗೆ ಕೊಟ್ಟು ಮತ್ತೊಂದು ಭಾಗದಲ್ಲಿ ವಾಸಿಸುತ್ತಾ, ತನ್ನ ಶೇಷ ಜೀವನವನ್ನು ಕಳೆಯುತ್ತಿದ್ದಳು. ಮುದಿವಯಸ್ಸಿನಲ್ಲಿ ತನ್ನನ್ನು ಒಂದು ದಿನವಾದರೂ ಗಂಡುಮಕ್ಕಳು ತಮ್ಮ ಬಳಿ ಇಟ್ಟುಕೊಳ್ಳಲಿಲ್ಲವೆಂದು ಎಂದೂ ಆಕೆ ನೊಂದುಕೊಳ್ಳಲಿಲ್ಲ. ಕೃಷ್ಣಮೂರ್ತಿಯು ಫೋನ್ ಮಾಡಿ ಮೊಮ್ಮಗನ ಜನ್ಮ ದಿನಕ್ಕೆ ಬರಬೇಕೆಂದು ಒತ್ತಾಯಿಸಿದಾಗ ಕೂಡಾ ಆಕೆ "ಇದೇನಾದರೂ ಮದುವೇನೇ, ಮುಂಜೀನೇ? ಅವುಗಳಿಗಾದರೆ ಬರೋದು ತಪ್ಪಿದ್ದಲ್ಲ. ಹುಟ್ಟಿದಹಬ್ಬ ತಾನೇ–ನೀವೆಲ್ಲರೂ ಸಂತೋಷವಾಗಿ ಆಚರಿಸಿರಿ" ಎಂದು ಹೇಳಿದ್ದಳು. ಕೃಷ್ಣಮೂರ್ತಿಯು ಮಾತ್ರ ಆಕೆಯ ಮಾತುಗಳನ್ನು ಒಪ್ಪದೆ, ಬರಲೇಬೇಕೆಂದು ಪಟ್ಟು ಹಿಡಿದಿದ್ದ.

"ಏನಿದೆ ಅಮ್ಮಾ, ಇಂದು ಗೌತಮಿಯಲ್ಲಿ ಬರೋದು, ನಾಡಿದ್ದು ಗೌತಮಿಯಲ್ಲಿ ಹೊರಡೋದು. ನೀನು ಇಲ್ಲಿಂದ ಹೊರಟ ಎರಡು ದಿನಗಳಲ್ಲಿಯೇ ನಾವು ಹೇಗೂ ನಾರ್ತ್ ಇಂಡಿಯಾ ಟೂರ್‌ಗೆ ಹೋಗುವವರಿದ್ದೇವೆ. ಮತ್ತೇನೂ ಮಾತನಾಡದೆ ನೀನಿನ್ನು ಹೊರಟು ಬಾ. ಸ್ಟೇಷನ್ನಿಗೆ ಬಂದು ನಾನು ನಿನ್ನನ್ನು ಇಳಿಸಿಕೊಳ್ತೇನೆ, ಆಯ್ತಾ!" ಎಂದವನೇ ರಿಸೀವರನ್ನು ಇಟ್ಟಿದ್ದ. ಹಾಗೆಂದೇ, ಮಗನು ಸೂಚಿಸಿದಂತೆ ಮರುಪ್ರಯಾಣಕ್ಕೆ ಟಿಕೆಟನ್ನು ಕೊಂಡ ನಂತರವೇ ಹೊರಟು ಬಂದಿದ್ದಳು ತುಳಸಮ್ಮ.

ಸ್ನಾನ ಮುಗಿಸಿ, ತುಳಸಿ ವೃಂದಾವನಕ್ಕೆ ನೀರನ್ನು ಹಾಕದೇ ಒಂದು ಹನಿ ನೀರನ್ನೂ ಗಂಟಲಿಗೆ ಹಾಕಿಕೊಳ್ಳುತ್ತಿರಲಿಲ್ಲ ತುಳಸಮ್ಮ. ಆಕೆಗೆ ನರಗಳು ವಶ ತಪ್ಪುತ್ತಿವೆಯೆಂದೆನಿಸಿತು. ತಾನೇ ಒಂದು ಆಟೋ ಮಾಡಿಕೊಂಡು ಮಗನ ಮನೆಗೆ ಹೋಗಬೇಕೆಂದುಕೊಂಡಳು. ಆದರೆ, ಹಲವಾರು ಬಾರಿ ಹೋಗಿದ್ದ ಮನೆಯೇ ಆಗಿದ್ದರೂ ಆ ವಿಳಾಸವನ್ನು ಪತ್ತೆ ಹಚ್ಚುವೆನೋ ಇಲ್ಲವೋ ಎಂಬ ಭಯ ಆವರಿಸಿತ್ತು. ಬಾಗಿಲಿನತ್ತ ದೃಷ್ಟಿ ಹಾಯಿಸಿ ಹಾಯಿಸಿ ಆಕೆಯ ಕಣ್ಣುಗಳು ನೋಯತೊಡಗಿದವು. ಬಸ್ ನಿಲ್ದಾಣದಿಂದ ಸೊಸೆಯ ಸ್ನೇಹಿತೆಯಾದ ರಮಾಳನ್ನು ಕರೆತಂದು ಮನೆಯ ಬಳಿ ಇಳಿಸಿ ತುಳಸಮ್ಮನಿಗಾಗಿ ಮತ್ತೆ ರೈಲ್ವೆ ನಿಲ್ದಾಣಕ್ಕೆ ಬಂದಿದ್ದ ದಾಸ್. ಸ್ಟೇಷನ್ನಿಗೆ ಸಿಟಿಬಸ್‌ನಲ್ಲಿ ಹೋಗುವಂತೆ, ಬರುವಾಗ ತುಳಸಮ್ಮನ ಜೊತೆಗೆ ಆಟೋದಲ್ಲಿ ಬರುವಂತೆ ಹೇಳಿದ್ದಳು ಗಿರಿಜ. ಅಷ್ಟು ಮಾತ್ರ ಹಣವನ್ನು ಕೊಟ್ಟಿದ್ದಳು ದಾಸ್‌ಗೆ. ಸಿಟಿಬಸ್‌ಗಾಗಿ ಕಾದು, ಬಂದ ನಂತರ ಅದರಲ್ಲಿ ಬಂದಿದ್ದ ಕಾರಣ ದಾಸ್ ಸ್ಟೇಷನ್ ತಲುಪುವಷ್ಟರಲ್ಲಿ ಒಂಭತ್ತು ಮೀರಿತ್ತು. ದಾಸ್‌ನನ್ನು ನೋಡಿದಕೂಡಲೇ ತುಳಸಮ್ಮನಿಗೆ ಪ್ರಾಣವು ಬಂದಂತಾಯಿತು. ಆಟೋ ಮಾತನಾಡಿ, ಇಬ್ಬರೂ ಸೇರಿ ಮನೆ ಮುಟ್ಟುವಷ್ಟರಲ್ಲಿ ಸಮಯವು ಸುಮಾರು ಹತ್ತು ಗಂಟೆಯಾಗಿತ್ತು.

– 4 –

ಮನೆಯಲ್ಲಿ ಎಲ್ಲರೂ ತುಳಸಮ್ಮನನ್ನು 'ಹಾಯ್' ಎಂದು ಮಾತನಾಡಿಸಿ ತಕ್ಷಣ 'ಬಾಯ್'ಎನ್ನುತ್ತಾ ತಮ್ಮ ತಮ್ಮ ಕೆಲಸಗಳಲ್ಲಿ ಮಗ್ನರಾದರು. ಎಲ್ಲರನ್ನೂ ವಿಚಾರಿಸಿದ ನಂತರ ತುಳಸಮ್ಮ ಅಡುಗೆ ಮನೆಗೆ ಬಂದಳು. ದೇವಮ್ಮನನ್ನು ಮಾತನಾಡಿಸಿ ನಿತ್ಯಕೃತ್ಯಗಳಲ್ಲಿ ಮುಳುಗಿದಳು.

ಡಿನ್ನರ್ ರಾತ್ರಿ ಎಂಟು ಗಂಟೆಗೆಂದು ಎಲ್ಲರಿಗೂ ತಿಳಿಸಿದ್ದರೂ, ಸ್ವತಃ ಕೃಷ್ಣಮೂರ್ತಿಯ ಮನೆಯವರೆಲ್ಲರೂ ಕದಲುವಷ್ಟರಲ್ಲಿ ಏಳೂವರೆ ಆಗಿತ್ತು. ಆ ಸಮಯದಕ್ಕೆ ಜ್ಞಾಪಕಮಾಡಿಕೊಂಡು ಒಬ್ಬರು ಡ್ರೈಕ್ಲೀನಿಂಗ್ ಷಾಪಿಗೆ, ಇನ್ನೊಬ್ಬರು ಮ್ಯಾಚಿಂಗ್ ಬ್ಲೌಸ್ ಇನ್ನೂ ಬಂದಿಲ್ಲವೆಂದು ಟೈಲರ್‌ನ ಬಳಿಗೆ ಒಬ್ಬೊಬ್ಬ ಆಳನ್ನು ಒಂದೊಂದು ಕಡೆಗೆ ಕಳಿಸಿದ್ದರು. ಮನೆಯಲ್ಲಿಯ ಆಳುಗಳು ಸಾಲದೆಂಬಂತೆ ಆಫೀಸಿನ ಜವಾನರು ಸಹ ಯಾವುದೋ ಒಂದು ಕೆಲಸಕ್ಕಾಗಿ ಮನೆಯ ಹೊರಗೆ, ಒಳಗೆ ಅವಸರವಸರವಾಗಿ ತಿರುಗಾಡುತ್ತಿದ್ದರು. ತುಳಸಮ್ಮ ಮಾತ್ರ ಅವರಾರಿಗೂ ಅಡ್ಡವಾಗದಂತೆ ಏಳು ಗಂಟೆಗೆಲ್ಲ ಮುಖ ತೊಳೆದುಕೊಂಡು, ಬೆರಳುಗಳಿಂದ ತಲೆಕೂದಲನ್ನು ಸರಿಮಾಡಿ ಗಂಟು ಹಾಕಿಕೊಂಡು, ಹಣೆಯಮೇಲೆ ವಿಭೂತಿಯ ಗೆರೆ ಎಳೆದುಕೊಂಡು ಜರಿ ಅಂಚಿನ ನೂಲಿನ ಸೀರೆಯನ್ನುಟ್ಟು , ಕರೆದಾಗ ಹೊರಡಲು ಸಿದ್ಧಳಾಗಿ ಹಾಲ್‌ನಲ್ಲಿದ್ದ ಸೋಫಾದಮೇಲೆ ಕುಳಿತಿದ್ದಳು.

ಗಡಿಬಿಡಿಯಾಗಿ ಮನೆಯ ಹೊರಗೂ ಒಳಗೂ ಅಡ್ಡಾಡುತ್ತಿದ್ದ ಕೃಷ್ಣಮೂರ್ತಿಯ ಕಣ್ಣಿಗೆ ಬಿದ್ದ ಅಮ್ಮನನ್ನು ನೋಡಿ, ತಕ್ಷಣ ಹೆಂಡತಿಯನ್ನು ಕೂಗಿ "ನಿನಗೆ ಕೊಂಚವಾದರೂ ಬುದ್ಧಿ ಇದೆಯಾ? ನಮ್ಮಮ್ಮ ಆ ನೂಲಿನ ಸೀರೆಯನ್ನುಟ್ಟು ಫಂಕ್ಷನ್‌ಗೆ ಬರುವುದೇ? ನಾಲ್ಕು ಜನರಲ್ಲಿ ನನಗೆಷ್ಟು ಅವಮಾನ ಅಂತ!" ಎಂದ. ಕೂಡಲೇ ಗಿರಿಜ ಅಲಮಾರವನ್ನೆಲ್ಲ ತಡಕಾಡಿ ತಾನು ಈ ಮಧ್ಯೆ ಉಡುವುದನ್ನು ಬಿಟ್ಟಿದ್ದ ಹಳೆಯ ರೇಷ್ಮೆಸೀರೆಯೊಂದನ್ನು ಹೊರಗೆ ತೆಗೆದು "ಅತ್ತೆ, ಇದೋ, ಈ ರೇಷ್ಮೆಸೀರೆಯನ್ನು ಉಟ್ಟುಕೊಳ್ಳಿ. ನಿಮಗೆ ಚೆನ್ನಾಗಿ ಒಪ್ಪುತ್ತದೆ" ಎಂದಳು.

ಅದಕ್ಕೆ ತುಳಸಮ್ಮ "ಅಯ್ಯೋ, ನನಗ್ಯಾಕಮ್ಮಾ ರೇಷ್ಮೆ ಸೀರೆ? ಭಾರವಾಗಿರುತ್ತೆ. ಆ ಭಾರಕ್ಕೆ ಸ್ವಲ್ಪವೇ ಸಮಯದಲ್ಲಿ ಕಾಲುಗಳು ಎಳೆದಂತಾಗುತ್ತದೆ. ಈಗ ನಾನುಟ್ಟಿರೋದು ಹಗುರವಾಗಿ, ಸುಖ ಅನಿಸುತ್ತೆ" ಅಂದಳು.

"ಹಾಗಲ್ಲ ಅತ್ತೆ, ನಾಲ್ಕು ಜನರ ನಡುವೆ ಚೆನ್ನಾಗಿರೋಲ್ಲ ಅನ್ನುತ್ತಿದ್ದಾರೆ ನಿಮ್ಮ ಮಗ"

"ಹಿರಿಯವಳು, ನಾನು ಹೇಗಿದ್ರೆ ಏನಮ್ಮಾ, ಯಾವುದನ್ನು ಉಟ್ಕೊಂಡ್ರೆ ಏನಂತೆ? ನೀವು ಮಾತ್ರ ಒಳ್ಳೆಯ ಸೀರೆಗಳನ್ನು ಉಟ್ಟುಕೊಳ್ಳಿ" ಎಂದಳು ತುಳಸಮ್ಮ .

ತಾಯಿಯ ಮಾತುಗಳನ್ನು ಕೇಳಿದ ಕೃಷ್ಣಮೂರ್ತಿ "ಅಮ್ಮಾ, ಅದೆಷ್ಟು ಸಾರಿ ಹೇಳಿಸಿಕೊಳ್ತೀಯಾ? ರೇಷ್ಮೆ ಸೀರೆಯನ್ನು ಕೊಟ್ಟಿರುವಳಲ್ಲಾ, ಉಟ್ಟುಕೊಳ್ಳಲು ಏನಾಗಿದೆ ನಿನಗೆ?" ಎಂದ. ಧ್ವನಿ ಸ್ವಲ್ಪ ಗಡುಸಾಗಿತ್ತು.

ಮರುಮಾತನಾಡದೆ ತುಳಸಮ್ಮ ಸೀರೆಯನ್ನು ಬದಲಿಸಿಕೊಂಡು ಬಂದಳು. ಮುತ್ತು, ಹವಳಗಳಿಂದ ಪೋಣಿಸಿದ್ದ ಎರಡೆಳೆ ಚೈನ್ ಒಂದನ್ನು ಅತ್ತೆಯ ಕೈಗೆ ಕೊಟ್ಟಳು ಗಿರಿಜ. ಕಿಮ್ಮೆನ್ನದೆ ಧರಿಸಿದಳು ತುಳಸಮ್ಮ. ಅಂತೂ ಎಲ್ಲರೂ ಕಲೆತು ಮನೆಯಿಂದ ಕದಲಿ ವೈಸ್ರಾಯ್ ಸೇರುವಷ್ಟರಲ್ಲಿ ಎಂಟು ಗಂಟೆ ದಾಟಿಹೋಗಿತ್ತು. ವೈಸ್ರಾಯ್‌ನ ಮುಂದೆ ಕಾರು ನಿಂತ ಕ್ಷಣದಿಂದ ಒಂದೇಸಮನೆ ವೀಡಿಯೋಗಳನ್ನು, ಫೋಟೋಗಳನ್ನು ತೆಗೆಯಲು ಶುರುಮಾಡಿದರು. ಲಾನ್‌ನ ಒಂದು ಬದಿಯಲ್ಲಿ ತುಂಬಾ ಕಲಾತ್ಮಕವಾಗಿ ವೇದಿಕೆಯನ್ನು ಅಲಂಕಾರ ಮಾಡಿದ್ದರು. ನಗರದಲ್ಲಿರುವ ಎಲ್ಲ ಜಾತಿಯ ಹೂಗಳೂ ಅಲ್ಲೇ ಸೇರಿವೆ ಎಂಬಂತೆ ವೇದಿಕೆಯಮೇಲೆ ಮಯೂರ ಆಕಾರದ ಸಿಂಹಾಸನದಂತಹ ಕುರ್ಚಿಯನ್ನು ತಾಜಾ ಹೂಗಳಿಂದ ಬಹಳ

–5–

ಅಂದವಾಗಿ ಸಿಂಗರಿಸಿದ್ದರು. ಆ ಅಂದವನ್ನು ಎರಡುಪಟ್ಟು ಹೆಚ್ಚಿಸಿ, ಅವುಗಳ ಸೌಂದರ್ಯವನ್ನು ಪ್ರತಿಬಿಂಬಿಸಿ ಮೆರೆಯುತ್ತಿದ್ದ ಬಣ್ಣಬಣ್ಣಗಳ ಬಲ್ಬ್‌ಗಳ

ಜೋಡಣೆಯನ್ನು ನೋಡಲು ಎರಡು ಕಣ್ಣುಗಳು ಸಾಲದಾಗಿತ್ತು. ಆ ಹೂಗಳ ಸಹಜ ಸುವಾಸನೆಯೇ ಇರಬೇಕೆನಿಸುವಂತಹ ಸೇಂಟ್‌ನ ಪರಿಮಳವು ಇಡೀ ಲಾನ್‌ನಲ್ಲಿ ಹರಡಿತ್ತು. ಲಾನ್ ಒಳಗಡೆ ಹೆಜ್ಜೆ ಇಡುತ್ತಿದ್ದಂತೆಯೇ ಮತ್ತು ಬರುವಂತಹ ಒಂದು ಸುವಾಸನೆಯು ಆಹೂತರೆಲ್ಲರನ್ನೂ ಸಮ್ಮೋಹನಗೊಳಿಸುತ್ತಿತ್ತು .

ಕೃಷ್ಣಮೂರ್ತಿಯ ಮೂರು ವರ್ಷದ ಮೊಮ್ಮಗನು ಆ ಸಿಂಹಾಸನದಮೇಲೆ ಜನ್ಮ ದಿನವನ್ನು ಆಚರಿಸಲು ಯುವರಾಜನಂತೆ ಕುಳಿತಿದ್ದನು. ಥಳಥಳ ಮೆರೆಯುವ ತಾರೆಗಳ ಮಧ್ಯೆ ಶೋಭಿಸುವ ಚಂದ್ರನಂತೆ, ಅಂದಚಂದದ ಗೋಪಿಕೆಯರ ನಡುವೆ ಮುದ್ದು ಬಾಲಕೃಷ್ಣನಂತೆ ಆ ಚಿರಂಜೀವಿ ಮೆರೆಯುತ್ತಿದ್ದ. ಆಗಮಿಸಿದ್ದ ಅತಿಥಿಗಳೆಲ್ಲರಿಗೂ ಲಾನ್‌ನಲ್ಲಿ ವಿಶಾಲವಾಗಿ ಡಿನ್ನರ್ ಏರ್ಪಾಟು ಮಾಡಿದ್ದರು. ವೇದಿಕೆಯಮೇಲೆ ಮೊಮ್ಮಗನ ಬಗಲಿಗೆ ಕೃಷ್ಣಮೂರ್ತಿ, ಗಿರಿಜ ನಿಂತಿದ್ದು ತುಳಸಮ್ಮನನ್ನು ತಮ್ಮ ಪಕ್ಕದಲ್ಲಿಯೇ ನಿಲ್ಲಿಸಿಕೊಂಡಿದ್ದರು. ಬಂದವರಲ್ಲಿ ಈಗಾಗಲೆ ಪರಿಚಯವಿದ್ದವರು ಆಗಿದ್ದಲ್ಲಿ ಅವರ, ಅವರ ಮಕ್ಕಳ ಯೋಗಕ್ಷೇಮಗಳನ್ನು ತುಳಸಮ್ಮ ಕೇಳಿ ತಿಳಿದುಕೊಳ್ಳುತ್ತಿದ್ದಳು. ಪರಿಚಯವಿಲ್ಲದವರನ್ನು ಅವರವರ ಹುದ್ದೆ, ಅಂತಸ್ತುಗಳೊಂದಿಗೆ ತಾಯಿಗೆ ಪರಿಚಯ ಮಾಡಿಕೊಡುತ್ತಿದ್ದ ಕೃಷ್ಣಮೂರ್ತಿ. ಅತಿಥಿಗಳ ಹಾಗೆ ಬಂದು ಮಾತನಾಡಿಸಿದ ಹಿರಿಯ ಮಗ, ಸೊಸೆಯರು ತನ್ನನ್ನು ವಿಚಾರಿಸಿಕೊಂಡ ಬಗೆ ತುಳಸಮ್ಮನಿಗೆ ತೃಪ್ತಿಯಾಗಿರಲಿಲ್ಲ. ಅವರನ್ನು ಹತ್ತಿರ ಕೂಡಿಸಿಕೊಂಡು ಮೊಮ್ಮಕ್ಕಳ ಬಗ್ಗೆ ಒಬ್ಬೊಬ್ಬರ ಹೆಸರು ಹಿಡಿದು ತಿಳಿದುಕೊಳ್ಳಬೇಕೆಂದು ತುಂಬಾ ಆಸೆ ಪಟ್ಟಿದ್ದಳು. ಆದರೆ ಆಕೆಗೆ ಆ ಅವಕಾಶವು ಒದಗಲಿಲ್ಲ.

ಆದರೆ ವನಜ, ಗಿರಿಜರು ಮಾತ್ರ ಅತ್ತೆಯವರೆಂದರೆ ತುಂಬಾ ಗೌರವವಿರುವವರಂತೆ, ಪ್ರತಿ ಸಣ್ಣ ವಿಷಯಕ್ಕೂ "ಅತ್ತೇ, ಏನಂತೀರೀ?" ಎಂದು ಕೇಳುವುದೂ, ಬಹಳ ನಮ್ರತೆಯಿಂದ ನಡೆದುಕೊಳ್ಳುವುದೂ ಮಾಡುತ್ತಿದ್ದರು. ಕೃಷ್ಣಮೂರ್ತಿಯದು ಇನ್ನೂ ಸ್ವಲ್ಪ ಹೆಚ್ಚೆಂದೇ ಹೇಳಬಹುದು.

ಅತಿಥಿಗಳೆಲ್ಲರೂ ಅದನ್ನು ನೋಡಿ ಸಂತಸಪಟ್ಟು "ಅಷ್ಟೊಂದು ಹಣ, ದೊಡ್ಡ ಹುದ್ದೆ ಇರುವ ಆತನ ವಿನಯವನ್ನು ನೋಡಿ! ತಾಯಿಯನ್ನು ಹೇಗೆ ನೆತ್ತಿಯಮೇಲೆ ಕೂಡಿಸಿಕೊಳ್ಳುತ್ತಿರುವನು! ಅದಕ್ಕಾಗಿಯೇ ಆತನು ಅಷ್ಟೊಂದು ಉನ್ನತ ಸ್ಥಿತಿಯಲ್ಲಿರುವುದು ! ಇಷ್ಟಕ್ಕೂ ಅದೃಷ್ಟವೆಂದರೆ ಆ ತಾಯಿಯದು. ತಾಯಿಯು ಗೀಚಿದ ಗೆರೆಯನ್ನು ದಾಟದ ಪುತ್ರರನ್ನು ಹೆತ್ತ ಪುಣ್ಯವಂತಳು...ಆ ಸೊಸೆಯರು ಮಾತ್ರ! ಏನು ವಿನಯ, ಏನು ಗೌರವ...ಅತ್ತೆಗೆ ಹಿರಿಯತನವನ್ನು ಆಪಾದಿಸುವುದಿದೆ ನೋಡಿ...ಅದೂ ಘನತೆ! ಮಕ್ಕಳ ವಿಷಯ ಹಾಗಿಡಿ–ಅವರು ಎಷ್ಟೆಂದರೂ ಆಕೆಯ ಪುತ್ರರು. ಆದರೆ ಹೊರಗಿನಿಂದ ಬಂದ ಸೊಸೆಯರು ಆ ರೀತಿ ನಡೆದುಕೊಳ್ಳುವುದು ಆಕೆಯ ಅದೃಷ್ಟವೇ ಸರಿ..." ಎಂದು ಮಾತ ನಾಡಿಕೊಳ್ಳುತ್ತಿದ್ದರು.

ಇನ್ನೂ ಕೆಲವರು ತಮ್ಮ ಮಕ್ಕಳೊಂದಿಗೆ "ನೋಡಿದಿರಾ ಅಂಕಲ್‌ನನ್ನು , ತಾಯಿಯನ್ನು ಯಾವ ರೀತಿ ಗೌರವಿಸಬೇಕೆಂಬುದನ್ನು ಆತನನ್ನು ನೋಡಿ ಕಲಿಯಿರಿ" ಎಂದು ಹೇಳುತ್ತಿದ್ದರು.

ಒಂಭತ್ತಾಯಿತು... ಹತ್ತಾಯಿತು. ಮೊಮ್ಮಗನೊಮ್ಮೆ, ಅವನ ತಂದೆತಾಯಿಯರೊಮ್ಮೆ , ಕೃಷ್ಣಮೂರ್ತಿ– ಗಿರಿಜರು ಹೀಗೆ ಒಬ್ಬರ ನಂತರ ಮತ್ತೊಬ್ಬರು ಹೋಗಿ ಡಿನ್ನರ್ ಮುಗಿಸಿಕೊಂಡು ಬಂದರು. ತುಳಸಮ್ಮನಿಗೆ ಏನುಮಾಡುವುದೆಂದು ತೋಚುತ್ತಿಲ್ಲ. ಅಲ್ಲಿ ಇರಬೇಕೋ, ಇರಬಾರದೋ ತಿಳಿಯುತ್ತಿಲ್ಲ. ವೇದಿಕೆಯಿಂದ ಕೆಳಗಿಳಿದರೆ ಮತ್ತಾರಿಗಾದರೂ ಪರಿಚಯ ಮಾಡಿಕೊಡಬೇಕಾದರೆ ಕರೆಯುವರೋ ಏನೋ? ಹಿಂದಿನ ರಾತ್ರಿಯಿಡೀ ಪ್ರಯಾಣಮಾಡಿದ ಬಳಲಿಕೆ ಬೇರೆ. ಮಧ್ಯಾಹ್ನ ಮನೆಯಲ್ಲಿ ಮಕ್ಕಳಿಗೆ ಇಷ್ಟವೆಂದು ದೇವಮ್ಮನಿಗೆ ಹೇಳಿ ಎಲ್ಲ ಪದಾರ್ಥಗಳನ್ನೂ ಮಸಾಲೆ ಬೆರೆಸಿಯೇ ತಯಾರು ಮಾಡಿಸಿದ್ದಳು ಗಿರಿಜ. ಆ ಮಸಾಲೆ

–6–

ಪದಾರ್ಥಗಳನ್ನು ತುಳಸಮ್ಮ ತಿನ್ನುತ್ತಿರಲಿಲ್ಲ. ಹಾಗಾಗಿ ಸ್ವಲ್ಪ ಮಜ್ಜಿಗೆ ಅನ್ನವನ್ನು ಮಾತ್ರ ಉಂಡಿದ್ದಳು. ನಿತ್ರಾಣವೆನಿಸುತ್ತಿತ್ತು. ಜೊತೆಗೆ ರೇಷ್ಮೆಸೀರೆಯ ಭಾರವು ಬೇರೆ. ಆ ಭಾರಕ್ಕೆ ಹಾಗೂ ತುಂಬಾ ಸಮಯ ನಿಂತೇ ಇದ್ದುದರಿಂದ ಕಾಲುಗಳು ನೋಯತೊಡಗಿದವು. ಮುಲಾಜಿಗೆ ಧರಿಸಿದ್ದ ಎರಡೆಳೆ ಚೈನ್ ಕ್ಷಣಕ್ಷಣಕ್ಕೂ ಭಾರವೆನಿಸುತ್ತಿತ್ತು. ಹೇಗೋ ಧೈರ್ಯಮಾಡಿ ಕೆಳಗಿಳಿದುಹೋಗಿ ಏನನ್ನಾದರೂ ತಿನ್ನೋಣವೆಂದರೆ, ಕೆಳಗಿಳಿದರೆ ಏನನ್ನುವರೋ? ಒಂದು ವೇಳೆ ಹೋದರೂ, ಅಲ್ಲಿ ತಾನು ತಿನ್ನಬಹುದಾದ ಪದಾರ್ಥಗಳು ಇವೆಯೋ ಇಲ್ಲವೋ? ಆದರೂ, ಅಷ್ಟು ಜನರ ನಡುವೆ ಹೋಗಿ ಪ್ಲೇಟನ್ನು ತೆಗೆದುಕೊಂಡರೂ, ಆ ಪ್ಲೇಟನ್ನು ಹೇಗೆ ಹಿಡಿದುಕೊಳ್ಳುವುದೋ, ಹೇಗೆ ಉಣ್ಣುವುದೋ ಆಕೆಗೆ ಅಭ್ಯಾಸವಿರಲಿಲ್ಲ.

ಎಲ್ಲಿ ನೋಡಿದರೂ ಗುಂಪು ಗುಂಪಾಗಿ ಜನರು. ಕೆಲವರು ನಾಲ್ಕು ದಿನಗಳಿಂದ ಆಹಾರವನ್ನು ಕಂಡಿಲ್ಲದವರಂತೆ ಗಬಗಬನೆ ತಿನ್ನುತ್ತಿದ್ದರು. ಮತ್ತೆ ಕೆಲವರು ಪ್ಲೇಟಿನಲ್ಲಿ ಬಡಿಸಿಕೊಂಡಿದ್ದ ಒಂದೊಂದು ತಿಂಡಿಯನ್ನೂ ಸ್ವಲ್ಪ ಸ್ವಲ್ಪ ತಿಂದು ಪ್ಲೇಟುಗಳನ್ನು ಇಟ್ಟುಬಿಡುತ್ತಿದ್ದರು. ಏನನ್ನಾದರೂ ಕೇಳೋಣವೆಂದು ಹಿರಿಯ ಮಗನಿಗಾಗಿ ಸುತ್ತ–ಮುತ್ತ ಕಣ್ಣಾಡಿಸಿದಳು ತುಳಸಮ್ಮ. ದೂರದಲ್ಲೆಲ್ಲೋ ಮಗನು ಯಾರೊಡನೆಯೋ ಅತಿ ವಿನಯವಾಗಿ, ಕೊಂಚ ಮುಂದಕ್ಕೆ ಬಾಗಿನಿಂತು, ಮಾತನಾಡುತ್ತಿರುವುದನ್ನು ನೋಡಿದಳು. ಲಾಭವಿಲ್ಲ–ತಾನು ಕೂಗಿದರೂ ಮಗನಿಗೆ ಕೇಳಿಸುವುದಿಲ್ಲವೆಂದುಕೊಂಡಳು.

ತುಳಸಮ್ಮನಿಗೆ ನಿತ್ರಾಣವು ಹೆಚ್ಚಾಗಿ ಕಣ್ಣುಗಳಿಗೆ ಕತ್ತಲೆ ಆವರಿಸಿದಂತಾಯಿತು. ಸಂಕೋಚವನ್ನು ಬದಿಗೊತ್ತಿ ಪ್ಲೇಟನ್ನು ಹಿಡಿದು ಸ್ವಲ್ಪ ಮಜ್ಜಿಗೆಅನ್ನವಾದರೂ ತಿನ್ನೋಣವೆಂದುಕೊಂಡಳು. ಅಷ್ಟರಲ್ಲಿ ಅಲ್ಲಿ ಅನ್ನವನ್ನು ಮಾಡಿರುವರೋ ಇಲ್ಲವೋ ಎಂಬ ಅನುಮಾನ ಉಂಟಾಯಿತು. ಕಟ್ಟಕಡೆಯ ಅತಿಥಿಯನ್ನು ಸಹ ಬೀಳ್ಕೊಟ್ಟು ಕೃಷ್ಣಮೂರ್ತಿ ಬಾಗಿಲಬಳಿಯಿಂದ ತಾಯಿಯನ್ನು ಕೂಗಿದ. ಭಗವಂತನು ತನ್ನ ಮೊರೆಯನ್ನು ಆಲಿಸಿದಂತೆ ಭಾಸವಾಯಿತು ತುಳಸಮ್ಮನಿಗೆ. ಆ ಕರೆಗಾಗಿಯೇ ಕಾದಿದ್ದ ಆಕೆ ವೇದಿಕೆ ಇಳಿದು ಮಗನ ಬಳಿಗೆ ಬಂದು 'ಇಲ್ಲಿ ಸ್ವಲ್ಪ ಅನ್ನ–ಮಜ್ಜಿಗೆ ಸಿಗುವುದೋ ಇಲ್ಲವೋ ಮಗೂ' ಎಂದು ಕೇಳಲುದ್ಯುಕ್ತಳಾದಳು. ಅಷ್ಟರಲ್ಲಿ ಕೃಷ್ಣಮೂರ್ತಿ "ಎಲ್ಲಿದ್ದೆಯಮ್ಮಾ ನೀನು, ಬೇಗಬೇಗನೆ ಹೊರಡು...ಎರಡು ಟ್ರಿಪ್‌ಗಳು ಹೊಡೆಯದ ಹೊರತು ಎಲ್ಲರೂ ಮನೆ ಸೇರಲು ಆಗೋಲ್ಲ" ಎಂದವನೇ ಸರಸರನೆ ಕಾರು ಇದ್ದ ಕಡೆಗೆ ಹೆಜ್ಜೆ ಹಾಕಿದ. ಮರುಮಾತನಾಡದೆ ಹೋಗಿ ತುಳಸಮ್ಮ ಕಾರಿನಲ್ಲಿ ಕುಳಿತಳು.

ಮನೆಗೆ ಬರುವಷ್ಟರಲ್ಲಿ ಹನ್ನೊಂದು ಗಂಟೆಯಾಗಿತ್ತು. ಅದರ ಭಾರಕ್ಕೆ ಕಾಲುಗಳು ಎಳೆಯುತ್ತಿರುವಂತಿದ್ದ ರೇಷ್ಮೆ ಸೀರೆಯನ್ನು ಬದಲಿಸಿ, ಜಾಗ್ರತೆಯಾಗಿ ಮಡಿಸಿ, ಕಂಠದಲ್ಲಿದ್ದ ಚೈನನ್ನು ತೆಗೆದು, ಎರಡನ್ನೂ ಮೊಮ್ಮಗಳ ಕೈಗೆ ಕೊಟ್ಟು ಹಗುರವಾಗಿ ಉಸಿರನ್ನು ಎಳೆದುಕೊಂಡಳು ತುಳಸಮ್ಮ . ಸ್ವಲ್ಪ ಸಂಕೋಚಪಡುತ್ತಲೇ ಅಡುಗೆಮನೆಯೊಳಗೆ ಹೋದಳು. ಬೆಳಗಿನ ಟಿಫನ್‌ಗಾಗಿ ಬೇಕಾದ ಏರ್ಪಾಟುಗಳನ್ನು ಮುಗಿಸಿಕೊಂಡು, ಅಡುಗೆಮನೆಯನ್ನು ತಿದ್ದಿಟ್ಟು, ಒಂದು ಮೂಲೆಯಲ್ಲಿ ಚಾಪೆಯನ್ನು ಹಾಸಿಕೊಂಡು ದೇವಮ್ಮ ಮಲಗಲು ಸಿದ್ಧಳಾಗುತ್ತಿದ್ದಳು. ತುಳಸಮ್ಮನನ್ನು ನೋಡಿದೊಡನೆ "ಏನು ಬೇಕು ಅಮ್ಮಾವ್ರೆ?" ಎಂದು ಕೇಳಿದಳು. ಆ ಹೊತ್ತಿನಲ್ಲಿ ದೇವಮ್ಮನಿಗೆ ತೊಂದರೆ ಕೊಡಲು ತುಳಸಮ್ಮನ ಮನಸ್ಸೊಪ್ಪಲಿಲ್ಲ. "ಇಲ್ಲ...ಏನೂ ಬೇಡ...ಸ್ವಲ್ಪ ಕುಡಿಯುವ ನೀರು..." ಎಂದಳು ತುಳಸಮ್ಮ.

ದೇವಮ್ಮನಿಗೆ ಅರ್ಥವಾಯಿತು. ಮುಂಜಾನೆ ಮನೆಯಲ್ಲಿ ಕೇವಲ ಮಜ್ಜಿಗೆಅನ್ನವನ್ನು ಮಾತ್ರ ಉಂಡಿದ್ದ ತುಳಸಮ್ಮ, ಡಿನ್ನರ್‌ಗೆಂದು ಕರೆದೊಯ್ದಿದ್ದ ಆ ಹೊಟೇಲ್‌ನಲ್ಲಿ ಏನನ್ನೂ ತಿಂದಿರಲಿಕ್ಕಿಲ್ಲವೆಂದು ಗ್ರಹಿಸಿದಳು. "ಅಮ್ಮಾವ್ರೇ...ಸ್ವಲ್ಪ ಮಜ್ಜಿಗೆ ಕೊಡಲೇ?" ಎಂದು ಕೇಳಿದಳು ದೇವಮ್ಮ. "ಬೇಡ ದೇವಮ್ಮ, ಈ ಹೊತ್ತಿನಲ್ಲಿ ಇನ್ನು ಮಜ್ಜಿಗೆ ಕೂಡಾ ಒಳ್ಳೆಯದಲ್ಲ. ಸ್ವಲ್ಪ ನೀರು ಕುಡಿದು ಮಲಗುತ್ತೇನೆ" ಎಂದಳು ತುಳಸಮ್ಮ.

–7–

ಕುಡಿಯುವ ನೀರನ್ನು ಕೊಟ್ಟಳು ದೇವಮ್ಮ. ಡೈನಿಂಗ್ ಟೇಬಲ್ ಬಳಿಯಿದ್ದ ಕುರ್ಚಿಯಲ್ಲಿ ಕುಳಿತು ಕೊಂಚ ಕೊಂಚವಾಗಿ ನೀರನ್ನು ಕುಡಿಯುತ್ತಿದ್ದಳು ತುಳಸಮ್ಮ . ಅಷ್ಟರಲ್ಲಿ ಗಿರಿಜ ಅಡುಗೆಮನೆಗೆ ಬಂದು "ದೇವಮ್ಮನವರೇ, ನಿಮ್ಮ ಊಟವಾಯಿತಾ?" ಎಂದು ಕೇಳಿದಳು. ಅಲ್ಲಿಯೇ ಇದ್ದ ಅತ್ತೆಯನ್ನು ನೋಡಿ "ಫಂಕ್ಷನ್‌ಗಾಗಿ ಬಂದಿರುವವರಿಂದ ಎಲ್ಲ ರೂಮುಗಳೂ ತುಂಬಿ ಹೋಗಿವೆ. ಹೇಗೂ ನೀವು ನಾಳೆಯೇ ಹೊರಡುವವರಿದ್ದೀರಿ. ಈ ಒಂದು ರಾತ್ರಿಗೆ ಹಾಲ್‌ನಲ್ಲಿರುವ ಸೋಫಾದ ಮೇಲೆ ಮಲಗಿಬಿಡಿ ಅತ್ತೆ" ಎನ್ನುತ್ತಾ ಹೊರಟುಹೋದಳು.

ತಾಯಿಯ ಸಮಾನಳಾದ ಅತ್ತೆಯವರನ್ನು 'ಊಟ ಮಾಡಿದಿರಾ, ಇಲ್ಲವಾ' ಎಂದು ವಿಚಾರಿಸದೆ, ಅಡುಗೆಯವಳಾದ ತನ್ನ ಊಟದ ವಿಷಯವನ್ನು ವಿಚಾರಿಸಿದ ಗಿರಿಜಳ ಮನಸ್ತತ್ವವು ದೇವಮ್ಮನಿಗೆ ಅರ್ಥವಾಗಲಿಲ್ಲ. ದೊಡ್ಡ ಮನೆಯವರು–ಏನು ಮಾತನಾಡಿದರೆ ತನ್ನ ಕೆಲಸಕ್ಕೆ ಯಾವ ಮುಪ್ಪು

ಬರುವುದೋ ಅಂತ ಅಂದುಕೊಂಡರೂ ದೇವಮ್ಮನಿಗೆ ಸುಮ್ಮನಿರಲಾಗಲಿಲ್ಲ. "ಅಮ್ಮಾವ್ರೇ...ತಪ್ಪು ತಿಳ್ಕೋಬೇಡಿ...ಏನೇ ಆಗಲಿ...ನಿಮ್ಮ ಇಬ್ಬರು ಸೊಸೆಯರಿಗೂ ನಿಮ್ಮಲ್ಲಿರುವ ನಿಧಾನ ಗುಣವಿಲ್ಲ...'ಮನೆಗೆ ಮಾರಿ–ಪರರಿಗೆ ಉಪಕಾರಿ' ಎಂಬಂತೆ ವರ್ತಿಸುತ್ತಾರೆ" ಎಂದಳು.

ತುಳಸಮ್ಮ ನೊಂದುಕೊಂಡಳು.

"ದೇವಮ್ಮಾ...ನಮ್ಮ ಬಂಗಾರವು ಒಳ್ಳೆಯದಿರಬೇಕೇ ಹೊರತು ಯಾರೋ ಹೆತ್ತ ಮಕ್ಕಳನ್ನೇಕಮ್ಮಾ ಆಡಿಕೊಳ್ಳಬೇಕು?"

ತುಳಸಮ್ಮನ ಮಾತುಗಳನ್ನು ಕೇಳಿದ ದೇವಮ್ಮನಿಗೆ ಅಚ್ಚರಿಯಾಯಿತು.

"ಅದಲ್ಲ ಅಮ್ಮಾವ್ರೆ...ಅವರೆಲ್ಲರೂ ಇಷ್ಟು ಆಸ್ತಿ, ಅಂತಸ್ತುಗಳನ್ನು ಅನುಭವಿಸಲು ಮೂಲ ಕಾರಣ ನೀವೇ ಅಲ್ವೇ. ಮತ್ತೆ ನೀವು ಊಟ ಮಾಡಿರುವಿರೋ ಇಲ್ಲವೋ ತಿಳಿದುಕೊಳ್ಳದೆ ಅಡುಗೆಯವಳಾದ, ಸಂಬಳಕ್ಕಿರುವ ನನ್ನನ್ನು ವಿಚಾರಿಸುವುದು ಯಾವ ನ್ಯಾಯ ಹೇಳಿ? ನನಗೇಕೋ ಸರಿ ಕಾಣಲಿಲ್ಲ. ಇದಕ್ಕೆ ನೀವೇನಂತೀರಿ ಅಮ್ಮಾವ್ರೆ? ಬಾಧೆ ತಡೆಯಲಾಗದೆ ಕೇಳಿದಳು.

ತುಳಸಮ್ಮ ನಕ್ಕಳು.

"ದೇವಮ್ಮಾ! ನೀನು ಈ ಹೊತ್ತು ಊಟ ಮಾಡದಿದ್ದರೆ ನಾಳೆ ಬೇಗನೆ ಎದ್ದು ಅವರಿಗೆ ಬೇಕಾದವುಗಳನ್ನು ಮಾಡಿಕೊಡಲಾರೆ. ಅದಕ್ಕಾಗಿ ನಿನ್ನ ಊಟವು ಅವರಿಗೆ ಮುಖ್ಯವಾಗುತ್ತದೆ. ನಾನು ಕೇವಲ ವಿಗ್ರಹ ಪುಷ್ಟಿಯೇ ಹೊರತು ನನ್ನಿಂದ ಅವರ ಯಾವ ಕೆಲಸಗಳೂ ಆಗುವುದಿಲ್ಲ ಅಲ್ವೇ! ಅದರಲ್ಲೂ ನಾನು ನಾಳೆಯೇ ಹೊರಡುವವಳಿದ್ದೇನೆಂದು ಅವರಿಗೆ ಗೊತ್ತಿದೆ. ಅದಕ್ಕಾಗಿ ನನ್ನನ್ನು ವಿಚಾರಿಸಬೇಕಾದ ಅಗತ್ಯವೂ ಅವರಿಗಿಲ್ಲ. ಯಾರ ಸ್ವಾರ್ಥ ಅವರದ್ದು" ವಿವರಿಸಿದಳು ತುಳಸಮ್ಮ.

"ಆದ್ರೂ , ಅಮ್ಮಾವ್ರೆ...ಬೇಕಾದ ವ್ಯಕ್ತಿಯಾದ ನೀವು ಉಂಡಿರೋ ಬಿಟ್ಟಿರೋ ನೋಡದೆ..." ದೇವಮ್ಮ ಇನ್ನೂ ಏನನ್ನೋ ಹೇಳುತ್ತಿರುವಾಗ ತುಳಸಮ್ಮ...

"ನೋಡು ದೇವಮ್ಮಾ! ನಿನಗೆ ಅರ್ಥವಾಗುವ ಭಾಷೆಯಲ್ಲಿ ಹೇಳಬೇಕೆಂದರೆ– ನೀನು ಅಡುಗೆಗಳಲ್ಲಿ ಉಪಯೋಗಿಸುವ ಉಪ್ಪು ಇದ್ದ ಹಾಗೆ. ಎಲ್ಲ ಕಡೆ ಹಣ ಕೊಟ್ಟು ಪಡೆಯಬಹುದಾದ ವಸ್ತುವಿನಂತೆ. ಯಾವುದೇ ಅಡುಗೆಗೂ ನೀನು ಬೇಕಾದ ಕಾರಣ ಮನೆಯಲ್ಲಿ ನೀನಿರುವೆಯೋ ಇಲ್ಲವೋ ನೋಡಿಕೊಳ್ಳಬೇಕಾದ ಅಗತ್ಯ ಅವರಿಗಿದೆ. ಆದರೆ...ನಾನು...ಕರಿಬೇವಿನಂತಹವಳು. ಹೆಚ್ಚು ಹಣ ಕೊಟ್ಟು ಅದನ್ನು ಕೊಂಡು ಬಳಸದಿದ್ದರೂ

–8–

ದಿನ ಕಳೆದುಹೋಗುತ್ತೆ. ಆದರೆ ಹಬ್ಬಗಳಲ್ಲಿ, ಫಂಕ್ಷನ್‌ಗಳಲ್ಲಿ ಕರಿಬೇವಿನ ಪರಿಮಳವು ಇರಲೇಬೇಕು. ಎಲ್ಲರೂ ಕರಿಬೇವಿನ ಪರಿಮಳವನ್ನು ಆಸ್ವಾದಿಸುತ್ತಾರೆ. ಆದರೆ ಕೂಡಲೇ ಅದನ್ನು ಆರಿಸಿ ಪಕ್ಕಕ್ಕೆ ಇಟ್ಟುಬಿಡುತ್ತಾರೆ. ಹಾಗೆಯೇ ನಾನು ಕೂಡಾ. ನಾಲ್ಕು ಜನರ ನಡುವೆ ತಾಯಿಯನ್ನು ಗೌರವಿಸುತ್ತಿರುವವರಂತೆ ಎಲ್ಲರಿಗೂ ಗೊತ್ತಾಗಬೇಕು. ಅದರಿಂದ ಸಮಾಜದಲ್ಲಿ ಅವರ ಪ್ರತಿಷ್ಠೆ ಹೆಚ್ಚಾಗುತ್ತದೆ. ಆದರೆ...ದಿನವೂ ಒಂದಿಷ್ಟು ಕರಿಬೇವನ್ನು ಆಹಾರದಲ್ಲಿ ಬಳಸಿದರೆ ಉದರಕ್ಕೆ ಒಳ್ಳೆಯದೆಂದು ಅವರಿಗೆ ತಿಳಿಯದು...ಪಾಪ..." ಎಂದು ವಿವರಿಸಿದಳು.

ತುಳಸಮ್ಮನ ವಿಶ್ಲೇಷಣೆಯನ್ನು ಕೇಳಿದ ದೇವಮ್ಮನಿಗೆ ಮತ್ತಷ್ಟು ಅಚ್ಚರಿಯಾಯಿತು.

ಕುಡಿಯುತ್ತಿದ್ದ ನೀರಿನ ಲೋಟವನ್ನು ಡೈನಿಂಗ್ ಟೇಬಲ್ಲಿನ ಮೇಲಿಟ್ಟು ಎದ್ದು ತುಳಸಮ್ಮ ಹೊರಡುತ್ತಿರುವಾಗ "ಹಾಗಾದರೆ, ಈ ಎಲ್ಲ ವಿಷಯಗಳನ್ನು ತಿಳಿದಿರುವ ನೀವು ಅವರು ಕರೆದ ಕೂಡಲೇ ಊರಿಗೆ ಏಕೆ ಹೊರಟು ಬಂದಿರಿ ಅಮ್ಮಾವ್ರೆ?" ಎಂದು ಕೇಳಿದಳು ದೇವಮ್ಮ.

ಹಿಂದಕ್ಕೆ ತಿರುಗಿ ತುಳಸಮ್ಮ ಹೇಳಿದಳು –

"ಅವರು ನನ್ನ ಮಕ್ಕಳಮ್ಮಾ !"

**ಮೂಲ: ತೆಲುಗು: ಜಿ.ಎಸ್.ಲಕ್ಷ್ಮಿ** **ಅನುವಾದ: ತುಳಸಾ ಕಲುಮಂಗಿ**

ಕವನ

# ಮನದ ರಾಗ

ಬೆಳ್ಳಿ ಚುಕ್ಕಿಯ ಸಾಲಿನಂತೆ
ಆಕಾಶದಲ್ಲಿ ಹಾರಾಡುವ ಹಕ್ಕಿಯೇ
ನಿನ್ನನ್ನು ನೋಡಿ
ಯಾವುದೋ ರಾಗ ಕಾಡುತ್ತಿತ್ತು
ನನ್ನ ರಾಗದಲ್ಲಿ ಹಾಡು ಹಾಡೆಂದು.
ಆ ರಾಗ ಯಾವುದು ನಾ ಕಾಣೆ
ಓ ಹಕ್ಕಿಯೇ ನೀನಾದರೂ ಹೇಳು
ಆ ರಾಗ ಯಾವುದೆಂದು?

ಜುಳು ಜುಳು ಹರಿವ
ನದಿಯ ನೋಡಿಕಲರವ ಕೇಳಿ ಮನ
ಕುಣಿದು ಅದರಲ್ಲೇ ಲೀನವಾಗಿತ್ತು.
ಆ ಲೀನದಲ್ಲಿ ಒಂದು ಮಂಜುಳ ನಾದವಿತ್ತು
ಆ ಮಂಜುಳನಾದ ಯಾವುದು ನಾ ಕಾಣೆ
ಬಳಕುತ ಕುಲುಕುತ ವಯ್ಯಾರದಿ ಹರಿವ
ಓ ನದಿಯೇ ನೀನಾದರೂ ಹೇಳು
ಆ ಮಂಜುಳ ನಾದ ಯಾವುದೆಂದು?

ಗಿರಿ ಬನ ವನಗಳ ಸೊಬಗು ಕಂಡು
ಏನೆಂದು ಬಣ್ಣಿಸಲಿ?
ಏನೆಂದು ನೆನೆಯಲಿ?
ಉಕ್ಕಿ ಬಂದ ಭಾವನೆಯಲಿ
ಕನಸಿನ ಗೋಪುರ ಮುಟ್ಟಿದಾಗ
ವಿಶಾಲವಾದ ಈ ಜಗದಲ್ಲಿ
ನನ್ನ ಈ ಪುಟ್ಟ ಹೃದಯ ಹೆಮ್ಮೆಗೊಂಡಿತ್ತು.

**ಜಯಶ್ರೀ ಬಸವರಾಜ ಬಿ.ಕೆ.**


**Statement of Ownership and other Particulars about Delhi Karnataka Sangha's ABHIMATA FORM-IV (See Rule 8)**

| | | |
|---|---|---|
| Place of Publication | : | Delhi Karnataka Sangha New Delhi |
| Periodicity of Pub | : | Monthly |
| Printers Name | : | M/s Saujanya Printing Press C-97, Okhla Industrial Area, Phase-I, New Delhi-110020 |
| Publishers Name | : | C.M. Nagaraja |
| Nationality | : | Indian |
| Address | : | Delhi Karnataka Sangh Rao Tularam Marg, Sector-12 R.K. Puram, New Delhi-110022 |
| Editor's Name | : | Smt. Usha Bharatadri |
| Nationality | : | Indian |
| Address | : | As Above |
| Name & Address of Individual who own the News Paper | : | Delhi Karnataka Sangha Rao Tularam Marg, Sector-12 R.K. Puram New Delhi- 110022 |

I, C.M. Nagaraja, hereby declare that the particulars given above are true to the best of my knowledge and belief.

Sd\ -
Publisher

# ಪ್ರಾಯ ಹಾಗೂ ಅಭಿಪ್ರಾಯಗಳ ವಿಭಿನ್ನ ಸಂಯೋಗ-ಒಂದು ಕಿರು ಪ್ರಯೋಗ

-N.A. MAdhava, Marine Technologies

ಪ್ರಾಯದೊಂದಿಗೆ ಮನುಷ್ಯರ ಅನುಭವ ಹಾಗೂ ಆಲೋಚನಾ ಶಕ್ತಿ ಹೆಚ್ಚುತ್ತದೆ

ಅಭಿಪ್ರಾಯಗಳು ಬರುವುದು ಅನುಭವದಿಂದ. ಅನುಭವ ಬರುವುದು ಸನ್ನಿವೇಶಗಳನ್ನು ಎದುರಿಸಿದಾಗ; ಎಂದರೆ ಕಾಲಕಳೆದಂತೆ-ಪ್ರಾಯ ಹೆಚ್ಚಿದಂತೆ, ಇದರ ಹಿನ್ನೆಲೆಯಿಂದ ಪ್ರಾಯ ಮತ್ತು ಅಭಿಪ್ರಾಯಗಳನ್ನು ಜೋಡಿಸಿದ ಈ ಕಿರು ಸಂಗ್ರಹಣೆಯನ್ನು ಇಲ್ಲಿ ಮಂಡಿಸಲಾಗಿದೆ.

- ಪ್ರಾಯ ನೋಡಿ ಅನುಭವವನ್ನು ಅಳೆಯುವವರು ! ಅನುಭವವನ್ನು ತೂಗಿ ಅಭಿಪ್ರಾಯವನ್ನು ವ್ಯಕ್ತಪಡಿಸುವವರು !!
- ಪ್ರಾಯಕ್ಕೆ ತಕ್ಕಂತೆ ಅಭಿಪ್ರಾಯಗಳು ಬದಲಾದರೂ, ಅಭಿಪ್ರಾಯಕ್ಕೆ ತಕ್ಕಂತೆ ಪ್ರಾಯ ಬದಲಾಗದು !
- ಜನರ ಅಭಿಪ್ರಾಯಗಳಿಂದ ಅವರ ಪ್ರಾಯ ಮತ್ತು ಅನುಭವಗಳನ್ನು ಅಳೆಯಬಹುದು !
- ತಾಳಕ್ಕೆ ತಕ್ಕಂತೆ ಮೇಳ-ಮೇಳಕ್ಕೆ ತಕ್ಕಂತೆ ತಾಳ ! ಪ್ರಾಯಕ್ಕೆ ತಕ್ಕಂತೆ ಅಭಿಪ್ರಾಯ !
- ಮಹಿಳೆಯರ ಪ್ರಾಯ ಕೇಳಿದಾಗ ಅವರು ನೀಡುವ ಭಿನ್ನ-ಭಿನ್ನವಾದ ಪ್ರಾಯಗಳನ್ನು ಕೇಳಿ ನಿಮ್ಮ ಅಭಿಪ್ರಾಯಕೂಡ ವಿಭಿನ್ನವಾಗಿ ಸಂಕಟಕೊಳಗಾಗುವಿರಿ ಎಂಬುದು ನಮ್ಮೆಲ್ಲರ ಅಭಿಪ್ರಾಯ!
- ಸಾಮಾನ್ಯವಾಗಿ ನಮ್ಮ ಅಭಿಪ್ರಾಯದ ಪ್ರಕಾರ ಪ್ರಾಯಶಃ ತರುಣಿಯರು ಹೇಳುವ ಅವರ ಪ್ರಾಯ ನಿಜವಾದ ಪ್ರಾಯದ ಕೆಲವು ಅಂಶ ಕೆಳಗಿರುತ್ತದೆ. ಆದರೆ ವಯಸ್ಕರು ಹೇಳುವ ಪ್ರಾಯ ಅವರ ನಿಜವಾದ ಪ್ರಾಯದ ಮೇಲೆ ಕೆಲವು ಅಂಶ ಹೆಚ್ಚಾಗಿರುತ್ತದೆ. ಪ್ರಾಯಶಃ ಇದರಿಂದ ಅವರಿಗೆ ಪ್ರಯೋಜನವಿರಬಹುದು!
- ಹೆಚ್ಚು ಅಭಿಮಾನದಿಂದ ಜನರು ಅಭಿಪ್ರಾಯ ಹೇಳುವರೆ ಅವರ ಅಭಿಲಾಷೆ ಹಾಗೂ ಪ್ರಾಯದ ಕಡೆಗೆ ಗಮನವಿರಲಿ!
- ಬಹುಮತದ ಅಭಿಪ್ರಾಯವನ್ನು ಬಹುಮತಗಳಿಂದ ಅಳೆಯಬಹುದು!
- ಕಳೆದ ತಮ್ಮ ಪ್ರಾಯದ ಅನುಭವದಿಂದ ಕವಿದ ಮೋಡವನ್ನು ನೋಡಿ ಮಳೆ ಬರುವ ಅಭಿಪ್ರಾಯವನ್ನು ವ್ಯಕ್ತಪಡಿಸುವರು!
- ಬಣ್ಣ ನೋಡಿ ಜನರ ಅಭಿಪ್ರಾಯ ಭಿನ್ನವಾಗಬಹುದು; ಆದರೆ ಆ ಬಣ್ಣಕ್ಕೆ ಭಿನ್ನಾಭಿಪ್ರಾಯ ಬಾರದು.
- ಅಭಿಪ್ರಾಯ ಶೂನ್ಯವಾದರೆ ಶೂನ್ಯ ಪ್ರಾಯದಂತೆ ಎಲ್ಲವೂ ಶೂನ್ಯವೇ !
- ಗತ ಕಾಲದ ಕಲೆಗಳನ್ನು ನೋಡಿ ಭಿನ್ನ ಭಿನ್ನವಾದ ಅಭಿಪ್ರಾಯಗಳು ಬರಬಹುದು, ಆದರೆ ಕಲೆಯ ಪ್ರಾಯ ಮಾತ್ರ ಭಿನ್ನವಾಗದು!
- ಪ್ರಾಣಕ್ಕೆ ಧಕ್ಕೆ ಬಂದಾಗ ಪ್ರಾಯವನ್ನು ಮರೆಯುವಿರಿ !
- ಅಭಿಪ್ರಾಯಕ್ಕೆ ಧಕ್ಕೆ ಬಂದಾಗ ಪ್ರಾಯವನ್ನು ಎತ್ತಿ ಮೆರೆಯುವಿರಿ !!
- ಭಿನ್ನಾಭಿಪ್ರಾಯ ಬಂದಾಗ ಭಿನ್ನ- ಭಿನ್ನ ಪ್ರಾಯ ಎತ್ತಿ ವಿಭಿನ್ನವಾಗಿ ವರ್ತಿಸುವಿರಿ !!! ಆದರೆ ಪ್ರಾಯಕ್ಕೆ ಧಕ್ಕೆ ಬಂದರೆ ಮುಂದೆ ಏನಾಗಬಹುದು ?
- ಪ್ರಾಯವನ್ನು ಅಡಗಿಸಬೇಕಾದಲ್ಲಿ ನಾಟಕ ಮಾಡುವ ಅಭಿಪ್ರಾಯ ಮಾಡುವಿರಿ!
- ಕೆಲವರು ಪ್ರಾಣಕ್ಕೆ ಭಯಪಟ್ಟರೆ ಕೆಲವರು ಪ್ರಾಯಕ್ಕೆ ಭಯಪಡುವರು-ಏಕೆಂದರೆ ಅವರ ಅಭಿಪ್ರಾಯದಲ್ಲಿ ಪ್ರಾಣ ಉಳಿದರೆ ಪ್ರಾಯ ಉಳಿಯಬಹುದೆಂದು:ಪ್ರಾಣ ಉಳಿಸಿ- ಪ್ರಾಯ ಬೆಳೆಸು !
- ನಿನಗೆ ಪ್ರಾಯದ ಸಂದೇಹ ಬಂದರೆ ಸನ್ಯಾಸಿಯಾಗುವ ಅಭಿಪ್ರಾಯ ಪಡು!
- ಎಲ್ಲಾ ಪ್ರಾಯದಲ್ಲೂ ಅಭಿಲಾಷೆ ಮತ್ತು ಅಭಿಪ್ರಾಯಗಳನ್ನು ಹಿಡಿತದಲ್ಲಿಡು !
- ಅಭಿಪ್ರಾಯ ಶೂನ್ಯವಾದರೆ ನಿನ್ನಲ್ಲಿ ಉಳಿಯುವುದು ಸೊನ್ನೆಯೇ ! ಆಗ ನೀನು ನಿನ್ನ ಪ್ರಾಯವನ್ನು ಗಮನಿಸಿ ಯೋಜನೆ ಹಾಕುತ್ತಾ ಯೋಗಿಯಾಗು !!
- ಎಲ್ಲಾ ಪ್ರಾಯದಲ್ಲೂ ಒಳ್ಳೆಯ ಅಬಿಪ್ರಾಯ ಇಟ್ಟುಕೋ !
- ಪ್ರಾಯ ಹೆಚ್ಚಿದಂತೆ ಪ್ರಯಾಸ ಹೆಚ್ಚಾಗುತ್ತದೆ, ಆದರೆ ಪ್ರವಾಸ ಮಾಡುವರೆ ಪ್ರಾಯವನ್ನು ಮರೆತು ಯುವ ಅಭಿಪ್ರಾಯದಲ್ಲಿರುವಿರಿ!
- ರಾಜಕೀಯಕ್ಕೆ ಯಾವ ಪ್ರಾಯವೂ ಇಲ್ಲ! ಆದರೆ ರಾಜಕಾರಣಿಗಳಿಗೆ ಪ್ರಾಯ ಇದೆ! ಈ ಅಭಿಪ್ರಾಯ ಎಲ್ಲರಲ್ಲೂ ಇರಲಿ!!
- ಶಾಲೆಗೆ ಸೇರಲು ಪ್ರಾಯ ಇದೆ, ಆದರೆ ಶಾಲೆ ಬಿಡಲು ಯಾವ ಪ್ರಾಯವೂ ಇಲ್ಲ-ಇದು ಅನುಭವದ ಅಭಿಪ್ರಾಯ!!
- ಶರಣರು ಅನುಭವ ಮಂಟಪಕ್ಕೆ ಸೇರುವ ಮುನ್ನ ಪ್ರಾಯ-ಭಿನ್ನಾಭಿಪ್ರಾಯಗಳಲ್ಲಿರ ಬಹುದು! ಆದರೆ ಅನುಭವ ಮಂಟಪಕ್ಕೆ ಶರಣಾದ ನಂತರ ಯಾವ ಪ್ರಾಯ! -ಭಿನ್ನಾಭಿಪ್ರಾಯಗಳು ಇರುವಂತಿಲ್ಲ!!
- ನೌಕರಿ ಮಾಡಲು ಪ್ರಾಯ ಇದೆ! ಆದರೆ ನಾಟಕ ಮಾಡಲು ಯಾವ ಪ್ರಾಯವೂ ಇಲ್ಲ!! ಇದು ಎಲ್ಲಾ ಪ್ರಾಯದವರ ಅಭಿಪ್ರಾಯ!!!
- ಜ್ಞಾನಿ-ವಿಜ್ಞಾನಿಗಳಿಗೆ ಯಾವ ಪ್ರಾಯವೂ ಇಲ್ಲ; ಏಕೆಂದರೆ ಅವರಲ್ಲಿ ಒಳ್ಳೆಯ ಅಭಿಪ್ರಾಯ ಇದೆ! ಆದರೆ ದಡ್ಡ-ಸೋಮಾರಿಗಳ ಮೇಲೆ ಏನೂ ಅಭಿಮಾನ-ಅಭಿಪ್ರಾಯಗಳಿರುವುದಿಲ್ಲ!!
- ರೈಲು ಪ್ರಯಾಣ ಮಾಡುವರೆ ರೈಲು ಗಾಡಿಯ ಪ್ರಾಯದ ಬಗ್ಗೆ ಚಿಂತೆ ಇಲ್ಲ! ಆದರೆ ಸಮುದ್ರ ಪ್ರಯಾಣ ಮಾಡುವರೆ ಹಡಗಿನ ಪ್ರಾಯದ ಬಗ್ಗೆ ಚಿಂತೆ ಇರಲಿ, ಏಕೆಂದರೆ ಹಡಗು ಮುಳುಗಿದರೆ ನೀನೂ ಮುಳುಗುವೆ!! ಅದರಂತೆಯೇ ವಿಮಾನ ಪ್ರಯಾಣ ಮಾಡುವರೆ ವಿಮಾನದ ಪ್ರಾಯದ ಬಗ್ಗೆ ಚಿಂತೆ ಇರಲಿ; ಏಕೆಂದರೆ ವಿಮಾನ ಬಿದ್ದರೆ ನೀನೂ ಏಳಲಾರೆ; ಇದು ಅನುಭವದ ಅಭಿಪ್ರಾಯ!!!
- ನಿಮ್ಮ ಮುಪ್ಪು ಪ್ರಾಯದ ಚಿಂತೆ ನಿಮ್ಮನ್ನು ಯಾವ ಗತಿಗೂ ತರಬಹುದು; ಯುವ ಪ್ರಾಯದ ಚಿಂತೆ ಮುಪ್ಪಿನಲ್ಲಿ ಮಾಡುವ ಅಭಿಪ್ರಾಯ ಚಿಂತಾಜನಕವೇ!
- ಸೂರ್ಯ, ಚಂದ್ರ, ನಕ್ಷತ್ರಗಳ ಪ್ರಾಯದ ಚಿಂತೆ ಬಿಡು ! ಅದರಲ್ಲಿ ಒಳ್ಳೆಯ ಅಭಿಪ್ರಾಯ ಇಡು !!
- ಮುಪ್ಪು ಪ್ರಾಯದಲ್ಲಿ ಮದುವೆಯಾಗುವ ನಿನ್ನ ದುರಾಭಿಪ್ರಾಯ ಬಿಟ್ಟರೆ ಒಳ್ಳೆಯದು, ಇಲ್ಲದಿದ್ದರೆ ನಿನ್ನ ಪ್ರಾಯ ದುರಂತದಲ್ಲಿ ಅಂತ್ಯವಾಗಬಹುದು!
- ಮುಪ್ಪು ಪ್ರಾಯದಲ್ಲಿ ಶುಭಾಭಿಪ್ರಾಯದಿಂದ ಜನಸೇವೆ-ಜನಾರ್ಧನರ ಸೇವೆಯಲ್ಲಿ ತೊಡಗಿಕೊಂಡರ ನಿನ್ನ ಅಂತ್ಯ ಸುಗಮವಾಗಬಹುದು ! ಒಳ್ಳೆಯದಾದಲ್ಲಿ ಹೆಚ್ಚು ಪ್ರಯೋಜನಕಾರಿಯಾಗುವುದು !!
- ಸೀಮಿತವಾದ ಅಭಿಲಾಷೆ ಇಟ್ಟಲ್ಲಿ, ನಿಶ್ಚಿತ ಅಭಿಪ್ರಾಯದಿಂದ ನಿನ್ನ ಕೆಲಸ ಸುಗಮವಾಗಬಹುದು!
- ಯಾವ ಪ್ರಾಯದಲ್ಲಿ ನೀನು ಹೀನ ಜನರ ಸಂಘದಲ್ಲಿ ಒಡನಾಡುವಿಯೋ ಆ ಸಮಯದಲ್ಲಿ ನೀನು ಹೀನಾಭಿಪ್ರಾಯ ಭ್ರಷ್ಟನಾಗುವೆ, ದುಷ್ಟ ಅಭಿಪ್ರಾಯಸ್ತನಾಗುವೆ! ಹಾಗೆಯೇ ಯಾವ ಪ್ರಾಯದಲ್ಲಿ ಸಜ್ಜನರ ಒಡನಾಟದಲ್ಲಿರುವಿಯೋ ಆಗ ನೀನು ಸುಭಾಭಿಪ್ರಾಯಗ್ರಸ್ಥನಾಗುವೆ !!
- ಪ್ರಾಯವನ್ನು ಬದಿಗಿಟ್ಟು ಕೇವಲ ಅಭಿಪ್ರಾಯದ ಚಿಂತನೆ ಮಾಡುತ್ತಿದ್ದರೆ ನೀನು ಭಿನ್ನಾಭಿಪ್ರಾಯಗಳ ಸಾಗರವಾಗಿ ಪ್ರಾಯ ಶೂನ್ಯನಾಗಬಹುದು; ಅದೇ ರೀತಿ ಅಭಿಪ್ರಾಯವನ್ನು ಬದಿಗಿಟ್ಟು ಕೇವಲ ಪ್ರಾಯದ ಚಿಂತನೆಯಲ್ಲಿದ್ದರೆ ಅಭಿಪ್ರಾಯ ಶೂನ್ಯನಾಗಿ ಪ್ರಾಣ ಸ್ಥಗಿತವಾಗಬಹುದು. ಆದ್ದರಿಂದ ಪ್ರಾಯ ಮತ್ತು ಅಭಿಪ್ರಾಯಗಳ ಸಮತೋಲನದಲ್ಲಿರಬೇಕು! ಆಗ ಪ್ರಾಯೋಕ್ತ ಸಮಾನಾಂತರ ಅಭಿಪ್ರಾಯಗಳನ್ನು ಹೊಂದಿದವನಾಗುವೆ-ಅಭಿಪ್ರಾಯ ಶ್ರೇಷನಾಗುವೆ; ಉತ್ತಮ ಚಿಂತಕ ಹಾಗೂ ಜ್ಞಾನಿಯಾಗುವೆ!!
- ಬೇರೆಯವರು ನಿಮ್ಮ ಅಭಿಪ್ರಾಯ ಕೇಳುವರೆ ನಿಮ್ಮ ಗಮನ ಅವರ ಪ್ರಾಯದ ಮೇಲಿರಲಿ !
- ದಾಖಲಾತಿಯ ಪ್ರಾಯಕ್ಕೂ, ಜನನದ ನಿಜವಾದ ಪ್ರಾಯಕ್ಕೂ ವ್ಯತ್ಯಾಸವಿದ್ದರೆ, ಭಿನ್ನಾಭಿಪ್ರಾಯ ದಾಖಲಾಗಬಹುದು! ಕೆಲವೊಮ್ಮೆ ದಾಖಲಾತಿಯ ಪ್ರಾಯದ ಪ್ರಕಾರ ಸತ್ತವರು ಬದುಕಿರುತ್ತಾರೆ!! ಬದುಕಿರುವವರು ಸತ್ತಿರುತ್ತಾರೆ; ಇಂತಹವರ ಪ್ರಾಯಕ್ಕೆ ನಿಮ್ಮ ಅಭಿಪ್ರಾಯ ಏನು?
- ಮನುಷ್ಯನ ಪ್ರಾಯಕ್ಕೂ ಪ್ರಾಣಿಯ ಪ್ರಾಯಕ್ಕೂ ಏನಾದರೂ ಸಂಬಂಧ ಇದೆಯೇ? ಹೌದು, ಸಂಬಂಧ ಇದೆ; ಮನುಷ್ಯ ಒಂದು ಮಹಾಪ್ರಾಣಿ! ತನ್ನ ಪ್ರಾಣವನ್ನು ರಕ್ಷಿಸಲು ಮಹಾಪ್ರಯತ್ನ ಮಾಡುತ್ತಾ ತನ್ನ ಪ್ರಾಯವನ್ನು ವೃದ್ಧಿಸುತ್ತಾನೆಯಾದರೂ ಪ್ರಾಣಿಗಳ ಪ್ರಾಣ ತೆಗೆಯುವುದರಲ್ಲಿ ತೊಡಗಿ ಅವರ ಪ್ರಾಯವನ್ನು ಕುಂಟಿತಗೊಳಿಸುತ್ತಾನೆ! ಇದು ಎಲ್ಲರ ಅಭಿಪ್ರಾಯ !!
- ಕ್ರಿಮಿ, ಕೀಟ, ಪತಂಗಗಳ ಪ್ರಾಯ-ಕೆಲವು ನಿಮಿಷ-ಗಂಟೆಗಳು, ಮನುಷ್ಯ-ಪ್ರಾಣಿಗಳ ಪ್ರಾಯ ಕೆಲವು ದಶಕಗಳು; ಚಾರಿತ್ರಿಕ ಘಟನೆಗಳ ಪ್ರಾಯ ಕೆಲವು ಶತಮಾನಗಳು; ಭೂಮಂಡಲ-ಸೌರವ್ಯೂಹಗಳ ಪ್ರಾಯ ಕೋಟ್ಯಾಂತರ ವರ್ಷಗಳು; ನಕ್ಷತ್ರಗಳ ಅಂತರ ಹಲವಾರು ಬೆಳಕು ವರ್ಷಗಳು (Light Years); ಹಾಗಾದರೆ ಈ ಜೀವ-ಜಂತುಗಳ ಪ್ರಾಯಕ್ಕೂ; ಈ ಜೀವನದ ಪ್ರಾಯ (ಸಮಯದ ಅಳತೆ) ಹಾಗೂ ಅಂತರದ ಪ್ರಾಯ (ದೂರದ ಅಳತೆ) ಗಳಿಗೆ ನಿಮ್ಮ-ನಮ್ಮ ಅಭಿಪ್ರಾಯಗಳಾದರೂ ಏನು? ಸಮಯವನ್ನು ಹೋಲುತ್ತದೆಯೋ ಇಲ್ಲವೆ ದೂರವನ್ನು ಹೋಲುತ್ತದೆಯೋ?

ಮಾತಾಪಿತ್ರರಿಂದ ಮಾನವೀಯತೆಯ ಹಾಗೂ ಜೀವನದ ಮೌಲ್ಯಗಳನ್ನೂ;
ಶಿಕ್ಷಕರಿಂದ ಗುಣಮಟ್ಟದ ಶಿಕ್ಷಣವನ್ನೂ;
ಅನುಭವಿಗಳಿಂದ ಸೂಕ್ತ ಅನುಭವಗಳನ್ನೂ;
ಪ್ರಾಯದವರಿಂದ ಪ್ರಾಪ್ತ ಅಭಿಪ್ರಾಯಗಳನ್ನೂ;
ತನ್ನ ಪ್ರಾಯದಿಂದ ಪ್ರಾಪ್ತವಾದ ಅನುಭವ ಮತ್ತು ಅಭಿಪ್ರಾಯಗಳನ್ನೂ;
ಒಟ್ಟುಗೂಡಿಸಿ ದೃಢ ಪ್ರಯತ್ನದಿಂದ ಪೂರ್ಣ ಪ್ರಯೋಜನ ಪಡೆದು ಪ್ರಗತಿಪಥದಲ್ಲಿ ಮುಂದೆ ಸಾಗುವವರೆ;
ಪ್ರಾಯಶಃ ಯಾರಿಂದಲೂ ಯಾವ ಪ್ರಾಯದಲ್ಲೂ ಭಿನ್ನಾಭಿಪ್ರಾಯಬಾರದೆ; ಸರ್ವೋತ್ತಮ ಅಭಿಪ್ರಾಯ ಸಂಪನ್ನನಾಗುವೆ!

ಆಟೋಟ

# ಜೆಎಸ್‌ಎಸ್ ತಂಡಕ್ಕೆ ಅಂಬಿಕೇಶ್ ಮೆಮೋರಿಯಲ್ ಕ್ರಿಕೆಟ್ ಪ್ರಶಸ್ತಿ



ವಿಜೇತ ಜೆಎಸ್‌ಎಸ್ ತಂಡ

ಕ್ರೀಡಾ ಉಪಸಮಿತಿಯ ಅಧ್ಯಕ್ಷರಾದ ಹರಿಶ್ಚಂದ್ರ ಬಂಟ್ವಾಳ್ ಅವರ ನೇತೃತ್ವದಲ್ಲಿ 'ಅಂಬಿಕೇಶ್ ಮೆಮೋರಿಯಲ್' ಕ್ರಿಕೆಟ್ ಪಂದ್ಯಾವಳಿಯನ್ನು ಫೆಬ್ರವರಿ 13, 20 ಮತ್ತು 27ರಂದು ಆಯೋಜಿಸಲಾಯಿತು. ಫೆಬ್ರವರಿ 13, 2011ರಂದು ಸಿವಿಲ್ ಸರ್ವಿಸಸ್ ಅಥೋರಿಟಿ ಗ್ರೌಂಡ್, ವಿನಯ್ ಮಾರ್ಗದಲ್ಲಿ ಉದ್ಘಾಟನೆಗೊಂಡಿತು. ಸಂಘದ ಅಧ್ಯಕ್ಷರಾದ ಡಾ.ವೆಂಕಟಾಚಲ ಹೆಗಡೆ ಅವರು ಪಂದ್ಯಾವಳಿಗೆ ಚಾಲನೆ ನೀಡಿದರು.

ಜನಕಪುರಿ ಕನ್ನಡ ಕೂಟ ಮತ್ತು ದೆಹಲಿ ಕನ್ನಡ ಪೋಲಿಸ್ ಕಲ್ಯಾಣ ಸಮಿತಿಯ ಜೊತೆಗೆ ನಡೆದ ಮೊದಲ ಪಂದ್ಯದಲ್ಲಿ ದೆಹಲಿ ಕನ್ನಡ ಪೋಲಿಸ್ ಸಮಿತಿಯು ಗೆಲುವನ್ನು ಸಾಧಿಸಿ ಜಯರಾಮ್ ಅವರು ಪಂದ್ಯ ಶ್ರೇಷ್ಠರಾದರು. ಜೆ.ಎಸ್.ಎಸ್. ಆರ್.ಡಬ್ಲ್ಯು.ಎ. ಕ್ರಿಕೆಟ್ ಕ್ಲಬ್ ಮತ್ತು ದೆಹಲಿ ಒಕ್ಕಲಿಗ ಗೌಡ ಸಮಾಜದ ಜೊತೆಗೆ ನಡೆದ ಎರಡನೇ ಪಂದ್ಯದಲ್ಲಿ ಜೆ.ಎಸ್.ಎಸ್. ಆರ್.ಡಬ್ಲ್ಯು.ಎ. ಕ್ರಿಕೆಟ್ ಕ್ಲಬ್ ತಂಡವು ಗೆಲುವನ್ನು ಸಾಧಿಸಿ ಗುರುಶಾಂತ ಪ್ರಸಾದ್ ಅವರು ಪಂದ್ಯ ಶ್ರೇಷ್ಠರಾದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಮತ್ತು ಕರ್ನಾಟಕ ಇಲೆವೆನ್ ಕ್ರಿಕೆಟ್ ತಂಡ, ಗುರ್‌ಗಾಂವ್ ಜೊತೆಗೆ ನಡೆದ ಮೂರನೇ ಪಂದ್ಯದಲ್ಲಿ ಕರ್ನಾಟಕ ಇಲೆವೆನ್ ಕ್ರಿಕೆಟ್ ತಂಡ, ಗುರ್‌ಗಾಂವ್ ಜಯವನ್ನು ಸಾಧಿಸಿ, ಈಶ್ವರಲಿಂಗ ಅರೇರಾ ಅವರು ಪಂದ್ಯ ಶ್ರೇಷ್ಠರಾದರು.

20.02.2011ರಂದು ನಡೆದ ಗಣೇಶ ಮಿತ್ರ ಮಂಡಳಿ ಮತ್ತು ಕಂಠೀರವ ಸ್ಪೋರ್ಟ್ಸ್ ತಂಡದ ಜೊತೆಗೆ ನಡೆದ ಪಂದ್ಯದಲ್ಲಿ ಗಣೇಶ ಮಿತ್ರ ಮಂಡಳಿ ತಂಡವು ಜಯವನ್ನು ಸಾಧಿಸಿ ಅಭಯ್ ಅವರು ಪಂದ್ಯ ಶ್ರೇಷ್ಠರಾದರು. ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್ ತಂಡ ಮತ್ತು ಫರಿದಾಬಾದ್ ಕನ್ನಡ ಸಂಘದ ಜೊತೆಗೆ ನಡೆದ ಪಂದ್ಯದಲ್ಲಿ ಫರಿದಾಬಾದ್ ಕನ್ನಡ ಸಂಘವು ಜಯವನ್ನು ಸಾಧಿಸಿ ಸಾಗರ್ ಶೆಟ್ಟಿ ಅವರು ಪಂದ್ಯ ಶ್ರೇಷ್ಠರಾದರು. ಸೌತ್ ಕೆನರಾ ಕ್ಲಬ್ ಕ್ರಿಕೆಟ್ ಕ್ಲಬ್ ತಂಡ ಮತ್ತು ಬಂಟ್ಸ್ ಕಲ್ಚರಲ್ ಅಸೋಸಿಯೇಶನ್ ತಂಡದ ಜೊತೆಗೆ ನಡೆದ ಪಂದ್ಯದಲ್ಲಿ ಸೌತ್ ಕೆನರಾ ಕ್ಲಬ್ ತಂಡವು ಜಯವನ್ನು ಸಾಧಿಸಿ ಮೆಲ್ವಿನ್ ಅವರು ಪಂದ್ಯ ಶ್ರೇಷ್ಠರಾದರು.

27.02.2011 ರ ದೆಹಲಿ ಪೋಲಿಸ್ ಕಲ್ಯಾಣ ಸಮಿತಿ ತಂಡ ಮತ್ತು ಕರ್ನಾಟಕ ಇಲೆವೆನ್ ಕ್ರಿಕೆಟ್ ತಂಡ, ಗುರ್‌ಗಾಂವ್ ಇದರ ಜೊತೆಗೆ ಕರ್ನಾಟಕ ಇಲೆವೆನ್ ಕ್ರಿಕೆಟ್ ತಂಡ, ಗುರ್‌ಗಾಂವ್ ತಂಡವು ಜಯವನ್ನು ಸಾಧಿಸಿ ತಿಲಕೇಶ್ ಅವರು ಪಂದ್ಯ ಶ್ರೇಷ್ಠರಾದರು. ಕರ್ನಾಟಕ ಇಲೆವೆನ್ ಕ್ರಿಕೆಟ್ ತಂಡ, ಗುರ್‌ಗಾಂವ್ ಮತ್ತು ಕರ್ನಾಟಕ ಭವನ ಕ್ರಿಕೆಟ್ ಟೀಮ್ ಅಸೋಸಿಯೇಶನ್ ಜೊತೆಗೆ ನಡೆದ ಮೊದಲನೇ ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕ ಇಲೆವೆನ್ ಕ್ರಿಕೆಟ್ ತಂಡ, ಗುರ್‌ಗಾಂವ್ ತಂಡವು ಜಯವನ್ನು ಸಾಧಿಸಿ ಫೈನಲ್ ಹಂತವನ್ನು ಮುಟ್ಟಿತು, ಸಂತೋಷ್ ಅವರು ಪಂದ್ಯಶ್ರೇಷ್ಠರಾದರು. ಜೆ.ಎಸ್.ಎಸ್. ಆರ್. ಡಬ್ಲ್ಯು.ಎ. ಕ್ರಿಕೆಟ್ ಕ್ಲಬ್ ಮತ್ತು ಗಣೇಶ ಮಿತ್ರ ಮಂಡಳಿ ಜೊತೆಗೆ ನಡೆದ ಪಂದ್ಯದಲ್ಲಿ ಜೆ.ಎಸ್.ಎಸ್. ಆರ್.ಡಬ್ಲ್ಯು.ಎ. ಕ್ರಿಕೆಟ್ ಕ್ಲಬ್ ತಂಡವು ಜಯವನ್ನು ಸಾಧಿಸಿ ಮೋಹನ್ ಕುಮಾರ್ ಅವರು ಪಂದ್ಯ ಶ್ರೇಷ್ಠರಾದರು. ಸೌತ್ ಕೆನರಾ ಕ್ರಿಕೆಟ್ ಕ್ಲಬ್ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್ ಜೊತೆಗೆ ನಡೆದ ಪಂದ್ಯದಲ್ಲಿ ಬೆಳ್ಳಿಯಪ್ಪಾಸ್ ಗ್ರೂಪ್ ಅವರು ಜಯವನ್ನು ಸಾಧಿಸಿ, ಗಣೇಶ್ ಅವರು ಪಂದ್ಯ ಶ್ರೇಷ್ಠರಾದರು. ಪ್ರತಿ ಪಂದ್ಯದ ಪಂದ್ಯ ಶ್ರೇಷ್ಠರಿಗೆ ರೂ. 501/–ರ ನಗದನ್ನು ನೀಡಿ ಗೌರವಿಸಲಾಯಿತು.

06.03.2011ರಂದು ಬೆಳ್ಳಿಯಪ್ಪಾಸ್ ಗ್ರೂಪ್ ಮತ್ತು ಜೆ.ಎಸ್. ಎಸ್. ಆರ್.ಡಬ್ಲ್ಯು.ಎ. ಕ್ರಿಕೆಟ್ ಕ್ಲಬ್ ಜೊತೆಗೆ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಜೆ.ಎಸ್.ಎಸ್. ಆರ್.ಡಬ್ಲ್ಯು.ಎ. ಕ್ಲಬ್ ಅವರು ಜಯವನ್ನು ಸಾಧಿಸಿ, ಸತೀಶ್ ಎಚ್.ಎಂ. ಅವರು ಪಂದ್ಯ ಶ್ರೇಷ್ಠರಾದರು.

ಜೆ.ಎಸ್.ಎಸ್. ಆರ್.ಡಬ್ಲ್ಯು.ಎ. ಕ್ಲಬ್ ಮತ್ತು ಕರ್ನಾಟಕ ಇಲೆವೆನ್ ಕ್ರಿಕೆಟ್ ತಂಡ, ಗುರ್‌ಗಾಂವ್ ನಡುವೆ ಫೈನಲ್ ಪಂದ್ಯ ರೋಚಕವಾಗಿ ನಡೆಯಿತು. 2011ರ ಸಾಲಿನ ಅಂಬಿಕೇಶ್ ಮೆಮೋರಿಯಲ್ ಪ್ರಶಸ್ತಿಯು ಜೆ.ಎಸ್.ಎಸ್. ಆರ್‌ಡಬ್ಲ್ಯು.ಎ. ಕ್ಲಬ್ ಅವರ ಪಾಲಾಯಿತು. ಸುರೇಶ್ ಎಚ್.ಎಂ. ಅವರು ಪಂದ್ಯ ಶ್ರೇಷ್ಠರಾದರು.

ಪಂದ್ಯ ಶ್ರೇಷ್ಠ, ಉತ್ತಮ ಬ್ಯಾಟುಗಾರ, ಉತ್ತಮ ಬೌಲರ್ ಹಾಗೂ ಪಂದ್ಯ ಸರಣಿ ಶ್ರೇಷ್ಠರಿಗೆ ಬಹುಮಾನಗಳನ್ನು ಡಾ. ವೆಂಕಟಾಚಲ ಹೆಗಡೆ, ಹರಿಶ್ಚಂದ್ರ ಬಂಟ್ವಾಳ್, ಹನುಮೇಗೌಡ ಹಾಗೂ ರಂಗನಾಥ್ ಅವರುಗಳು ಪ್ರಾಯೋಜಿಸಿದ್ದಾರೆ.



ರನ್ನರ್ ಅಪ್ ವಿಜೇತ – ಕರ್ನಾಟಕ ಇಲೆವೆನ್ ಕ್ರಿಕೆಟ್ ತಂಡ, ಗುರ್‌ಗಾಂವ್

Delhi Karnataka Sangha's Abhimatha Monthly,
March-2011, Price Rs.1/- RNI Regn. No. 53405/91, DL-SW-15/4016/10-11-12
Printout Date : March 8th / 9th, Postal Date :10th / 11th, Total Pages-24

# ದೆಹಲಿ ಕರ್ನಾಟಕ ಸಂಘ

ಸೆಕ್ಟರ್–12, ಆರ್.ಕೆ. ಪುರಂ, ನವದೆಹಲಿ–110022

"ಹೆಣ್ಣು ಎಂದರೆ ಬರೀ ಶಬ್ದವಲ್ಲ, ಒಂದು ಆಕೃತಿಯಲ್ಲ, ಒಂದು ಕಲ್ಪನೆಯಲ್ಲ, ಜಗದ ಶಕ್ತಿ ಎಂಬುದು ಸುಳ್ಳಲ್ಲ!"

## "ಮಹಿಳಾ ದಿನಾಚರಣೆ"

ದಿನಾಂಕ : 19.03.2011

ಸಮಯ : ಸಾಯಂಕಾಲ 5.00ಗಂಟೆಗೆ

ಸ್ಥಳ : ಸಂಘದ ಸಭಾಂಗಣ

ಅಧ್ಯಕ್ಷತೆ
ಬಿ. ಜಯಶ್ರೀ
ರಾಜ್ಯಸಭಾ ಸದಸ್ಯರು ಹಾಗೂ ಖ್ಯಾತ ರಂಗಕರ್ಮಿ

ಮುಖ್ಯ ಅತಿಥಿ
ಡಾ. ಚಂದ್ರಮ ಎಸ್. ಕಣಗಲಿ
ಉಪನಿವಾಸಿ ಆಯುಕ್ತರು, ಕರ್ನಾಟಕ ಭವನ

"ಮಹಿಳಾ ಡೊಳ್ಳು ಕುಣಿತ"
ಇಂದ್ರಕಲಾ ಮತ್ತು ತಂಡ, ಸಾಗರ,
ಶಿವಮೊಗ್ಗ ಜಿಲ್ಲೆ ಇವರಿಂದ
ಅಲ್ಲದೇ

ದೆಹಲಿಯ ವಿವಿಧ ಕನ್ನಡ ಸಂಘ ಸಂಸ್ಥೆಗಳ
ಮಹಿಳೆಯರಿಂದ
ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು
ಹಾಗೂ
ದೆಹಲಿಯ ಮಹಿಳಾ ಕಲಾವಿದರ ಚಿತ್ರಕಲಾ
ಪ್ರದರ್ಶನ
ಮಾರ್ಚ್ 17ರಿಂದ 19ರವರೆಗೆ



ನೀವೂ ಬನ್ನಿ, ಇತರರನ್ನೂ ಕರೆತನ್ನಿ

ಡಾ. ವೆಂಕಟಾಚಲ ಹೆಗಡೆ
ಅಧ್ಯಕ್ಷರು

ಸಿ.ಎಂ. ನಾಗರಾಜ
ಪ್ರಧಾನ ಕಾರ್ಯದರ್ಶಿ

Editor: Smt.Usha Bharatadri, Printed & Published by C.M.Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-97, Okhla Industrial Area, Phase-I, New Delhi-110020, Tel: 26815778, 40545298,